UNIVERSAL LIBRARY
OU_198233
UNIVERSAL LIBRARY

ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರಪುಸ್ತಕಮಾಲೆ—೧೯

# ಇಂಗ್ಲೆಂಡಿನ ರಾಜಕೀಯ ಬೆಳವಣಿಗೆ

ಸಿ. ಜಿ. ಸ್ವಾಮಿನಾಥನ್, ಎಂ. ಎ.

K84
M96—
No-19

[illegible] ಪ್ರೆಸ್
ಮೈಸೂರು
೧೯೪೦

ಬೆಲೆ: ೩ ಆಣೆ

ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರಪುಸ್ತಕಮಾಲೆ—೧೯

# ಇಂಗ್ಲೆಂಡಿನ ರಾಜಕೀಯ ಬೆಳವಣಿಗೆ

ಪಿ. ಜಿ. ಸತ್ಯಗಿರಿನಾಥನ್, ಎಂ.ಎ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

ಮೈಸೂರು

೧೯೪೦

ಶ್ರೀ ಪಂ. ಎ. ಪ್ರೆ. ಮೈ. — ಮೊದಲನೆಯ ಮುದ್ರಣ,
೧೫೦೫ ಪ್ರತಿಗಳು, ೧೫-೮-೧೯೪೦.

# ಮುನ್ನುಡಿ

ಮೈಸೂರು ವಿಶ್ವವಿದ್ಯಾನಿಲಯದ ಮೊದಲನೆಯ ಚಾನ್ಸಲರವರಾದ ಆಳಿದ ಮಹಾಸ್ವಾಮಿಯವರಾದ ಶ್ರೀ ಕೃಷ್ಣರಾಜ ಒಡೆಯರ್ ಬಹದೂರ್ ಅವರು ಮೊದಲನೆಯ ಸೆನೆಟ್ ಸಭೆಯ ಪ್ರಾರಂಭೋತ್ಸವದ ಭಾಷಣದಲ್ಲಿಯೂ, ಪುನಃ ಮೊದಲನೆಯ ಕಾನ್ವೊಕೇಷನ್ ಮಹೋತ್ಸವದ ಭಾಷಣದಲ್ಲಿಯೂ ವಿಶ್ವವಿದ್ಯಾನಿಲಯದ ಪಾಲಿಗೆ ಹಲವು ಕರ್ತವ್ಯಗಳನ್ನು ಅಪ್ಪಣೆಮಾಡಿದರು. ಅವುಗಳಲ್ಲಿ ವಿಶೇಷವಾದವು ಇವೆರಡು: ಒಳ್ಳೆಯ ಕನ್ನಡದಲ್ಲಿ ಬರೆದ ಪುಸ್ತಕಗಳ ಪ್ರಕಟನೆ, ಹಾಗೂ ಕನ್ನಡ ಸಾಹಿತ್ಯಕ್ಕೆ ಪ್ರೋತ್ಸಾಹ. ಮತ್ತು ಶ್ರೀಮನ್ಮಹಾರಾಜರವರ ಪ್ರಜೆಗಳಲ್ಲಿ ಯಾರು ಕಾರಣಾಂತರಗಳಿಂದ ಕ್ರಮಬದ್ಧವಾದ ಶಿಕ್ಷಣಶಿಸ್ತುಗಳಲ್ಲಿ ಭಾಗವಹಿಸಿ ಪರೀಕ್ಷೆಗಳಿಗೆ ಕೂಡಲು ಶಕ್ತರಲ್ಲವೋ ಅಂಥವರಲ್ಲಿ ಜ್ಞಾನಪ್ರಸಾರ ಮಾಡುವುದು; ಅಲ್ಲದೆ ಮೈಸೂರು, ಬೆಂಗಳೂರು ಈ ಎರಡು ಹಿರಿಯ ಪಟ್ಟಣಗಳಲ್ಲಿ ದೊರಕುವ ವಿದ್ಯಾಭ್ಯಾಸಾನುಕೂಲ್ಯಗಳನ್ನು ಪಡೆದಿಲ್ಲದ, ಸಂಸ್ಥಾನದ ದೂರಪ್ರದೇಶಗಳಲ್ಲಿ ವಾಸಿಸುವ ಜನರಲ್ಲಿ ಉಚ್ಚ ವರ್ಗದ ಸಂಸ್ಕೃತಿಯನ್ನು ಹರಡುವುದು.

ವಿಶ್ವವಿದ್ಯಾನಿಲಯವು ಸ್ಥಾಪಿತವಾದಂದಿನಿಂದಲೂ ಈ ಎರಡು ಮುಖ್ಯ ಧ್ಯೇಯಗಳನ್ನು ತನ್ನ ಮುಂದೆ ತಪ್ಪದೆ ನಿಲ್ಲಿಸಿಕೊಂಡಿದೆ. ಅದರ ಕನ್ನಡ ಪ್ರಕಟನ ಶಾಖೆಯು ಕೆಲವು ಪ್ರಸಿದ್ಧ ಹಳಗನ್ನಡ ಕಾವ್ಯಗಳನ್ನು ಎಚ್ಚರಿಕೆಯಿಂದ ಪರಿಷ್ಕರಿಸಿ ಅಚ್ಚುಹಾಕಿಸಿದೆ; ಅಲ್ಲದೆ, ಸಾಹಿತ್ಯ ವಿಜ್ಞಾನ ವಿಷಯಗಳನ್ನು ಕುರಿತ ಕೆಲವು ಲಘು ಪುಸ್ತಕಗಳನ್ನೂ ಹೊರತಂದಿದೆ. ಪ್ರಚಾರೋಪನ್ಯಾಸ ಸಮಿತಿಯವರು ಸಂಸ್ಥಾನದ ಎಲ್ಲ ಭಾಗಗಳ ಅನೇಕ ಕೇಂದ್ರಗಳಲ್ಲಿ ಹೆಚ್ಚಾಗಿ ಕನ್ನಡದಲ್ಲಿಯೇ ಉಪನ್ಯಾಸಗಳನ್ನು ಏರ್ಪಡಿಸುತ್ತಿದ್ದಾರೆ.

ಇತ್ತೀಚೆಗೆ ಒಂದು ಫಲದಾಯಕವಾದ ಕಾರ್ಯಕ್ರಮ ಬೆಳೆದು ಬರುತ್ತಿದೆ. ವಿಷಯ ಒಂದೊಂದಕ್ಕೆ ಒಂದೊಂದರಂತೆ ಬಿಡಿ ಉಪನ್ಯಾಸ

ವನ್ನು ಕೊಡಿಸುವುದರ ಜೊತೆಗೆ, ವಿಶ್ವವಿದ್ಯಾನಿಲಯದ ಅಧ್ಯಾಪಕ ಸಂಘದ ಸಹಕಾರದಿಂದ ಸಂಸ್ಕೃತಿ ಸಪ್ತಾಹಗಳೆಂದು ಈಗಾಗಲೇ ಕರೆಯಲ್ಪಡುತ್ತಿರುವ ಉಪನ್ಯಾಸಮಾಲೆಗಳನ್ನು ಇಡಿಸಲಾಗುತ್ತಿದೆ. ಒಂದೇ ಊರಿನಲ್ಲಿ ಐದಾರು ದಿನ ಭಾಷಣ ಕಾವ್ಯವಾಚನ ಸಂಗೀತಾದಿಗಳು ಜರುಗುತ್ತವೆ; ಉಪನ್ಯಾಸಗಳು ಸಾಹಿತ್ಯ ವಿಜ್ಞಾನ ಸಮಾಜವೆಲ್ಲಕ್ಕೂ ಸಂಬಂಧಿಸಿರುತ್ತವೆ. ಈ ಸಪ್ತಾಹಗಳು ನೆರವೇರಿದ ದೊಡ್ಡಬಳ್ಳಾಪುರ, ದಾವಣಗೆರೆ, ಕೋಲಾರ ಮುಂತಾದ ಎಲ್ಲ ಕಡೆಗಳಿಂದಲೂ ಅವಕ್ಕೆ ಬಹಳ ಮನ್ನಣೆ ದೊರೆತಿದೆ.

ಈಗ ಅತಿ ಹೊಸದಾದ ಏರ್ಪಾಡಾವುದೆಂದರೆ: ಒಂದೆರಡು ಊರುಗಳನ್ನು ಆರಿಸಿಕೊಂಡು, ಅಲ್ಲಿಗೆ ಒಂದು ವರ್ಷದಲ್ಲಿ ಹಲವು ಬಾರಿ ಹೋಗಿ, ಕೆಲವು ವಿಷಯಗಳಲ್ಲಿ ಒಂದೊಂದನ್ನೂ ಕುರಿತು ನಾಲ್ಕಾರು ಉಪನ್ಯಾಸಗಳನ್ನು ಹೇಳುವ ಯೋಜನೆ. ಅದರಿಂದ ಆ ಊರುಗಳ ಜನರಿಗೆ ಅನಲ್ಪಕಾಲ ಎಡೆಬಿಡದೆ ಜ್ಞಾನಬೋಧೆ ಸಿಕ್ಕುವುದು. ಪ್ರತ್ಯಕ್ಷ ಕೇಳಿ ಉಪಯೋಗ ಪಡೆದ ಸಭಿಕರ ಗುಂಪಿನಿಂದ ಆಚೆಗೂ ಕೂಡ ಈ ಭಾಷಣಮಾಲೆಗಳ ಪ್ರಯೋಜನ ಹರಡಲೆಂಬ ಉದ್ದೇಶದಿಂದ ಅವುಗಳನ್ನು ಈ ರೀತಿ ಚಿಕ್ಕ ಹೊತ್ತಗೆಗಳಾಗಿ ಪ್ರಕಟಿಸಿದೆ.

ಆಳಿದ ಘನ ಪ್ರಭುಗಳವರು ನಮ್ಮ ವಿಶ್ವವಿದ್ಯಾನಿಲಯಕ್ಕೆ ಎರಡು ಪವಿತ್ರ ಕರ್ತವ್ಯಗಳನ್ನು ನೇಮಿಸಿದರಷ್ಟೆ: ಸುಲಭ ಸಮಂಜಸ ಕನ್ನಡದಲ್ಲಿ ರಚಿಸಿದ ಗ್ರಂಥಗಳ ಪ್ರಕಟನೆ; ಜನತೆಯಲ್ಲಿ ಉತ್ತಮ ಬಗೆಯ ಸಂಸ್ಕೃತಿಯ ಪ್ರಸಾರ. ಆ ಎರಡು ಕರ್ತವ್ಯಗಳನ್ನೂ ಈ ಮಾರ್ಗವಾಗಿ ಒಂದೇ ಸಾರಿ ಸಾಧಿಸಬಹುದೆಂಬುದೇ ಹೀಗೆ ಉಪನ್ಯಾಸಗಳನ್ನು ಕೊಟ್ಟು, ಲಘು ಪುಸ್ತಕಗಳನ್ನು ಸಿದ್ಧಮಾಡಿದವರ ನಿರೀಕ್ಷೆ ಮತ್ತು ಹೆಬ್ಬಯಕೆ.

ವಿಶ್ವವಿದ್ಯಾನಿಲಯ, ಮೈಸೂರು,
೧೫—೮—೧೯೪೦.

**ಎನ್. ಎಸ್. ಸುಬ್ಬರಾವ್.**

# ಪೀಠಿಕೆ

ಚರಿತ್ರೆಯು ರಾಜ್ಯಶಾಸ್ತ್ರವನ್ನು ಅನುಭವದ ಮೂಲಕ ಬೋಧಿಸುತ್ತದೆ. ಮುಂದುವರಿದಿರುವ ಜನಾಂಗಗಳ ಚರಿತ್ರೆಯನ್ನೋದುವುದೇ ಒಂದು ರೀತಿಯ ರಾಜಕೀಯ ಶಿಕ್ಷಣ. ವಿಚಕ್ಷಣೆಯಿಂದಲೂ ವ್ಯವಸ್ಥಿತವಾದ ಪ್ರಯತ್ನದಿಂದಲೂ ಒಂದು ದೇಶವು ಹೇಗೆ ಏಳಿಗೆಗೆ ಬರಬಹುದೆಂಬುದಕ್ಕೆ ಇಂಗ್ಲೆಂಡಿನ ಚರಿತ್ರೆಯು ಒಂದು ಉತ್ತಮ ನಿದರ್ಶನವಾಗಿದೆ. ಸ್ತಿಮಿತ ಹೊಂದಿದ ಪ್ರಗತಿಯನ್ನು ಸಾಧಿಸುವುದರಲ್ಲಿ ಆಂಗ್ಲೇಯರು ಅಗ್ರಗಣ್ಯರು. ಅಮೂಲ್ಯವಾದ ನಮ್ಮ ಪೂರ್ವಿಕ ಸಂಸ್ಕೃತಿಯನ್ನುಳಿಸಿಕೊಂಡು ಸ್ವಾತಂತ್ರ್ಯವನ್ನೂ ಅಭ್ಯುದಯವನ್ನೂ ಸಾಧಿಸಬೇಕಾದ ನಮಗೆ ಅವರು ಆದರ್ಶಪ್ರಾಯರಾಗಿದ್ದಾರೆ.

೧೫೦೦ ವರ್ಷಗಳ ಹಿಂದೆ ಆಂಗ್ಲೇಯರಾಗಲಿ ಇಂಗ್ಲೆಂಡೆಂಬ ಹೆಸರಾಗಲಿ ಇರಲಿಲ್ಲ. ಇಂದು ಅವರು ಪ್ರಪಂಚದ ಜನಾಂಗಗಳಲ್ಲಿ ಅತಿಶಯವಾದ ಮನ್ನಣೆಯನ್ನು ಪಡೆದಿದ್ದಾರೆ. ಈ ಕಷ್ಟ ಕಾಲದಲ್ಲಿ ಕೂಡ ಆರ್ಥಿಕ ಸೌಕರ್ಯವನ್ನು ಅನುಭವಿಸುತ್ತಿದ್ದಾರೆ. ಕ್ರಮಕ್ರಮವಾಗಿ ಶಿಸ್ತಿನಿಂದ ಬೆಳೆದ ವ್ಯವಸ್ಥಿತವಾದ ಆಡಳಿತ ಪದ್ಧತಿಯು ಅವರ ಜೀವನದಲ್ಲಿ ಬೇರೂರಿದೆ. ವಿಸ್ತೀರ್ಣದಲ್ಲಿ ಅವರ ದೇಶವು ನಮ್ಮ ಮೈಸೂರು ಸಂಸ್ಥಾನದ ಒಂದೂ ಮುಕ್ಕಾಲರಷ್ಟು ಮಾತ್ರ ಇದ್ದರೂ ಅವರ ಆಡಳಿತ ವ್ಯಾಪ್ತಿ ಅಸಾಧಾರಣವಾಗಿದೆ; ಭೂಮಂಡಲದ ನಾಲ್ಕನೆಯ ಒಂದು ಭಾಗ ಬ್ರಿಟಿಷ್ ರಾಷ್ಟ್ರಗಳ ಸಮುದಾಯದಲ್ಲಿ ಅಡಗಿದೆ. ರಾಜಕೀಯ ಜೀವನದಲ್ಲಿ ಅಥವಾ ವ್ಯಾಪಾರದಲ್ಲಿ, ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಆಂಗ್ಲೇಯರ ಪ್ರಭಾವಕ್ಕೆ

ಒಳಪಡದ ದೇಶವೇ ಅಪರೂಪ. ಈ ಪ್ರಬಲ ಜನಾಂಗದ ಬೆಳವಣಿಗೆಯ ಇತಿಹಾಸವನ್ನು ಪರಿಶೀಲಿಸುವುದರಿಂದ ರಾಜ್ಯ ಶಾಸ್ತ್ರದ ಅರಿವು ಚುರುಕಾಗುವುದರಲ್ಲಿ ಸಂದೇಹವಿಲ್ಲ.

ಈ ವಿಚಾರದಲ್ಲಿ ಸಕಲೇಶಪುರದ ಮತ್ತು ಮಧುಗಿರಿಯ ಮಹಾಜನರ ಮುಂದೆ ಮಾಡಿದ ಉಪನ್ಯಾಸಗಳನ್ನು ಸ್ವಲ್ಪ ವಿಸ್ತರಿಸಿ ಈಗ ಪುಸ್ತಕ ರೂಪದಲ್ಲಿ ಬರೆಯಲಾಗಿದೆ. ಇದನ್ನು ಪ್ರಕಟಿಸಲು ಅವಕಾಶವಿತ್ತ ವಿಶ್ವವಿದ್ಯಾನಿಲಯದ ಮುಖ್ಯ ಅಧಿಕಾರಿಗಳಿಗೆ ನಾನು ಬಹಳ ಕೃತಜ್ಞನಾಗಿರುತ್ತೇನೆ. ಅನೇಕ ಉಪಯುಕ್ತವಾದ ಸಲಹೆಗಳನ್ನು ಕೊಟ್ಟ ನನ್ನ ಮಿತ್ರರಾದ ಶ್ರೀಮಾನ್ ಜಿ. ಹನುಮಂತರಾಯರಿಗೂ ಸಂಪಾದಕ ಮಂಡಲಿಯ ಇತರ ಸದಸ್ಯರಿಗೂ ನನ್ನ ಪ್ರೀತಿಪೂರ್ವಕವಾದ ವಂದನೆಗಳು.

**ಪಿ. ಜಿ. ಸತ್ಯಗಿರಿನಾಥನ್.**

# ವಿಷಯಾನುಕ್ರಮಣಿಕೆ


೧. ಜನಾಂಗ ರಚನೆ ....... ೧

೨. ಐಕಮತ್ಯ ಮತ್ತು ಶಿಸ್ತು ....... ೮

೩. ಪಾರ್ಲಿಮೆಂಟಿನ ಜನನ ....... ೧೩


೪. ಪಾರ್ಲಿಮೆಂಟಿನ ಶಿಕ್ಷಣ ....... ೧೮

೫. ಪಾರ್ಲಿಮೆಂಟಿನ ಕ್ರಾಂತಿ ....... ೨೬

೬. ಪ್ರಜಾಪ್ರಭುತ್ವ ಸಾಧನೆ ....... ೩೩

೭. ಸುಧಾರಣೆ ಮತ್ತು ಸಾಮ್ರಾಜ್ಯ ....... ೪೬

೮. ಇಂದಿನ ಸಮಸ್ಯೆಗಳು ....... ೫೭




ಬ್ರಿಟಿಷ್ ರಾಷ್ಟ್ರಸಮುದಾಯ

# ಇಂಗ್ಲೆಂಡಿನ ರಾಜಕೀಯ ಬೆಳವಣಿಗೆ

## ೧. ಜನಾಂಗ ರಚನೆ

ಯೂರೋಪ್ ಖಂಡದ ವಾಯುವ್ಯದಲ್ಲಿ ಗ್ರೇಟ್ ಬ್ರಿಟನ್ ಮತ್ತು ಐರ್ಲೆಂಡ್ ಎಂಬ ಬ್ರಿಟಿಷ್ ದ್ವೀಪಗಳಿವೆ. ೨೧ ಮೈಲಿಗಳ ಅಗಲವುಳ್ಳ ಕಡಲ್ಗಾಲುವೆಯೊಂದು ಗ್ರೇಟ್ ಬ್ರಿಟನ್ನನ್ನು ಯೂರೋಪಿನ ಭೂಭಾಗದಿಂದ ಪ್ರತ್ಯೇಕಿಸುತ್ತದೆ. ಗ್ರೇಟ್ ಬ್ರಿಟನ್ನಿನ ದಕ್ಷಿಣ ಭಾಗವನ್ನು ಇಂಗ್ಲೆಂಡ್ ಎಂದೂ ಉತ್ತರ ಭಾಗವನ್ನು ಸ್ಕಾಟ್ಲೆಂಡ್ ಎಂದೂ ಕರೆಯುವರು. ೨೩೦ ವರ್ಷಗಳಿಂದ ಈ ಎರಡು ಭಾಗಗಳೂ ಒಂದಾಗಿರುವುದರಿಂದ 'ಬ್ರಿಟನ್' ಮತ್ತು 'ಬ್ರಿಟಿಷರು' ಎಂಬುದಕ್ಕೆ ಬದಲಾಗಿ 'ಇಂಗ್ಲೆಂಡ್' ಮತ್ತು 'ಇಂಗ್ಲಿಷರು' ಅಥವಾ 'ಆಂಗ್ಲೇಯರು' ಎಂದು ಸಾಮಾನ್ಯವಾಗಿ ಹೇಳುವುದುಂಟು. ಆದರೆ ಈ ಶಬ್ದಗಳ ಅರ್ಥವ್ಯತ್ಯಾಸವನ್ನು ನೆನಪಿನಲ್ಲಿಡುವುದು ಆವಶ್ಯಕ.

ಕ್ರಿಸ್ತಶಕದ ಮೊದಲನೆಯ ನಾಲ್ಕು ಶತಮಾನಗಳಲ್ಲಿ ಬ್ರಿಟನ್ನು ರೋಮನ್ನರ ಚಕ್ರಾಧಿಪತ್ಯದ ಒಂದು ಪ್ರಾಂತವಾಗಿತ್ತು. ಅವರು ದೇಶದಲ್ಲೆಲ್ಲ ಪಟ್ಟಣಗಳನ್ನೂ ರಸ್ತೆಗಳನ್ನೂ ಏರ್ಪಡಿಸಿ, ವ್ಯವಸಾಯಕ್ರಮವನ್ನು ಉತ್ತಮಗೊಳಿಸಿ, ಬ್ರಿಟಿಷರಿಗೆ ಶಾಂತಿ ಸೌಕರ್ಯಗಳನ್ನು ಒದಗಿಸಿಕೊಟ್ಟರು. ಆದರೆ ಐದನೆಯ ಶತಮಾನದ ಆದಿಭಾಗದಲ್ಲಿ ಬಲಿಷ್ಠರಾದ ಶತ್ರುಗಳು ತಮ್ಮ ತಾಯಿನಾಡಿನ ಮೇಲೆ ಬಿದ್ದಾಗ ರೋಮನ್ನರು ಬ್ರಿಟನ್ನನ್ನು ಬಿಟ್ಟು ಹೋಗಬೇಕಾಯಿತು. ಬ್ರಿಟಿಷರಿಗೆ ನಾಗರಿಕ ಜನರ ಸಂಪರ್ಕ ತಪ್ಪಿತು.

ಐದನೆಯ ಶತಮಾನದ ಮಧ್ಯಭಾಗದಲ್ಲಿ ಉತ್ತರ ಜರ್ಮನಿಯಿಂದ ಹಲವು ಆಂಗ್ಲೇಯ ಜನರು ತಂಡತಂಡವಾಗಿ ಬಂದು ಬ್ರಿಟಿಷರನ್ನು ಸೋಲಿಸಿ ಬ್ರಿಟನ್ನಿನ ಬಹುಭಾಗವನ್ನು ಆಕ್ರಮಿಸಿಕೊಂಡರು. ಅವರು ನೆಲಸಿದ ಭಾಗಕ್ಕೆ ಇಂಗ್ಲೆಂಡ್ ಎಂಬ ಹೆಸರು ಬಂತು. ಜರ್ಮನಿಯಲ್ಲಿದ್ದಾಗ ಈ ಜನರಲ್ಲಿ ದೊರೆತನವಿರಲಿಲ್ಲ. ಇಂಗ್ಲೆಂಡಿನಲ್ಲಿ ನೆಲಸಿದ ಮೇಲೆ ಇವರಲ್ಲಿ ಮುಖ್ಯರಾದ ಸೇನಾನಾಯಕರು ಒಂದೊಂದು ಭಾಗಕ್ಕೆ ಒಬ್ಬೊಬ್ಬರು ದೊರೆಗಳಾದರು. ನಾಲ್ಕಾರು ಚಿಕ್ಕ ಚಿಕ್ಕ ರಾಜ್ಯಗಳು ಸ್ಥಾಪಿತವಾದುವು.

ಸುಮಾರು ನೂರು ವರ್ಷಗಳನಂತರ ಆಗಸ್ಟಿನ್ ಎಂಬ ಪ್ರಸಿದ್ಧ ಕ್ರೈಸ್ತಮತಬೋಧಕನು ಇಂಗ್ಲೆಂಡಿಗೆ ಬಂದು ತನ್ನ ಮತಪ್ರಚಾರವನ್ನಾರಂಭಿಸಿದನು. ಏಳನೆಯ ಶತಮಾನದಲ್ಲಿ ಈ ರಾಜ್ಯಗಳೆಲ್ಲ ಒಂದೊಂದಾಗಿ ಕ್ರೈಸ್ತಮತವನ್ನು ಅವಲಂಬಿಸಿದುವು. ಇದರ ಫಲವಾಗಿ ಆಂಗ್ಲೇಯರು ವಿದ್ಯೆ ಕಲಿಯುವುದಕ್ಕೂ ಯೂರೋಪಿನ ಇತರ ದೇಶಗಳೊಡನೆ ಬಾಂಧವ್ಯವನ್ನು ಬೆಳೆಸುವುದಕ್ಕೂ ಅವಕಾಶವಾಯಿತು. ಅಲ್ಲದೆ, ಕ್ರೈಸ್ತಮತವು ಒಗ್ಗಟ್ಟು ವ್ಯವಸ್ಥೆಗಳಿಂದ ಕೂಡಿದ ಸಂಸ್ಥೆಯಾಗಿದ್ದುದರಿಂದ ಅದು ಆಂಗ್ಲೇಯರಿಗೆ ರಾಜಕೀಯ ಜೀವನದಲ್ಲಿ ಒಂದು ಮಾದರಿಯಾಯಿತು.

ಬ್ರಿಟನ್ನರನ್ನು ಪೂರ್ಣವಾಗಿ ಅಧೀನಪಡಿಸಿಕೊಂಡ ತರುವಾಯ ಆಂಗ್ಲೇಯ ರಾಜರುಗಳು ತಮ್ಮತಮ್ಮಲ್ಲೇ ಕಾದಾಡಲು ಮೊದಲುಮಾಡಿದರು; ಒಬ್ಬರಾದ ಮೇಲೆ ಒಬ್ಬರು ಪ್ರಾಬಲ್ಯಕ್ಕೆ ಬಂದರು. ಇವರಲ್ಲಿ ವೆಸೆಕ್ಸ್ ರಾಜ್ಯದ ದೊರೆಯು ಅತಿ ಬಲಿಷ್ಠನಾದನು. ಆದರೆ ಈ ಪ್ರಬಲ ರಾಜ್ಯವೂ ಕೂಡ

ಒಂಬತ್ತನೆಯ ಶತಮಾನದಲ್ಲಿ ಡೇನರೆಂಬ ಜನರ ಭಯಂಕರ ವಾದ ದಾಳಿಗೆ ಸಿಕ್ಕಿ ನರಳಿತು. ನಾನೂರು ವರ್ಷಗಳ ಹಿಂದೆ ಆಂಗ್ಲೇಯರು ಬ್ರಿಟನ್ನರನ್ನು ಸಂಪೂರ್ಣವಾಗಿ ಸೋಲಿಸಿ ಅಧೀನಪಡಿಸಿಕೊಂಡಂತೆಯೇ ಈಗ ಡೇನರು ಆಂಗ್ಲೇಯರನ್ನು ಜಯಿಸಿ ಅವರನ್ನು ಅಡಿಯಾಳುಗಳನ್ನಾಗಿ ಮಾಡಿಕೊಳ್ಳುವುದ ರಲ್ಲಿದ್ದರು.

ಆದರೆ ವೆಸೆಕ್ಸಿನ ದೊರೆಯಾದ ಆಲ್ಫ್ರೆಡ್ ಎಂಬ ಮಹಾ ಪುರುಷನು ಡೇನರನ್ನು ತಡೆದು ಇಂಗ್ಲೆಂಡನ್ನು ಕಾಪಾಡಿದನು. ಆಗಿನ ಕಾಲದ ರಾಜರಲ್ಲೆಲ್ಲ ಆಲ್ಫ್ರೆಡ್ ಅತ್ಯಂತ ಪ್ರಭಾವ ಶಾಲಿ. ಇವನು ದೇಶದ ರಕ್ಷಣೆಗಾಗಿ ವ್ಯವಸ್ಥಿತವಾದ ಸೈನ್ಯ ವನ್ನೂ ನೌಕಾದಳವನ್ನೂ ಏರ್ಪಡಿಸಿ, ಪ್ರಜೆಗಳಿಗೆ ಶಾಂತಿ ಸಮೃದ್ಧಿಗಳನ್ನು ಒದಗಿಸಿಕೊಟ್ಟನು. ದೇವಸ್ಥಾನಗಳನ್ನೂ ಪಾಠಶಾಲೆಗಳನ್ನೂ ಸ್ಥಾಪಿಸಿ ಕ್ರೈಸ್ತ ಧರ್ಮಕ್ಕೂ ವಿದ್ಯೆಗೂ ವಿಶೇಷವಾಗಿ ಪ್ರೋತ್ಸಾಹ ಕೊಟ್ಟನು. ಅಲ್ಲದೆ, ಇವನು ಹೆಸರು ವಾಸಿಯಾದ ನ್ಯಾಯವಿಧಾಯಕನಾಗಿದ್ದನು. ಕಾಲಕ್ರಮದಲ್ಲಿ ಇವನು ವೆಸೆಕ್ಸಿಗೆ ಮಾತ್ರವಲ್ಲದೆ ಇಡೀ ಇಂಗ್ಲೆಂಡಿಗೆ ರಾಜನೆಂ ದೆನಿಸಿಕೊಂಡನು.

ಆಲ್ಫ್ರೆಡ್ ರಾಜನು ಗತಿಸಿದ ನೂರು ವರ್ಷಗಳನಂತರ, ಅಂದರೆ ಹತ್ತನೆಯ ಶತಮಾನದ ಕೊನೆಯಲ್ಲಿ, ಅಶಕ್ತರೂ ಅವಿವೇಕಿಗಳೂ ಆದವರು ರಾಜಪದವಿಗೆ ಬಂದರು. ಒಳ ಕಲಹ ಗಳು ತಲೆದೋರಿದುವು. ಇದರಿಂದ ಡೇನರು ಪುನಃ ಬಂದು ಇಂಗ್ಲೆಂಡನ್ನು ಗೆಲ್ಲಲು ಅವಕಾಶವಾಯಿತು. ಪರಾಕ್ರಮಶಾಲಿ ಯಾದ ಕೆನ್ಯೂಟ್ ಎಂಬ ಡೇನಿಷ್ ರಾಜನು ಇಂಗ್ಲೆಂಡನ್ನು ಸ್ವಾಧೀನಪಡಿಸಿಕೊಂಡನು. ಇವನು ವಿದೇಶೀಯನಾಗಿದ್ದರೂ

ಆಂಗ್ಲೇಯರ ಹಿತಚಿಂತಕನಾಗಿ ವರ್ತಿಸಿದನು. ಇವನ ಆಡಳಿತ ದಲ್ಲಿ ವ್ಯಾಪಾರವು ಅಭಿವೃದ್ಧಿಯಾಗಿ ರಾಜ್ಯದಲ್ಲಿ ಸುಭಿಕ್ಷ ನೆಲ ಸಿತು. ಆದರೆ ಇವನ ಮಕ್ಕಳು ಬಲಹೀನರಾಗಿದ್ದುದರಿಂದ ಮೂವತ್ತು ವರ್ಷಗಳೊಳಗೆ ಈ ಡೇನಿಷ್ ಆಳಿಕೆ ಕೊನೆ ಗಂಡಿತು.

ಆಲ್ಫ್ರೆಡ್ ರಾಜನ ಸಂತತಿಯವರು ಪುನಃ ಪಟ್ಟಕ್ಕೆ ಬಂದರು. ಆದರೆ ಪರಾಕ್ರಮ ಮತ್ತು ಆಡಳಿತ ವಿಚಕ್ಷಣೆಗಳು ಮಾತ್ರ ಅವರಲ್ಲಿ ಇರಲಿಲ್ಲ. ೧೦೬೬ ರಲ್ಲಿ ನಾರ್ಮಂಡಿಯ ಪ್ರಭುವಾದ ವಿಲಿಯಮ್ ಹಲವು ವೀರರೊಡನೆ ಬಂದು ಇಂಗ್ಲೆಂಡನ್ನು ಆಕ್ರಮಿಸಿ ತನ್ನ ಮನೆತನವನ್ನು ಪ್ರತಿಷ್ಠಿಸಿದನು.

ಇಂಡಿಯಾ ದೇಶವು ಪದೇ ಪದೇ ಪರದೇಶದವರ ಅಧೀನಕ್ಕೆ ಒಳಪಟ್ಟಂತೆಯೇ, ಬ್ರಿಟನ್ ಕೂಡ ಒಂದು ಸಾವಿರ ವರ್ಷಗಳ ಕಾಲದಲ್ಲಿ ರೋಮನ್ನರು, ಆಂಗ್ಲೇಯರು, ಡೇನರು, ನಾರ್ಮ ನ್ನರು ಎಂಬ ನಾಲ್ಕು ಬಗೆಯ ಪರದೇಶೀಯರ ಆಕ್ರಮಣಕ್ಕೆ ಗುರಿಯಾಯಿತು. ಕೇವಲ ಹನ್ನೆರಡು ಸಾವಿರ ನಾರ್ಮನ್ ವೀರರು ಹದಿನೈದು ಲಕ್ಷ ಆಂಗ್ಲೇಯರನ್ನು ಅಧೀನಪಡಿಸಿಕೊಂ ಡರು. ಐಕಮತ್ಯವಿಲ್ಲದ ಪ್ರಜಾಸಂಖ್ಯೆ ಎಷ್ಟಿದ್ದರೇನು ?

ನಾರ್ಮನ್ನರ ರಾಜ್ಯಾಡಳಿತವನ್ನು ವಿಚಾರ ಮಾಡುವುದಕ್ಕೆ ಮೊದಲು, ಆರುನೂರು ವರ್ಷಗಳ ಕಾಲ ಇಂಗ್ಲೆಂಡಿನಲ್ಲಿ ನಡೆದು ಬಂದ ಆಂಗ್ಲೇಯರ ರಾಜಕೀಯ ಕ್ರಮವನ್ನು ಸಂಗ್ರಹವಾಗಿ ವಿವರಿಸುವುದು ಆವಶ್ಯಕ. ಜರ್ಮನಿಯಿಂದ ಬಂದ ಆಂಗ್ಲೇ ಯರು ಸ್ವಾತಂತ್ರ್ಯಪ್ರೇಮಿಗಳು. ಸಾರ್ವಜನಿಕ ಕಾರ್ಯಗಳಲ್ಲಿ ಭಾಗವಹಿಸುವುದು ಪ್ರತಿಯೊಬ್ಬ ಪ್ರಜೆಯ ಆಜನ್ಮಸಿದ್ಧವಾದ ಹಕ್ಕು ಮಾತ್ರವಲ್ಲದೆ ಬಾಧ್ಯತೆಯೂ ಹೌದೆಂದು ಅವರು ಭಾವಿಸಿ

ದ್ದರು. ಅವರ ನಿತ್ಯ ಜೀವನದಲ್ಲಿ ಅನೇಕ ದರ್ಜೆಯ ಪ್ರಜಾ ಸಮಿತಿಗಳು ಅತಿಮುಖ್ಯ ಪಾತ್ರವನ್ನು ವಹಿಸಿದ್ದುವು.

ಪ್ರತಿಯೊಂದು ಗ್ರಾಮದಲ್ಲೂ ಸ್ವತಂತ್ರರಾದ ಗ್ರಾಮಸ್ಥರನ್ನೊಳಕೊಂಡ ಸಮಿತಿಯೊಂದು ತಿಂಗಳಿಗೊಂದು ಸಲ ಸಭೆ ಸೇರುತ್ತಿತ್ತು. ಪ್ರಾಂತ ಪ್ರತಿನಿಧಿಗಳ ಚುನಾವಣೆ, ತೆರಿಗೆಯ ನಿರ್ಣಯ, ಅಪರಾಧಿಗಳ ಬಂಧನ, ನ್ಯಾಯವಿಚಾರಣೆ—ಇವೇ ಮೊದಲಾದ ಸಾರ್ವಜನಿಕ ಕೆಲಸಗಳನ್ನು ಇದು ನಿರ್ವಹಿಸುತ್ತಿತ್ತು.[1]

ಹಲವು ಗ್ರಾಮಗಳನ್ನೊಳಕೊಂಡ ಹನ್ಡ್ರೆಡ್‌ಗಳೆಂಬ ಭಾಗಗಳು ಆಗ ಇಂಗ್ಲೆಂಡಿನಲ್ಲಿದ್ದುವು. ಇವುಗಳಲ್ಲಿ ಕೂಡ ಒಂದೊಂದರಲ್ಲಿ ಒಂದೊಂದು ಸಮಿತಿ ಆಡಳಿತವನ್ನು ನಡೆಸುತ್ತಿತ್ತು. ಮುಖ್ಯ ಜಮೀನುದಾರರೂ, ಗ್ರಾಮಗಳ ಪಾದ್ರಿಗಳೂ, ಹೆಗ್ಗಡೆಗಳೂ ಮತ್ತು ಪ್ರತಿಯೊಂದು ಗ್ರಾಮಸಮಿತಿಯಿಂದ ಚುನಾಯಿಸಲ್ಪಟ್ಟ ನಾಲ್ಕು ನಾಲ್ಕು ಜನ ಪ್ರಮುಖರೂ ಇವರ ಸದಸ್ಯರಾಗಿದ್ದರು. ಈ ಹನ್ಡ್ರೆಡ್ ಸಮಿತಿಯು ಸಿವಿಲ್ ಮತ್ತು ಕ್ರಿಮಿನಲ್ ವಿಚಾರಣೆಗಳನ್ನು ನಡೆಸುತ್ತಿತ್ತು.

---

[1] ಇಂಡಿಯಾ ದೇಶದಲ್ಲಿ ಇದೇ ವಿಧವಾದ ಗ್ರಾಮ ಪಂಚಾಯತಿಗಳು ಪ್ರಾಚೀನಕಾಲದಿಂದ ಸಾರ್ವಜನಿಕ ಕೆಲಸಕಾರ್ಯಗಳನ್ನು ನಿರ್ವಹಿಸುತ್ತಿದ್ದುವು. (Dr. John Matthai : Village Government in British India, Chap. I).

೨೫೦೦ ವರ್ಷಗಳ ಹಿಂದೆ ಭಾರತ ದೇಶದಲ್ಲಿ ಗ್ರಾಮಗಳು ಸ್ಥಳೀಯ ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದುವೆಂದು ಬೌದ್ಧ ಗ್ರಂಥಗಳಿಂದ ವ್ಯಕ್ತವಾಗಿದೆ. (The Cultural Heritage of India, Vol. III : Hindu Politics, by B. K. Sarkar, p. 303).

ಅನೇಕ ಹನ್ಡ್ರೆಡ್‌ಗಳು ಸೇರಿದ ಷೈರ್‌ಗಳೆಂಬ ಹಲವು ಪ್ರಾಂತಗಳು ರಾಜ್ಯದಲ್ಲಡಗಿದ್ದುವು. ಷೈರಿನಲ್ಲಿದ್ದ ಷೈರ್‌ಮೂಟ್ ಎಂಬ ಸಮಿತಿಯು ಆರುತಿಂಗಳಿಗೊಮ್ಮೆ ಸಭೆ ಸೇರುತ್ತಿತ್ತು. ದೊಡ್ಡ ಜಮಾನುದಾರರೂ ಉದ್ಯೋಗಸ್ಥರೂ ಗ್ರಾಮಗಳ ಪ್ರತಿನಿಧಿಗಳೂ ಇದರ ಸದಸ್ಯರಾಗಿದ್ದರು. ರಾಜನಿಂದ ನೇಮಕವಾದ ಷೆರಿಫ್ ಎಂಬ ಅಧಿಕಾರಿಯು ಷೈರ್‌ಮೂಟಿನ ಅಧ್ಯಕ್ಷನಾಗಿ ಷೈರಿನಲ್ಲಿ ರಾಜಕಾರ್ಯವನ್ನು ನಿರ್ವಹಿಸುತ್ತಿದ್ದನು.

ಮೊದಮೊದಲು ರಾಜ್ಯಗಳು ಚಿಕ್ಕವಾಗಿದ್ದಾಗ ಕೇಂದ್ರದಲ್ಲಿ ಫೋಕ್‌ಮೂಟ್ ಎಂಬ ಜನಸಮುದಾಯದ ಸಮಿತಿಯೊಂದಿತ್ತು.[2] ಯುದ್ಧ, ಸಂಧಿ, ಸಾರ್ವಜನಿಕ ಸಂಪ್ರದಾಯಗಳ ಬದಲಾವಣೆ ಮುಂತಾದ ಮುಖ್ಯ ವಿಷಯಗಳಲ್ಲಿ ರಾಜನು ಇದರ ಒಪ್ಪಿಗೆಯನ್ನು ಪಡೆಯಬೇಕಾಗಿತ್ತು. ವಿಸ್ತೀರ್ಣದಲ್ಲೂ ಐಶ್ವರ್ಯದಲ್ಲೂ ರಾಜ್ಯಗಳು ವಿಶೇಷವಾಗಿ ಬೆಳೆದನಂತರ ಈ ಪದ್ಧತಿಯು ಸಾಧ್ಯವಾಗಲಿಲ್ಲ. ಈ ಸಮಿತಿಯ ಕಾರ್ಯಗಳ ಬಹುಭಾಗವನ್ನು ಹಿರಿಯರ ಸಭೆಗೆ ವಹಿಸಿಕೊಡಲಾಯಿತು.

---

[2] ಆರ್ಯಾವರ್ತದಲ್ಲಿ ವೇದಗಳ ಕಾಲದಲ್ಲಿಯೇ ಇದೇ ವಿಧವಾದ ಪ್ರಜಾಸಮಿತಿಯಿತ್ತು. ಈ ರಾಷ್ಟ್ರಸಮಿತಿಗೂ ರಾಜನಿಗೂ ಅನ್ಯೋನ್ಯ ಸಂಬಂಧವಿತ್ತು. ರಾಜನನ್ನು ಆಯುವುದರಲ್ಲಿಯೂ ಸಂಧಿವಿಗ್ರಹ ನೀತಿರೀತಿಗಳಲ್ಲಿಯೂ ಪ್ರಜಾಸಮಿತಿಯು ಮಂತ್ರಾಲೋಚನೆ ನಡೆಯಬೇಕಾಗಿತ್ತು. (Development of Hindu Polity and Political Theories, N. C. Bandyopadhyaya, Vol. I, p. 118.)

ಹೀಗೆಯೇ ಪ್ರಾಚೀನ ಗ್ರೀಕರ ಜೀವನದಲ್ಲೂ ಪ್ರಜಾಸಮಿತಿಗಳು ಪ್ರಾಮುಖ್ಯವನ್ನು ಪಡೆದಿದ್ದದ್ದು ಹೋಮರ್ ಕವಿಯ ಮಹಾಕಾವ್ಯಗಳಿಂದ ವ್ಯಕ್ತವಾಗುತ್ತದೆ.

ಕೇಂದ್ರ ಆಡಳಿತವನ್ನು ರಾಜನೇ ವಹಿಸಿದ್ದನು. ಮೊದ ಮೊದಲು ಆಂಗ್ಲೀಯರು ತಮ್ಮ ರಾಜರನ್ನು ಚುನಾಯಿಸುತ್ತಿದ್ದರು.[3] ಕ್ರಮೇಣ ರಾಜಪದವಿಯು ವಂಶಾನುಗತವಾಯಿತು. ರಾಜನ ವರಮಾನವೂ ಅವನ ಸೇನಾಬಲವೂ ಆಗ ಕಡಿಮೆಯಾಗಿದ್ದುದರಿಂದ ಸಾಮಾನ್ಯವಾಗಿ ಅವನ ಶಕ್ತಿ ಪ್ರಬಲವಾಗಿರಲಿಲ್ಲ.

ರಾಜ್ಯಾಡಳಿತದಲ್ಲಿ ರಾಜನ ಸಹಾಯಕ್ಕಾಗಿ ವಿಟನಾಜಿ ಮೂಟ್ ಎಂಬ ಹಿರಿಯರ ಸಭೆಯೊಂದಿತ್ತು. ಇದರಲ್ಲಿ ರಾಜ ಕುಟುಂಬದವರೂ, ಮಠಾಧಿಪತಿಗಳೂ, ಮುಖ್ಯ ಶ್ರೀಮಂತರೂ, ಕೆಲವು ಉದ್ಯೋಗಸ್ಥರೂ ಸದಸ್ಯರಾಗಿದ್ದರು. ಇದು ಪ್ರಜಾ ಪ್ರತಿನಿಧಿಗಳ ಸಭೆಯೆಂದು ತಿಳಿಯಕೂಡದು; ಇದನ್ನು ಈಗಿನ ಹೌಸ್ ಆಫ್ ಲಾರ್ಡ್ಸ್ ಎಂಬ ಶ್ರೀಮಂತರ ಸಭೆಯ ಜನಕನೆಂದು ಹೇಳಬಹುದು. ಕಾನೂನುಗಳ ಬದಲಾವಣೆಯಲ್ಲಿಯೂ ಯುದ್ಧ ಸಂಧಿ ವಿಷಯಗಳಲ್ಲಿಯೂ ಈ ಸಭೆಯು ರಾಜನಿಗೆ ಸಹಾಯಕವಾಗಿತ್ತು. ಕೆಲವು ಮುಖ್ಯ ವಿಷಯಗಳಲ್ಲಿ ಇದು ನ್ಯಾಯಾಧಿಕಾರವನ್ನೂ ಪಡೆದಿತ್ತು.[4] ಮೊದಮೊದಲು ಆಂಗ್ಲೀಯರು ರಾಜರನ್ನು ಚುನಾಯಿಸುತ್ತಿದ್ದಾಗ ಈ ಸಭೆಯೇ ರಾಜ

---

[3] ಹೀಗೆಯೇ ಪ್ರಾಚೀನ ಆರ್ಯರೂ ತಮ್ಮ ದೊರೆಗಳನ್ನು ಚುನಾಯಿಸುತ್ತಿದ್ದರು. (The Cultural Heritage of India, Vol. III, p. 302.)

[4] "ಪ್ರಾಚೀನ ಜರ್ಮನ್ನರಲ್ಲಿ ಮುಖಂಡರ ಸಭೆಯಂತೆಯೂ, ಆಂಗ್ಲೀಯರಲ್ಲಿ ವಿಟನಾಜಿಮೂಟನಂತೆಯೂ ವೇದಗಳ ಕಾಲದ ಆರ್ಯರಲ್ಲಿ 'ಸಭಾ' ಎಂಬ ಸಂಸ್ಥೆಯಿತ್ತು." (Development of Hindu Polity and Political Thories, Bandyopadhyaya, Vol. I, p. 133.)

ನನ್ನು ಅರಿಸಿ ಜನಸಮುದಾಯದ ಒಪ್ಪಿಗೆಯನ್ನು ಪಡೆಯುತ್ತಿತ್ತು.

ಹೀಗೆ ಇದುವರೆಗೂ ಇಂಗ್ಲೆಂಡಿನಲ್ಲಿ ಸ್ಥಳೀಯ ಸಂಸ್ಥೆಗಳು ಪ್ರಬಲವಾಗಿದ್ದುವು. ಇವುಗಳನ್ನು ನಾರ್ಮನ್ನರು ಉಳಿಸಿಕೊಂಡರು. ಆದರೆ ಕೇಂದ್ರ ಸರ್ಕಾರವು ದುರ್ಬಲವಾಗಿದ್ದದ್ದಲ್ಲದೆ ಅದಕ್ಕೂ ಸ್ಥಳೀಯ ಸಂಸ್ಥೆಗಳಿಗೂ ವ್ಯವಸ್ಥಿತವಾದ ಸಂಬಂಧ ವಿರಲಿಲ್ಲ. ಈ ದೋಷಗಳನ್ನು ನಾರ್ಮನ್ನರು ಪರಿಹರಿಸಿದರು.

---

## ೨. ಐಕಮತ್ಯ ಮತ್ತು ಶಿಸ್ತು

ನಾರ್ಮನ್ನರ ಆಕ್ರಮಣದ ಫಲವಾಗಿ ಇಂಗ್ಲೆಂಡಿನ ಜನಜೀವನದಲ್ಲಿ ಮುಖ್ಯವಾದ ಅನೇಕ ಮಾರ್ಪಾಡುಗಳು ಏರ್ಪಟ್ಟುವು. ೧. ಇಂಗ್ಲೆಂಡಿಗೂ ಪಶ್ಚಿಮ ಯೂರೋಪಿಗೂ ಪರಸ್ಪರ ಸಂಬಂಧವು ಹೆಚ್ಚಿತು. ಇದುವರೆಗೂ ಆಂಗ್ಲೇಯರು ನಯನಾಗರಿಕತೆಯಾಗಲಿ ಹೊರಗಿನ ಪ್ರಪಂಚದ ತಿಳಿವಳಿಕೆಯಾಗಲಿ ಇಲ್ಲದೆ ಜೀವಿಸುತ್ತಿದ್ದರು. ಈಗ ಅವರು ರೋಮನ್ ಕ್ಯಾಥೊಲಿಕ್ ಮತದೊಡನೆಯೂ ಫ್ರಾನ್ಸ್ ದೇಶದೊಡನೆಯೂ ಸಂಬಂಧ ಬೆಳೆಸಿ, ವ್ಯಾಪಾರ, ವಿದ್ಯೆ, ಕಲೆ ಮತ್ತು ನಾಗರಿಕತೆ–ಇವುಗಳಲ್ಲಿ ಮುಂದುವರಿದರು. ೨. ನಾರ್ಮನ್ನರ ಆಳಿಕೆಯಲ್ಲಿ ಇಂಗ್ಲೆಂಡ್ ದೇಶವು ಹಿಂದೆ ಯಾವಾಗಲೂ ಅರಿಯದಂತಹ ರಾಜಕೀಯ ಏಕೀಕರಣವನ್ನು ಪಡೆಯಿತು. ಇದುವರೆಗೂ ಇಂಗ್ಲೆಂಡೆಂಬುದು ಬರಿಯ ಭೌಗೋಲಿಕ ಶಬ್ದವಾಗಿದ್ದಿತು.

ಆಂಗ್ಲೇಯರಲ್ಲಿ ಸಂಕುಚಿತವಾದ ಸ್ಥಳೀಯ ಅಭಿಮಾನಗಳು ಇದ್ದುವೇ ಹೊರತು ವಿಶಾಲವಾದ ರಾಷ್ಟ್ರೀಯ ಭಾವನೆ ಇರಲಿಲ್ಲ. ನಾರ್ಮನ್ನರ ಶಿಸ್ತು ಶಿಕ್ಷಣಗಳಿಂದ ಆಂಗ್ಲೇಯರಲ್ಲಿ ಏಕೀಕರಣಭಾವ ಹುಟ್ಟಿ ಅವರು ಒಂದು ಜನಾಂಗವಾಗಿ ರೂಪಗೊಂಡರು. ೩. ಶಕ್ತಿ ದಕ್ಷತೆಗಳಿಂದ ತುಂಬಿದ್ದ ನಾರ್ಮನ್ನರ ಸಂಪರ್ಕದಿಂದ ಆಂಗ್ಲೇಯ ಜನತೆಯು ನವಚೈತನ್ಯವನ್ನು ಪಡೆಯಿತು. ೪. ನಾರ್ಮನ್ ದೊರೆಗಳು ಆಡಳಿತ ನೀತಿಯಲ್ಲಿ ನಿಪುಣರಾಗಿದ್ದುದರಿಂದ ಇವರು ಇಂಗ್ಲೆಂಡಿನಲ್ಲಿ ಪ್ರಬಲವಾದ ಸರ್ಕಾರವನ್ನು ಸ್ಥಾಪಿಸಿದರು.

ಆದರೆ ಈ ಪ್ರಯೋಜನಗಳನ್ನೆಲ್ಲ ಪಡೆಯುವುದಕ್ಕೆ ಮುಂಚೆ ಆಂಗ್ಲೇಯರು ಬಹಳ ಕಷ್ಟನಷ್ಟಗಳಿಗೆ ಈಡಾಗಬೇಕಾಯಿತು. ತಮ್ಮ ಜಮೀನುಗಳನ್ನು ಕಿತ್ತುಕೊಂಡ ನಾರ್ಮನ್ ಸರದಾರರುಗಳ ಗುಲಾಮರಾಗಿ ಕೆಲವು ಕಾಲ ಅವರು ದುಡಿಯಬೇಕಾಯಿತು. ಆದರೆ ಈ ಸರದಾರರು ಅವಿಧೇಯಾಗ್ರೇಸರರೆಂದು ವಿಲಿಯಮ್ಮನು ಚೆನ್ನಾಗಿ ಅರಿತಿದ್ದುದರಿಂದ ಅವರ ದುಷ್ಟತನಕ್ಕೂ ಸ್ವೇಚ್ಛಾಪ್ರವರ್ತನೆಗೂ ಅವಕಾಶಕೊಡದೆ ಅವರನ್ನು ಹತೋಟಿಯಲ್ಲಿಟ್ಟಿದ್ದನು. ಇದರಿಂದ ಆಂಗ್ಲೇಯರು ಸ್ವಲ್ಪ ಮಟ್ಟಿಗೆ ರಕ್ಷಣೆಯನ್ನು ಪಡೆದರು.

ನಾರ್ಮನ್ ವಂಶದ ರಾಜರು ವ್ಯವಸ್ಥಿತವಾದ ಸರ್ಕಾರವನ್ನೇರ್ಪಡಿಸಿದರು. ಹಿಂದೆ ಇದ್ದ ವಿಟನಾಜಿಮೂಟ್ ಎಂಬ ಹಿರಿಯರ ಸಭೆಯು ಈಗ "ರಾಜ್ಯದ ಮಹಾಸಭೆ" ಎಂಬ ಹೆಸರನ್ನು ಪಡೆಯಿತು. ಪ್ರಮುಖ ಜಹಗೀರುದಾರರೂ ಮಠಾಧಿಪತಿಗಳೂ ಇದರ ಸದಸ್ಯರಾಗಿದ್ದರು. ಆಡಳಿತ ಮತ್ತು ನ್ಯಾಯ ವಿಚಾರಣೆಗಳಲ್ಲಿ ಕೆಲವು ಮಂತ್ರಿಗಳು ರಾಜನಿಗೆ ಸಹಾಯ

ಮಾಡುತ್ತಿದ್ದರು. ಆಂಗ್ಲೇಯರ ಸ್ಥಳೀಯ ಸಂಸ್ಥೆಗಳು ಈ ಹೊಸ ಸರ್ಕಾರದ ಅಧಿಕಾರಕ್ಕೊಳಪಟ್ಟು ಕೆಲಸಮಾಡುತ್ತಿದ್ದುವು.

ವಿಲಿಯಮ್ಮನು ಇಂಗ್ಲೆಂಡಿನ ಪ್ರತಿಯೊಂದು ಪ್ರಾಂತದಲ್ಲೂ ಜಮೀನುಗಳ ಸ್ಥಿತಿ, ಜಮೀನುದಾರರ ಹೆಸರು, ಬೆಳೆಯುತ್ತಿದ್ದ ದವಸಧಾನ್ಯಗಳು, ದನಕರುಗಳ ಸಂಖ್ಯೆ, ಕಂದಾಯದ ಉತ್ಪತ್ತಿ, ಇತ್ಯಾದಿ ನಾನಾ ವಿಷಯಗಳ ಲೆಕ್ಕವನ್ನು ಸ್ಪಷ್ಟವಾಗಿ ಬರೆಯಿಸಿ ಇಟ್ಟನು. ಇದೇ ಪ್ರಸಿದ್ಧವಾದ "ಡೂಮ್ಸ್ ಡೇ ಪುಸ್ತಕ." ಇದಕ್ಕೆ ಅನೇಕ ವರ್ಷಗಳ ಹಿಂದೆಯೇ ನಮ್ಮ ದ್ರಾವಿಡನಾಡಿನಲ್ಲಿ ಪ್ರಖ್ಯಾತ ಚೋಳರಾಜನೊಬ್ಬನು ಇದೇ ವಿಧವಾದ ಲೆಕ್ಕಪತ್ರಗಳನ್ನಿಟ್ಟಿದ್ದನೆಂಬುದು ಗಮನಾರ್ಹವಾದ ವಿಷಯ.[5]

ವಿಲಿಯಮ್ಮನ ಮಗನಾದ ಒಂದನೆಯ ಹೆನ್ರಿಯು ಶಕ್ತಿ ಚಾತುರ್ಯಗಳಿಂದ ರಾಜ್ಯವನ್ನಾಳಿದನು. ನ್ಯಾಯ ಸಭೆಗಳ ಕಾರ್ಯಕ್ರಮಗಳನ್ನು ಉತ್ತಮಗೊಳಿಸಿ ನಿಷ್ಪಕ್ಷಪಾತವಾಗಿ ನ್ಯಾಯ ವಿಧಿಸುತ್ತಿದ್ದುದರಿಂದ ಇವನಿಗೆ "ನ್ಯಾಯ ಕೇಸರಿ" ಎಂಬ ಹೆಸರು ಬಂತು.

ಈ ರೀತಿಯಾಗಿ ನಾರ್ಮನ್ ದೊರೆಗಳು ಬಲವಾದ ಮತ್ತು ವ್ಯವಸ್ಥಿತವಾದ ಆಡಳಿತ ಯಂತ್ರವನ್ನು ಸ್ಥಾಪಿಸಿದರು. ಆದರೆ ರಾಜನೇ ಆ ಯಂತ್ರದ ಮುಖ್ಯಾಂಗವಾಗಿದ್ದನು. ಶಕ್ತಿ ಸಾಮರ್ಥ್ಯಗಳುಳ್ಳ ರಾಜರಿರುವವರೆಗೂ ರಾಜ್ಯದ ಆಡಳಿತ ಯಂತ್ರವು ಸರಿಯಾಗಿ ನಡೆಯಿತು. ಆದರೆ ಹನ್ನೆರಡನೆಯ ಶತಮಾನದ ಮಧ್ಯಭಾಗದಲ್ಲಿ ಬಂದ ರಾಜರು ಅಶಕ್ತರೂ ಅವಿವೇ

---

[5] 'Ancient India,' by Dr. S. Krishnaswamy Iyengar: Chapter on Chola Administration.

ಕಿಗಳೂ ಆಗಿದ್ದುದರಿಂದ ದೇಶದಲ್ಲಿ ತಾಳಲಾರದಂತಹ ಅನಾಯಕತ್ವವುಂಟಾಗಿ ೨೦ ವರ್ಷಗಳಕಾಲ ಸಾಮಾನ್ಯ ಜನರು ಚಿತ್ರಹಿಂಸೆಗೆ ಗುರಿಯಾದರು. “ದೇವರೇ, ನಿದ್ದೆಮಾಡುತ್ತಿರುವೆಯಾ ?” ಎಂದು ಸಜ್ಜನರು ಮೊರೆಯಿಟ್ಟರು.

ಈ ಕೆಡುಕುಗಳೆಲ್ಲ ಎರಡನೆಯ ಹೆನ್ರಿಯ ಆಳಿಕೆಯಲ್ಲಿ (೧೧೫೪-೧೧೮೯) ನಿವಾರಣೆಯಾದುವು. ಇವನು ದೇಶದಲ್ಲಿ ಪುನಃ ಶಾಂತಿಯನ್ನು ಸ್ಥಾಪಿಸಿದನು. ಸ್ವೇಚ್ಛೆಯಾಗಿ ವರ್ತಿಸಲು ಯತ್ನಿಸುತ್ತಿದ್ದ ಕ್ರೈಸ್ತಮಠವನ್ನು ಹಿಡಿದು ನಿಲ್ಲಿಸಿದನು. ಸರದಾರರ ಪುಂಡನ್ನಡಗಿಸಿದನು. ಹಿಂದೆ ಒಂದನೆಯ ವಿಲಿಯಮ್ಮನು ಸರದಾರರ ಸಹಾಯದಿಂದ ಜನಸಾಮಾನ್ಯವನ್ನು ಗೆದ್ದನು; ಈಗ ಎರಡನೆಯ ಹೆನ್ರಿಯು ಸಾಮಾನ್ಯ ಜನರ ಸಹಾಯದಿಂದ ಸರದಾರರ ಸೊಕ್ಕನ್ನು ಮುರಿದನು. ಅವರ ದುರ್ಗಗಳನ್ನು ನಾಶಮಾಡಿ ಅವರ ಬಲವನ್ನು ಕುಗ್ಗಿಸಿದನು.

ಎರಡನೆಯ ಹೆನ್ರಿಯು ಮಾಡಿದ ಕೆಲಸಗಳಲ್ಲೆಲ್ಲ ಅತಿಮುಖ್ಯವಾದುವು ಇವನ ನ್ಯಾಯ ಸುಧಾರಣೆಗಳು. ರಾಜ್ಯದ ಶ್ರೇಷ್ಠ ನ್ಯಾಯಾಸ್ಥಾನವನ್ನು ಪುನರ್ವ್ಯವಸ್ಥೆಮಾಡಿ ಅದರ ವಿವಿಧಕಾರ್ಯಕ್ರಮಗಳನ್ನು ಸ್ಪಷ್ಟಪಡಿಸಿದನು. ನ್ಯಾಯಶಾಸ್ತ್ರಪ್ರವೀಣರಾದವರನ್ನೇ ನ್ಯಾಯಾಧೀಶರನ್ನಾಗಿ ನೇಮಿಸಿದನು. ನ್ಯಾಯವಿಚಾರಣೆ ಮತ್ತು ತೆರಿಗೆಯ ವಸೂಲಿ—ಇವೆರಡೂ ಸೌಕರ್ಯದಿಂದ ಸಾಗಲು ಇಂಗ್ಲೆಂಡನ್ನು ಆರು ಭಾಗಗಳಾಗಿ ವಿಂಗಡಿಸಿ, ಆ ಕೆಲಸಗಳನ್ನು ನಿರ್ವಹಿಸಲು ಒಂದೊಂದು ಭಾಗಕ್ಕೂ ವರ್ಷವರ್ಷವೂ ಮೂವರು ನ್ಯಾಯಾಧೀಶರನ್ನು ಕಳುಹಿಸುತ್ತಿದ್ದನು. ಈ ನ್ಯಾಯಾಧೀಶರು ತಮ್ಮ ತಮ್ಮ ದೇಶಭಾಗಗಳಲ್ಲಿ ಪ್ರವಾಸಮಾಡಿ ಮುಖ್ಯ ಪಟ್ಟಣಗಳಲ್ಲಿ ನ್ಯಾಯವಿಚಾರಣೆ ನಡೆಸುತ್ತಿ

ದ್ದರು. ನ್ಯಾಯಾಧಿಪತಿಗಳ ಸಹಾಯಕ್ಕಾಗಿ ಹೆನ್ರಿಯು 'ಜೂರಿ' ಎನ್ನುವ ಪಂಚಾಯತಿಗಳ ಪದ್ಧತಿಯನ್ನು ಏರ್ಪಡಿಸಿದನು.

ಈ ಪಂಚಾಯತಿಗಳು ಆಂಗ್ಲೇಯರ ನ್ಯಾಯವ್ಯವಸ್ಥೆಯಲ್ಲಿ ಅತಿ ಮುಖ್ಯ ಪಾತ್ರವನ್ನು ವಹಿಸಿರುವುವು. ಎರಡನೆಯ ಹೆನ್ರಿಯ ಕಾಲದಿಂದ ಎರಡು ಬಗೆಯ ಪಂಚಾಯತಿಗಳು ಕೆಲಸ ಮಾಡುತ್ತಿವೆ. ೧. 'ಗ್ರ್ಯಾಂಡ್ ಜೂರಿ' ಅಥವಾ ದೊಡ್ಡ ಪಂಚಾಯತಿ. ಸಾಕ್ಷ್ಯ ಕೊಡುವುದು ಇದರ ಕೆಲಸ. ನ್ಯಾಯಾಧಿಪತಿಗಳು ವಿಚಾರಣೆ ನಡೆಸುವ ಪ್ರತಿಯೊಂದು ಸ್ಥಳದಲ್ಲೂ ಹನ್ನೆರಡು ಜನ ಸ್ಥಳೀಯ ಪ್ರಮುಖರು ಸತ್ಯವನ್ನಾಡುವುದಾಗಿ ಪ್ರತಿಜ್ಞೆ ಮಾಡಿ ಊರಿನ ಆಪಾದಿತರನ್ನೂ ಅವರ ಅಪರಾಧಗಳನ್ನೂ ನ್ಯಾಯಾಧೀಶರ ಮುಂದಿರಿಸುವರು. ೨. 'ಪೆಟಿ ಜೂರಿ' ಅಥವಾ ಚಿಕ್ಕ ಪಂಚಾಯತಿ. ತೀರ್ಪು ಕೊಡುವುದು ಇದರ ಕೆಲಸ. ಕೋರ್ಟಿನಲ್ಲಿ ಕ್ರಿಮಿನಲ್ ವಿಚಾರಣೆ ನಡೆಯುವಾಗ ಹನ್ನೆರಡು ಜನ ಪಂಚಾಯತರು ನ್ಯಾಯಾಧೀಶರೊಡನೆ ಕುಳಿತು ಸಾಕ್ಷ್ಯಗಳನ್ನೂ ವಾದವಿವಾದಗಳನ್ನೂ ಕೇಳಿ ಎಲ್ಲವನ್ನೂ ಪರಿಶೀಲಿಸಿ ಆಪಾದಿತನು ಅಪರಾಧಿಯೇ ಅಲ್ಲವೇ ಎಂಬ ವಿಷಯದಲ್ಲಿ ತೀರ್ಪು ಕೊಡುವರು. ಈ ಪದ್ಧತಿಯ ಪ್ರಕಾರವೇ ಇಂದಿನ ಸೆಷನ್ಸ್ ಕೋರ್ಟುಗಳಲ್ಲಿ ಅಸೆಸರ್‌ಗಳನ್ನು ನೇಮಿಸುವುದು.

ಹೀಗೆ ಎರಡನೆಯ ಹೆನ್ರಿಯು ಇಂಗ್ಲೆಂಡಿನ ನ್ಯಾಯ ವ್ಯವಸ್ಥೆಯಲ್ಲಿ ಅತಿ ಮುಖ್ಯವಾದ ಪದ್ಧತಿಗಳನ್ನು ಏರ್ಪಡಿಸಿ ಸಂತತವಾದ ಕೀರ್ತಿಯನ್ನು ಪಡೆದನು. ಇವನ ಆಳಿಕೆಯು ಪೂರೈಸುವ ಹೊತ್ತಿಗೆ ಆಂಗ್ಲೇಯರು ಅನೇಕ ಭಾಗ್ಯಗಳನ್ನು ಪಡೆದಿದ್ದರು. ೧೨೦ ವರ್ಷಗಳ ನಿತ್ಯ ಸಹವಾಸದಿಂದಲೂ ಕೊಡುವಳಿ ತರುವಳಿಗಳಿಂದಲೂ ಆಂಗ್ಲೇಯರೂ ನಾರ್ಮನ್ನರೂ

ಸಂಪೂರ್ಣವಾಗಿ ಕಲೆತು ಒಂದೇ ಜನವಾದರು. ದೇಶಕ್ಕೆಲ್ಲ ಒಂದೇ ಜನಾಂಗ, ಒಂದೇ ನ್ಯಾಯ ಪದ್ಧತಿ, ಒಬ್ಬನೇ ಒಡೆಯ, ಎಂಬ ತತ್ವಗಳು ಸ್ಥಿರವಾದುವು. ಅಧಿಕಾರಿಗಳಾಗಿಯೂ ಪಂಚಾಯತರಾಗಿಯೂ ಆಡಳಿತದಲ್ಲಿ ಭಾಗವಹಿಸುವುದು ತಮ್ಮ ಬಾಧ್ಯತೆಗಳಲ್ಲೊಂದು ಎಂಬುದನ್ನು ಜನರು ಅರಿತಿದ್ದರು.

---

## ೩. ಪಾರ್ಲಿಮೆಂಟಿನ ಜನನ

ಎರಡನೆಯ ಹೆನ್ರಿಯು ಮೃತನಾದ ಮೇಲೆ ಸಿಂಹಾಸನಕ್ಕೆ ಬಂದ ಒಂದನೆಯ ರಿಚರ್ಡನು ೧೦ ವರ್ಷಗಳ ಆಳಿಕೆಯಲ್ಲಿ ಕೇವಲ ಐದು ತಿಂಗಳುಗಳ ಕಾಲಮಾತ್ರ ಇಂಗ್ಲೆಂಡಿನಲ್ಲಿದ್ದನು. ಆದರೆ ಹೆನ್ರಿಯು ಸ್ಥಾಪಿಸಿದ್ದ ಸರ್ಕಾರದ ಪ್ರಭಾವವು ರಾಜನಿಲ್ಲದಿದ್ದರೂ ಆಡಳಿತವನ್ನು ನಡೆಸಿಕೊಂಡು ಹೋಗುವ ಹಾಗಿತ್ತು.

ಅನಂತರ ರಿಚರ್ಡನ ತಮ್ಮನಾದ ಜಾನನು ರಾಜನಾದನು. ಇವನು ವಂಚನೆ, ಕ್ರೂರತನ, ದುರಾಸೆ, ಹೇಡಿತನ ಮುಂತಾದ ಗುಣಗಳು ತುಂಬಿದ ವ್ಯಕ್ತಿ. ಇವನು ಮೂರು ಜಗಳಗಳಲ್ಲಿ ಪ್ರವೇಶಿಸಿ ಮೂರರಲ್ಲಿಯೂ ಸಂಪೂರ್ಣವಾಗಿ ಅಪಜಯವನ್ನು ಹೊಂದಿದನು. ಮೊದಲು ಫ್ರಾನ್ಸ್ ದೇಶದ ರಾಜನೊಡನೆ ಯುದ್ಧಕ್ಕೆ ಹೋಗಿ ೧೫೦ ವರ್ಷಗಳಿಂದ ಆಂಗ್ಲೇಯ ರಾಜರ ಅಧೀನದಲ್ಲಿದ್ದ ಪ್ರಾಂತಗಳನ್ನು ಕಳೆದುಕೊಂಡು ನಗೆಗೀಡಾದನು. ಅನಂತರ ಕ್ರೈಸ್ತಮತದ ಜಗದ್ಗುರುವಾದ ಪೋಪ

ನೊಡನೆ ಜಗಳವಾಡಿದುದರಿಂದ ತಾನು ಬಹಿಷ್ಕೃತನಾದನಲ್ಲದೆ ಇಂಗ್ಲೆಂಡ್ ದೇಶವನ್ನೂ ಬಹಿಷ್ಕಾರಕ್ಕೆ ಈಡುಮಾಡಿದನು. ಕೊನೆಯಲ್ಲಿ ಇವನು ಪೋಪನ ಗುಲಾಮನಾಗಿ ಪ್ರತಿವರ್ಷವೂ ಕಪ್ಪಕಟ್ಟಲು ಒಪ್ಪಿಕೊಳ್ಳಬೇಕಾಯಿತು.

ಈ ನಾಚಿಕೆಗೇಡಾದ ಕಾರ್ಯಗಳನ್ನು ಕಂಡು ಜನರು ಬೇಸರಪಟ್ಟರು. ಅಲ್ಲದೆ, ಜಾನನು ದಿನದಿನಕ್ಕೆ ಪ್ರಜೆಗಳನ್ನು ಹೆಚ್ಚಾಗಿ ಹಿಂಸಿಸತೊಡಗಿದನು. ಮಠಾಧಿಪತಿಗಳು ಕಾಲವಾದಾಗ ಅವರ ಸ್ಥಾನಕ್ಕೆ ಇತರರನ್ನು ನೇಮಿಸದೆ ಮಠದ ವರಮಾನಗಳನ್ನು ದುರುಪಯೋಗಪಡಿಸಿಕೊಂಡನು. ಪ್ರತಿಯೊಬ್ಬ ಹಣವಂತನಿಗೂ ತಾನೇ ವಾರಸುದಾರನಾಗಲು ಬಯಸಿದನು. ಅಯೋಗ್ಯರಿಂದ ಹಣವನ್ನು ಪಡೆದು ಅವರಿಗೆ ತನ್ನ ರಕ್ಷಣೆಯಲ್ಲಿದ್ದ ಐಶ್ವರ್ಯವಂತರಾದ ಹೆಣ್ಣುಮಕ್ಕಳನ್ನು ವಿವಾಹಮಾಡಿಸಿಕೊಡುತ್ತಿದ್ದನು. ಸರದಾರರೂ ಮಠಾಧಿಪತಿಗಳೂ ಒಂದಾಗಿ, ಜನರ ಪರವಾಗಿ ರಾಜನನ್ನು ಎದುರಿಸಿ, ೧೨೧೫ ರಲ್ಲಿ ಒಂದು ಮಹಾಸ್ವಾತಂತ್ರ್ಯಪತ್ರಕ್ಕೆ ರುಜು ಹಾಕಲು ಜಾನನನ್ನು ಒತ್ತಾಯಪಡಿಸಿದರು. ಈ ಪತ್ರವು ಆಂಗ್ಲೇಯರ ಚರಿತ್ರೆಯಲ್ಲಿ ರಾಜನ ದುರಾಡಳಿತದ ಮೊದಲನೆಯ ಖಂಡನೆಯೆಂದು ಪ್ರಖ್ಯಾತವಾಗಿದೆ. ಇದರಲ್ಲಿ ೬೩ ಷರತ್ತುಗಳಿವೆ. ಕೆಲವು ಕ್ರೈಸ್ತಮಠದ ಸ್ವಾತಂತ್ರ್ಯಕ್ಕೂ, ಇನ್ನು ಕೆಲವು ತೆರಿಗೆಯ ನೀತಿಗೂ, ಮತ್ತೆ ಕೆಲವು ವ್ಯಾಪಾರ ಸೌಕರ್ಯಗಳಿಗೂ ಸಂಬಂಧಪಟ್ಟವು. ಎರಡು ನಿಯಮಗಳು ಅತ್ಯಂತ ಸ್ವಾರಸ್ಯವಾದುವು; ಇವು ಆಂಗ್ಲೇಯರ ವ್ಯಕ್ತಿ ಸ್ವಾತಂತ್ರ್ಯಕ್ಕೆ ಮೂಲಾಧಾರವೆಂದು ಹೇಳಬಹುದು. ೧. "ದೇಶದ ಕಾನೂನುಗಳಿಗೆ ಅನುಸಾರವಾಗಿ ವಿಚಾರಣೆ ನಡೆಸದೆ

ಯಾರನ್ನೂ ಕೈದುಮಾಡಬಾರದು, ಸೆರೆಯಲ್ಲಿಡಬಾರದು, ದೇಶ ಭ್ರಷ್ಟರನ್ನಾಗಿ ಮಾಡಬಾರದು, ಮತ್ತು ಮಿಕ್ಕ ಯಾವ ರೀತಿಯಲ್ಲಿಯೂ ಹಿಂಸಿಸಬಾರದು." ೨. "ರಾಜನು ಹಕ್ಕುಗಳನ್ನಾಗಲಿ ನ್ಯಾಯವನ್ನಾಗಲಿ ಯಾರಿಗೂ ವಿಕ್ರಯಮಾಡಕೂಡದು; ಯಾರಿಗೂ ಅವನ್ನು ಇಲ್ಲವೆನ್ನಕೂಡದು; ಅವುಗಳನ್ನು ದೊರಕಿಸುವುದರಲ್ಲಿ ತಡಮಾಡಲೂ ಕೂಡದು."

ಈ ಷರತ್ತುಗಳಿಗನುಸಾರವಾಗಿ ರಾಜನು ನಡೆಯದೆ ಹೋದಲ್ಲಿ, ನಿರ್ದಿಷ್ಟರಾದ ೨೫ ಜನ ಸರದಾರರು ಅವನ ಮೇಲೆ ಯುದ್ಧ ಮಾಡಬಹುದೆಂಬ ಅಂಶವನ್ನು ಈ ಪತ್ರದಲ್ಲಿಯೇ ಕಾಣಿಸಿದ್ದರು. ಆದರೆ ಪ್ರತಿಜ್ಞೆಯನ್ನು ಪರಿಪಾಲಿಸುವುದು ಜಾನನ ಜಾಯಮಾನವಲ್ಲ. ಪತ್ರದ ಶಾಯಿ ಒಣಗುವುದಕ್ಕೆ ಮುಂಚೆಯೇ ಸರದಾರರು ತಮ್ಮ ಈ ಹಕ್ಕನ್ನು ಸಾಧಿಸಬೇಕಾಗಿ ಬಂತು. ಆದರೆ ಕೆಲವು ತಿಂಗಳುಗಳಲ್ಲಿ ಆಂಗ್ಲೇಯರ ಭಾಗ್ಯವಿಶೇಷದಿಂದ ಜಾನನು ಮೃತನಾದನು. ಇವನ ಜೀವಮಾನದಲ್ಲೆಲ್ಲ ಇವನು ಮಾಡಿದ ಕೆಲಸಗಳಲ್ಲಿ ಒಳ್ಳೆಯದು ಇದು ಒಂದೇ.

ಜಾನನ ಮೊಮ್ಮಗನಾದ ಒಂದನೆಯ ಎಡ್ವರ್ಡನು ಸುಪ್ರಸಿದ್ಧ ನ್ಯಾಯವಿಧಾಯಕ ಮತ್ತು ಸುಧಾರಕ. ಪ್ರಜೆಗಳು ನ್ಯಾಯಕ್ಕನುಸಾರವಾಗಿ ಶಾಂತಿನೆಮ್ಮದಿಗಳೊಡನೆ ಜೀವಿಸುವುದಕ್ಕೆ ತಕ್ಕ ಏರ್ಪಾಡುಗಳನ್ನು ಇವನು ಮಾಡಿದನು. ನ್ಯಾಯವಿಚಾರಣೆಯ ರೀತಿಗಳನ್ನು ಪುನಃ ಕ್ರಮಪಡಿಸಿ ನ್ಯಾಯಕ್ಕೆ ಸಂಬಂಧಪಟ್ಟ ಕೆಲಸಗಳೆಲ್ಲ ಶಾಸ್ತ್ರೋಕ್ತವಾಗಿಯೂ, ಸುಲಭವಾಗಿಯೂ, ಶೀಘ್ರವಾಗಿಯೂ ನಡೆಯುವಂತೆ ಮಾಡಿದನು.

ಇದುವರೆಗೂ ರಾಜ್ಯಾಡಳಿತವನ್ನು ರಾಜನೇ ನಿರ್ವಹಿಸುತ್ತಿದ್ದನು. ಕಾನೂನುಗಳನ್ನು ರಾಜನೂ ಕೆಲವು ಶ್ರೀಮಂತರೂ

ಸೇರಿ ವಿಧಿಸುತ್ತಿದ್ದರು. ರಾಜ್ಯಭಾರದಲ್ಲಿ ಪ್ರಜೆಗಳು ಭಾಗಿಗಳಾಗಿರಲಿಲ್ಲ. ಆಡಳಿತದಲ್ಲಿ ಪ್ರಜೆಗಳು ಭಾಗವಹಿಸುವಂತೆ ಅವಕಾಶ ಒದಗಿಸಿದುದು ಎಡ್ವರ್ಡನು ಮಾಡಿದ ದೊಡ್ಡ ಕೆಲಸ. ಮಹಾ ಸ್ವಾತಂತ್ರ್ಯಪತ್ರವು ಹೊರಬಿದ್ದನಂತರ ನೂರು ವರ್ಷಗಳ ಕಾಲದಲ್ಲಿ ಪಾರ್ಲಿಮೆಂಟ್ ಸಭೆಯು ಜನಿಸಿತು. ನ್ಯಾಯಾಧೀಶರನ್ನು ರಾಜ್ಯದ ನಾನಾ ಭಾಗಗಳಿಗೆ ಕಳುಹಿಸುವ ವಿಧಾನವನ್ನು ಎರಡನೆಯ ಹೆನ್ರಿಯು ಉಪಕ್ರಮಿಸಿದ್ದನು. ಈಗ ದೇಶದ ಎಲ್ಲ ಪ್ರಾಂತಗಳಿಂದ ಪ್ರಜೆಗಳ ಪ್ರತಿನಿಧಿಗಳನ್ನು ಮುಖ್ಯ ಪಟ್ಟಣವಾದ ಲಂಡನ್ ನಗರದಲ್ಲಿ ಸಭೆ ಸೇರಿಸುವ ಪದ್ಧತಿಯನ್ನು ಒಂದನೆಯ ಎಡ್ವರ್ಡನು ಏರ್ಪಡಿಸಿದನು. ತೆರಿಗೆ, ಕಾನೂನುಗಳ ಬದಲಾವಣೆ ಮುಂತಾದ ವಿಷಯಗಳಲ್ಲಿ ಮಂತ್ರಾಲೋಚನೆ ಮಾಡುವುದಕ್ಕಾಗಿ ೧೨೯೫ ರಲ್ಲಿ ಎಡ್ವರ್ಡನು ಒಂದು ಪಾರ್ಲಿಮೆಂಟ್ ಸಭೆಯನ್ನು ಸೇರಿಸಿದನು. ಚರಿತ್ರೆಯಲ್ಲಿ "ಮಾದರಿ ಪಾರ್ಲಿಮೆಂಟ್" ಎಂದು ಹೆಸರುವಾಸಿಯಾದ ಈ ಸಭೆಯಲ್ಲಿ ಶ್ರೀಮಂತರೂ ಮಠಾಧಿಪತಿಗಳೂ ಮಾತ್ರವಲ್ಲದೆ, ಪ್ರಾಂತಗಳಿಂದಲೂ ಪಟ್ಟಣಗಳಿಂದಲೂ ನಗರಗಳಿಂದಲೂ ಒಂದೊಂದಕ್ಕೆ ಇಬ್ಬರ ಮೇರೆ ಪ್ರತಿನಿಧಿಗಳೂ ಭಾಗವಹಿಸಲು ಅವಕಾಶವಿತ್ತು. "ಸರ್ವರಿಗೂ ಸಂಬಂಧಪಟ್ಟ ವಿಷಯಗಳನ್ನು ಸರ್ವರೂ ಅನುಮೋದಿಸಬೇಕು"ಎಂಬ ಉತ್ಕೃಷ್ಟವಾದ ರಾಜಕೀಯ ತತ್ತ್ವವನ್ನು ಎಡ್ವರ್ಡನು ಹೀಗೆ ಕಾರ್ಯರೂಪಕ್ಕೆ ತಂದನು.

೧೩೪೦ ರಲ್ಲಿ, ಮೂರನೆಯ ಎಡ್ವರ್ಡನು ಆಳುತ್ತಿದ್ದಾಗ, ಪಾರ್ಲಿಮೆಂಟ್ ಸಭೆಯು ಹೌಸ್ ಆಫ್ ಲಾರ್ಡ್ಸ್ ಮತ್ತು ಹೌಸ್ ಆಫ್ ಕಾಮನ್ಸ್ ಎಂದು ಎರಡು ಭಾಗಗಳಾಗಿ ವಿಂಗ

ಡಿಸಲ್ಪಟ್ಟಿತು. ಹೌಸ್ ಆಫ್ ಲಾರ್ಡ್ಸ್ ಎಂಬ ಶ್ರೀಮಂತರ ಸಭೆಯಲ್ಲಿ ಹುಟ್ಟು ಶ್ರೀಮಂತರು ಮತ್ತು ಮಠಾಧಿಪತಿಗಳು ಮಾತ್ರ ಸದಸ್ಯರಾದರು. ಹೌಸ್ ಆಫ್ ಕಾಮನ್ಸ್ ಎಂಬ ಪ್ರತಿನಿಧಿ ಸಭೆಯಲ್ಲಿ ಚುನಾವಣೆಯನ್ನು ಹೊಂದಿದ ಪ್ರಜಾಪ್ರತಿನಿಧಿಗಳು ಮಾತ್ರ ಸದಸ್ಯರಾದರು. ಮುಂದೆ ರಾಜನಿಗೂ ಪ್ರಜೆಗಳಿಗೂ ವ್ಯಾಜ್ಯವೇನಾದರೂ ಹುಟ್ಟಿದರೆ ಪ್ರತಿನಿಧಿ ಸಭೆಯು ಸಾಮಾನ್ಯಜನ ಸಮುದಾಯದ ಪರವಾಗಿ ಹೋರಾಡುವುದಕ್ಕೆ ಅಧಿಕಾರವುಳ್ಳ ಸಂಸ್ಥೆಯಾಗಿ ನಿಂತಿತು.

ಇಲ್ಲಿಂದ ಮುಂದೆ ಪಾರ್ಲಿಮೆಂಟ್ ಸಂಸ್ಥೆಯು ಏಕಪ್ರಕಾರವಾಗಿ ಬೆಳೆದು ಆಂಗ್ಲೇಯರ ರಾಜಕೀಯಜೀವನದಲ್ಲಿ ಅತಿ ಮುಖ್ಯಸ್ಥಾನವನ್ನು ಪಡೆಯಿತು. ಗಡಿಯಾರಕ್ಕೆ ಮೆಯಿನ್ ಸ್ಪ್ರಿಂಗ್ ಹೇಗೋ ಹಾಗೆಯೇ ಆಂಗ್ಲೇಯರ ಆಡಳಿತ ಯಂತ್ರಕ್ಕೆ ಪಾರ್ಲಿಮೆಂಟ್ ಇರುವುದು. ಇದನ್ನು ಮಾದರಿಯನ್ನಾಗಿ ಮಾಡಿಕೊಂಡು ಪ್ರಪಂಚದ ನಾನಾ ಕಡೆಗಳಲ್ಲಿ ಆಧುನಿಕ ಪ್ರಜಾಸಭೆಗಳನ್ನು ರಚಿಸಿದ್ದಾರೆ.

ಒಂದನೆಯ ಎಡ್ವರ್ಡನ ಆಳಿಕೆಯು ಮುಗಿದನಂತರ ಒಂದೂಮುಕ್ಕಾಲು ಶತಮಾನಗಳ ಕಾಲ (೧೩೦೭-೧೪೮೫) ಇಂಗ್ಲೆಂಡಿನ ಹೊರಗೂ ಒಳಗೂ ಆಂಗ್ಲೇಯರು ವಿನಾಶಕರವಾದ ಯುದ್ಧಗಳನ್ನು ಹೂಡಿದರು. ಈ ಯುದ್ಧಗಳಲ್ಲಿ ಅನೇಕ ಸರದಾರರ ಮನೆತನಗಳು ನಿರ್ನಾಮವಾದುವು. ಇದರಿಂದ ಹದಿನೈದನೆಯ ಶತಮಾನದ ಕೊನೆಯ ಭಾಗದಲ್ಲಿ ಇಂಗ್ಲೆಂಡಿನ ಸಿಂಹಾಸನಕ್ಕೆ ಬಂದ ಟ್ಯೂಡರ್ ವಂಶದ ರಾಜರು ಅತಿ ಪ್ರಬಲರಾಗಲು ಅವಕಾಶವಾಯಿತು.

## ೪. ಪಾರ್ಲಿಮೆಂಟಿನ ಶಿಕ್ಷಣ

ಟ್ಯೂಡರ್ ರಾಜರ ಕಾಲದಿಂದ ಇಂಗ್ಲೆಂಡಿನ ಚರಿತ್ರೆಯು ಅತಿ ಸ್ವಾರಸ್ಯವಾಗುತ್ತದೆ. ಅವರಾಳಿದ ಹದಿನಾರನೆಯ ಶತಮಾನವು ಪಾಶ್ಚಾತ್ಯ ದೇಶಗಳ ಚರಿತ್ರೆಯಲ್ಲಿ ಅತಿಗಣ್ಯವಾದುದು. ಯೂರೋಪಿನ ನವಯುಗವು ಇಲ್ಲಿಂದಲೇ ಪ್ರಾರಂಭವಾಗುತ್ತದೆಂದು ಚರಿತ್ರಕಾರರು ನಿರ್ಣಯಿಸಿದ್ದಾರೆ. ಇದಕ್ಕೆ ಅನೇಕ ಕಾರಣಗಳಿವೆ. ೧. ರಾಷ್ಟ್ರೀಯ ಭಾವನೆ ಹುಟ್ಟಿ ಯೂರೋಪಿನ ದೇಶಗಳು ಸರಿಸುಮಾರು ತಮ್ಮ ಇಂದಿನ ರೂಪ ಲಕ್ಷಣಗಳನ್ನು ಪಡೆದುವು. ೨. ದುಷ್ಟರಾದ ಸರದಾರರು ನಾಶವಾದುದರಿಂದ ರಾಜರ ಪ್ರಶಸ್ತಿ ಹೆಚ್ಚಿ, ಏಕರಾಜ, ಏಕರಾಜ್ಯ—ಎಂಬ ಭಾವನೆ ಮೂಡಿತು. ಎಲ್ಲ ದೇಶಗಳಲ್ಲೂ ರಾಜರು ನಿರಂಕುಶ ಪ್ರಭುತ್ವವನ್ನು ಸ್ಥಾಪಿಸಿಕೊಂಡರು. ೩. ಇವರಲ್ಲಿ ಕೆಲವರು ಶಾಂತತೆಯನ್ನೂ ಕೆಲವರು ಆಕ್ರಮಣವನ್ನೂ ಇಚ್ಛಿಸಿದವರಾಗಿದ್ದುದರಿಂದ ಸಂಧಿಗಳನ್ನೂ ಯುದ್ಧಗಳನ್ನೂ ಮಾಡುವುದು ಸಾಮಾನ್ಯ ವಾಡಿಕೆಯಾಯಿತು. ೪. ಪ್ರಾಚೀನ ಗ್ರೀಕರ ವಿದ್ಯೆಯು ಪಶ್ಚಿಮ ಯೂರೋಪಿನಲ್ಲಿ ಹರಡಿ ಕಲೆಯೂ ಸಾಂಡಿತ್ಯವೂ ಪುನರುಜ್ಜೀವಿತವಾದುವು. ಯೂರೋಪಿಯನ್ನರ ಸಂಸ್ಕೃತಿ ಅತಿಶಯವಾದ ಪ್ರಗತಿಯನ್ನು ಪಡೆಯಿತು. ೫. ಮುದ್ರಣ ಕಲೆ ಹುಟ್ಟಿ ವಿದ್ಯಾಪ್ರಚಾರಕ್ಕೆ ಅನುಕೂಲ ಹೆಚ್ಚಿತು. ಅಚ್ಚು ಪುಸ್ತಕಗಳು ಅಗ್ಗವಾಗಿ ದೊರೆತು ಹಣವಂತರು ಮಾತ್ರವಲ್ಲದೆ ಬಡವರೂ ಜ್ಞಾನಾರ್ಜನೆ ಮಾಡಲಾರಂಭಿಸಿದರು. ೬. ಇದರ ಫಲವಾಗಿ ಜನರು ವಿವೇಚನೆ ಮತ್ತು ಪರಿಶೋಧನ ಬುದ್ಧಿಯುಳ್ಳವರಾದರು. ಕ್ರೈಸ್ತ ಮತದ ಒಗದ್ಗುರುವಾದ ಪೋಪನ ಅಧಿಕಾರವು ಕುಗ್ಗಿತು. ಇಂಗ್ಲೆಂಡ್ ಮುಂತಾದ

ದೇಶಗಳು ಕ್ಯಾಥೊಲಿಕ್ ಮತವನ್ನು ತೊರೆದು ತಮ್ಮದೇ ಒಂದು ಮತ ಸಂಸ್ಥೆಯನ್ನು ಏರ್ಪಡಿಸಿಕೊಂಡುವು. ೭. ಯೂರೋಪಿಯನ್ನರಿಗೆ ಮನೋವೈಶಾಲ್ಯವುಂಟಾಗಿ ಅವರ ಕಲೆ ಮತ್ತು ವಿದ್ಯೆ ಅಭಿವೃದ್ಧಿಯಾದುದಲ್ಲದೆ, ಅವರ ಭೂಗೋಳದ ಪರಿಚಯವೂ ವಿಸ್ತರಿಸಿತು. ಯೂರೋಪಿಯನ್ನರು ಪ್ರಪಂಚದ ನಾನಾ ಭಾಗಗಳಿಗೆ ಹೋಗಿ ಅನ್ಯದೇಶಗಳಲ್ಲಿ ನೆಲಸಲಾರಂಭಿಸಿದರು. ಅಂತರ್ರಾಷ್ಟ್ರೀಯ ವ್ಯಾಪಾರದ ಯುಗವು ಮೊದಲಾಯಿತು.

ಇಂಗ್ಲೆಂಡಿನಲ್ಲಿ ಟ್ಯೂಡರ್ ಮನೆತನದರಸರು ಜನಪ್ರಿಯವಾದ ನಿರಂಕುಶ ಪ್ರಭುತ್ವವನ್ನು ಸ್ಥಾಪಿಸಿದರು. ದೇಶದ ಆಗಿನ ಸ್ಥಿತಿಗತಿಗಳು ಇದಕ್ಕನುಕೂಲವಾಗಿದ್ದುವು. ದುಷ್ಟರಾದ ಸರದಾರರು ಅಂತರ್ಯುದ್ಧದಲ್ಲಿ ಆತ್ಮಹತ್ಯೆಯನ್ನು ಮಾಡಿಕೊಂಡಂತಾಗಿತ್ತು. ಕ್ರೈಸ್ತ ಮಠವು ಬಲಹೀನವಾಗಿ ಹೋಗಿದ್ದರಿಂದ ರಾಜರನ್ನು ಎದುರಿಸುವ ಹಾಗಿರಲಿಲ್ಲ. ಸಾಮಾನ್ಯ ಜನರು ಶಾಂತಿನೆಮ್ಮದಿಗಳನ್ನು ಕೋರಿದರೇ ಹೊರತು ರಾಜಕೀಯ ಅಧಿಕಾರವನ್ನು ವಿಶೇಷವಾಗಿ ಇಚ್ಛಿಸಲಿಲ್ಲ. ಅವರ ಗಮನವು ವ್ಯಾಪಾರ, ಲೋಕಸಂಚಾರ, ಮತ, ವಿದ್ಯಾಭಿವೃದ್ಧಿ, ಇವುಗಳಲ್ಲಿ ಲೀನವಾಗಿತ್ತು. ಶಾಂತಿ ನಿರ್ಭಯಗಳಿಗೆ ಪ್ರತಿಫಲವಾಗಿ ಪ್ರಜೆಗಳು ತಮ್ಮ ಸ್ವಾತಂತ್ರ್ಯವನ್ನು ಸ್ವಲ್ಪಮಟ್ಟಿಗೆ ಕಳೆದುಕೊಳ್ಳಲು ಸಿದ್ಧರಾಗಿದ್ದರು. ಈ ಕಾರಣಗಳಿಂದ ಟ್ಯೂಡರ್ ದೊರೆಗಳು ಅಪ್ರತಿಮವಾದ ಶಕ್ತಿಪ್ರಭಾವಗಳನ್ನು ಅನುಭವಿಸುತ್ತಿದ್ದರು. ಆದರೆ, ಅವರ ಅಧಿಕಾರವು ಮಿತಿಯಿಲ್ಲದ್ದಾಗಿದ್ದರೂ ಪ್ರಜೆಗಳ ಸಮ್ಮತಿಯನ್ನು ಪಡೆದಿತ್ತು. ತಂದೆಯಂತಹ ರಾಜನ ನಿರಂಕುಶಪ್ರಭುತ್ವದಲ್ಲಿ ಪ್ರಜೆಗಳು ಶಾಂತರಾಗಿ ಆರ್ಥಿಕ ಪ್ರಗತಿ

ಯನ್ನು ಸಾಧಿಸಬೇಕೆಂಬುದೇ ಟ್ಯೂಡರ್ ದೊರೆಗಳ ಧ್ಯೇಯ.

ಈ ವಂಶದ ಆದಿರಾಜನಾದ ಏಳನೆಯ ಹೆನ್ರಿಯು ಕಾರ್ಯನಿರ್ವಾಹದಲ್ಲಿ ಅತಿ ಚತುರನಾಗಿದ್ದನು. ಮುಖ್ಯವಾಗಿ ಎರಡು ವಿಷಯಗಳಲ್ಲಿ ಇವನು ನಿಪುಣ: ೧. ದ್ರವ್ಯವನ್ನು ಶೇಖರಿಸುವುದು. ೨. ತನ್ನ ಮಕ್ಕಳಿಗೆ ವಿವಾಹ ಮಾಡಿಸುವುದು. ಧನಿಕರಿಂದಲೂ ದರಿದ್ರರಿಂದಲೂ ನ್ಯಾಯವಾಗಿಯೋ ಅನ್ಯಾಯವಾಗಿಯೋ ಹಣವನ್ನು ಸುಲಿದನು. ತನ್ನ ಮಗನಿಗೆ ಅತಿ ಪರಾಕ್ರಮಶಾಲಿಯಾದ ಸ್ಪೈಯಿನ್ ದೇಶದ ರಾಜನ ಪುತ್ರಿಯನ್ನು ತಂದು ಮದುವೆ ಮಾಡಿಸಿದನು. ತನ್ನ ಮಗಳನ್ನು ಸ್ಕಾಟ್ಲೆಂಡ್ ದೇಶದ ರಾಜನಿಗೆ ಕೊಟ್ಟನು ; ಬ್ರಿಟನ್ನಿನ ಉತ್ತರ ಭಾಗವಾಗಿದ್ದರೂ ಸ್ಕಾಟ್ಲೆಂಡ್ ದೇಶವು ಪ್ರತ್ಯೇಕ ರಾಜ್ಯವಾಗಿದ್ದುದಲ್ಲದೆ ೨೦೦ ವರ್ಷಗಳಿಂದ ವಿರೋಧಿಯಾಗಿ ವರ್ತಿಸುತ್ತಿತ್ತು. ಹೆನ್ರಿಯು ಈ ವಿವಾಹಸಂಬಂಧಗಳನ್ನು ಮಾತ್ರವಲ್ಲದೆ ಇತರ ದೇಶಗಳೊಡನೆ ವ್ಯಾಪಾರದ ಒಪ್ಪಂದಗಳನ್ನೂ ಮಾಡಿಕೊಂಡನು. ಇವನು ಒಂದು ಯುದ್ಧವೂ ಮಾಡದೆ ಯೂರೋಪಿನಲ್ಲಿ ಗೌರವವನ್ನು ಸಂಪಾದಿಸಿದನು.

ಇವನ ಮಗನಾದ ಎಂಟನೆಯ ಹೆನ್ರಿಯು ಇಂಗ್ಲೆಂಡಿನ ಚರಿತ್ರೆಯಲ್ಲೆಲ್ಲ ಅತಿ ಪ್ರಬಲರಾದ ರಾಜರಲ್ಲೊಬ್ಬನು. ಇವನು ಸ್ವಾರ್ಥಪರನಾಗಿಯೂ ಕ್ರೂರಿಯಾಗಿಯೂ ಇದ್ದರೂ ಅದ್ಭುತವಾದ ಶಕ್ತಿಯನ್ನೂ ರಾಜನೀತಿ ನೈಪುಣ್ಯವನ್ನೂ ಪಡೆದಿದ್ದನು. ಇವನಿಗೂ ಪೋಪನಿಗೂ ಒಂದು ವ್ಯಾಜ್ಯವುಂಟಾಯಿತು. ತನ್ನ ಸಹೋದರನು ಕಾಲವಾದ ಮೇಲೆ ಹೆನ್ರಿಯು ಅವನ ಪತ್ನಿಯಾದ ಸ್ಪೈಯಿನ್ ದೇಶದ ರಾಜಪುತ್ರಿಯನ್ನು ಮದುವೆಮಾಡಿಕೊಂಡಿದ್ದನು. ಈಗ ಇವನು ಆ ವಿವಾಹದ ವಿಚ್ಛೇದನವನ್ನು

ಅಪೇಕ್ಷಿಸಿದನು. ಇದನ್ನು ಕೊಡುವ ಅಧಿಕಾರವು ಪೋಪನಿಗೆ ಮಾತ್ರ ಇತ್ತು. ಆದರೆ ಪೋಪನು ರಾಣಿಯ ಪ್ರಬಲರಾದ ಬಂಧುಗಳಿಗೆ ಅಧೀನನಾಗಿದ್ದುದರಿಂದ ಇದಕ್ಕೆ ಒಪ್ಪಲಿಲ್ಲ. ಹೆನ್ರಿಯು ಆಗ್ರಹಕೊಂಡು ಪೋಪನಿಗೆ ಇಂಗ್ಲೆಂಡಿನಲ್ಲಿದ್ದ ಅಧಿಕಾರವನ್ನೆಲ್ಲ ನಿರ್ಮೂಲಮಾಡಿ ದೇಶದ ಮತಸಂಸ್ಥೆಗೆ ತಾನೇ ಶ್ರೇಷ್ಠಾಧಿಕಾರಿಯಾದನು. ಇದುವರೆಗೂ ಪೋಪನು ಅನುಭವಿಸುತ್ತಿದ್ದ ಹೇರಳವಾದ ವರಮಾನಗಳನ್ನು ವಶಪಡಿಸಿಕೊಂಡನು. ಇಂಗ್ಲೆಂಡಿನಲ್ಲಿದ್ದ ಅನೇಕ ಸನ್ಯಾಸಿ ಮಠಗಳನ್ನು ಕೊನೆಗಾಣಿಸಿ ಅವುಗಳ ಅಪಾರವಾದ ಆಸ್ತಿಗಳನ್ನು ಸ್ವಾಧೀನಪಡಿಸಿಕೊಂಡನು.

ಜರ್ಮನಿ, ಫ್ರಾನ್ಸ್ ಮುಂತಾದ ದೇಶಗಳಲ್ಲಿ ಪೋಪನ ಅಧಿಕಾರಕ್ಕೆ ವಿರೋಧವಾಗಿ ನಡೆದ ಚಳವಳಿಯನ್ನು ಸಾಮಾನ್ಯ ಜನರೇ ಮೊದಲುಮಾಡಿದರು. ಇಂಗ್ಲೆಂಡಿನಲ್ಲಿ ಇದನ್ನು ರಾಜನು ಉಪಕ್ರಮಿಸಿದನು. ಆದರೆ ರೋಮನ್ ಕ್ಯಾಥೊಲಿಕ್ ಮಠಾಧಿಕಾರಿಗಳ ಹಣದಾಸೆ, ಭೋಗಾಸಕ್ತಿ ಮತ್ತು ಲೌಕಿಕ ಯುಕ್ತಿಗಳು ಇಂಗ್ಲೆಂಡಿನ ಸಾಮಾನ್ಯ ಜನರಲ್ಲಿ ತೀವ್ರವಾದ ಅಸಮಾಧಾನವನ್ನುಂಟುಮಾಡಿದ್ದುದರಿಂದ ರಾಜನಿಗೆ ಈ ಕಾರ್ಯದಲ್ಲಿ ಪ್ರಜೆಗಳ ಬೆಂಬಲ ದೊರೆಯಿತು. ಪೋಪನ ಅಧಿಕಾರವನ್ನು ನಾಶಮಾಡಿದಾಗ ಹೆನ್ರಿಯು ತನ್ನ ಕಾರ್ಯಕ್ರಮವನ್ನು ಪಾರ್ಲಿಮೆಂಟಿನ ಕಾನೂನುಗಳ ರೂಪದಲ್ಲಿಯೇ ನೆರವೇರಿಸಿದನು.

ಹೆನ್ರಿಯು ಮಠದ ನಾಯಕತ್ವವನ್ನು ಮಾತ್ರ ಬದಲಾಯಿಸಿದನೇ ಹೊರತು ಕ್ಯಾಥೊಲಿಕ್ ತತ್ವಗಳನ್ನೇನೂ ಮಾರ್ಪಡಿಸಲಿಲ್ಲ. ಇವನ ಮಗನಾದ ಆರನೆಯ ಎಡ್ವರ್ಡನ ಕಾಲದಲ್ಲಿ

ಸರ್ಕಾರವು ಮತದ ಸಿದ್ಧಾಂತಗಳನ್ನು ಬದಲಾಯಿಸಿ ಪ್ರಾಟೆಸ್ಟೆಂಟ್ ಸಂಪ್ರದಾಯವನ್ನು ಆಚರಣೆಗೆ ತಂದಿತು. ಕೊನೆಗೆ ಎಲಿಜಬೆತ್ ರಾಣಿಯ ಆಳಿಕೆಯಲ್ಲಿ ಆಂಗ್ಲೇಯರ ಮತ ಸಂಸ್ಥೆಯು ಇಂದಿನ ರೂಪವನ್ನು ತಾಳಿತು. ಟ್ಯೂಡರ್ ರಾಜರು ವಿದೇಶೀಯನಾದ ಪೋಪನ ಅಧಿಕಾರವನ್ನು ನಿರಾಕರಿಸಿ, ಮತದ ಸ್ವಾತಂತ್ರ್ಯವನ್ನು ಸಾಧಿಸಿ, ಆಂಗ್ಲೇಯರ ರಾಷ್ಟ್ರೀಯ ಭಾವನೆಯನ್ನು ಪೂರ್ತಿಗೊಳಿಸಿದರು.

ಎಲಿಜಬೆತ್ ರಾಣಿಯ ೪೫ ವರ್ಷಗಳ ಆಳಿಕೆಯು (೧೫೫೮-೧೬೦೩) ಇಂಗ್ಲೆಂಡಿನ ಚರಿತ್ರೆಯಲ್ಲಿ ವಿರಾಜಮಾನವಾದ ಕಾಲವಾಗಿತ್ತು. ಅರಸಿಯು ಸ್ವಸಾಮರ್ಥ್ಯದಿಂದ ರಾಜ್ಯಾಡಳಿತವನ್ನು ನಿರ್ವಹಿಸಲು ಯೋಗ್ಯಳಾಗಿದ್ದಳಲ್ಲದೆ ಚತುರರಾದ ಮಂತ್ರಿಗಳನ್ನೂ ಆರಿಸಿಕೊಂಡಳು. ಮತವಿಷಯದಲ್ಲಿ ಮಿತವಾದ ಧೋರಣೆಯನ್ನು ಅನುಸರಿಸಿದಳು. ವ್ಯಾಪಾರ, ಕೈಗಾರಿಕೆ, ಅನ್ಯದೇಶಗಳಲ್ಲಿ ಕಾಲೊನಿಗಳೆಂಬ ವಸತಿಗಳ ಏರ್ಪಾಡು—ಈ ಮೊದಲಾದ ಉದ್ಯಮಗಳನ್ನು ಪ್ರೋತ್ಸಾಹಿಸಿದಳು. ಭಾರತ ದೇಶದೊಡನೆ ವ್ಯಾಪಾರ ಸಂಬಂಧವನ್ನು ಬೆಳೆಸುವುದಕ್ಕಾಗಿ ತನ್ನ ಆಶ್ರಯದಲ್ಲಿ "ಈಸ್ಟ್ ಇಂಡಿಯಾ ಕಂಪೆನಿ" ಎಂಬ ಸಂಘವನ್ನು ಸ್ಥಾಪಿಸಲು ಅನುಮತಿ ಕೊಟ್ಟಳು. ಮುಂದೆ ತಮಗಿರುವ ಸಾಮ್ರಾಜ್ಯ ಭಾಗ್ಯವನ್ನು ಅರಿಯದೆ ಕೇವಲ ವ್ಯಾಪಾರದ ಲಾಭಕ್ಕಾಗಿ ಆಂಗ್ಲೇಯರು ನಮ್ಮ ದೇಶಕ್ಕೆ ಬರಲಾರಂಭಿಸಿದರು. ಶಾಂತಿ ಮಿತವ್ಯಯಗಳಿಂದ ಎಲಿಜಬೆತ್ ರಾಣಿಯು ಇಂಗ್ಲೆಂಡಿನ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಿದಳು. ಅಲ್ಲದೆ, ಇವಳ ಕಾಲವು ಇಂಗ್ಲಿಷ್ ಸಾಹಿತ್ಯದ ಚರಿತ್ರೆಯಲ್ಲಿ ಒಂದು ಅದ್ಭುತವಾದ ಕಾಲವಾಗಿತ್ತು.

ಷೇಕ್ಸ್‌ಪಿಯರ್ ಮಹಾಕವಿಯೂ, ಅವನಿಗೆ ಮಾತ್ರ ದ್ವಿತೀಯ ರಾದ ಇತರ ಕವೀಶ್ವರರೂ ಅಮೋಘವಾದ ಕವನಗಳನ್ನೂ ನಾಟಕಗಳನ್ನೂ ರಚಿಸಿ ಇಂಗ್ಲಿಷ್ ಸಾಹಿತ್ಯದ ಯಶಸ್ಸನ್ನು ಶಾಶ್ವತಪಡಿಸಿದರು

ಇವೆಲ್ಲಕ್ಕಿಂತಲೂ ಇಂಗ್ಲೆಂಡಿನ ಸಂಧಿವಿಗ್ರಹನೀತಿಯು ಪರಿಣಾಮಕಾರಿಯಾಗಿತ್ತು. ನೂರು ವರ್ಷಗಳಿಂದ ಸ್ಪೆಯಿನ್ ದೇಶವು ಯೂರೋಪಿನಲ್ಲಿ ಅತ್ಯಂತ ಪ್ರಬಲ ರಾಷ್ಟ್ರವಾಗಿತ್ತು. ಸ್ಪೆಯಿನ್ ದೊರೆಯು ಯೂರೋಪಿನಲ್ಲೂ ಅಮೆರಿಕಾಖಂಡದಲ್ಲೂ ವಿಸ್ತಾರವಾದ ಪ್ರದೇಶಗಳನ್ನೂ ಬಹಳ ಐಶ್ವರ್ಯವನ್ನೂ ಪಡೆದಿದ್ದನು. ಎಲಿಜಬೆತ್ತಿನ ಸಮಕಾಲೀನನಾದ ಎರಡನೆಯ ಫಿಲಿಪನು ರೋಮನ್ ಕ್ಯಾಥೊಲಿಕ್ ಮತದ ಮತ್ತು ಪೋಪನ ಅಧಿಕಾರದ ಹಿತಚಿಂತಕನಾಗಿಯೂ ರಕ್ಷಕನಾಗಿಯೂ ನಿಂತಿದ್ದನು. ಆಂಗ್ಲೇಯರನ್ನು ಅಮೆರಿಕಾ ವ್ಯಾಪಾರದ ಲಾಭಗಳಲ್ಲಿ ಭಾಗಿಗಳಾಗದಂತೆ ತಡೆಗಟ್ಟಿದನು. ಕೊನೆಗೆ ಎಲಿಜಬೆತ್ತನ್ನು ಸಿಂಹಾಸನದಿಂದ ಉರುಳಿಸುವುದಕ್ಕೂ ಅವಳನ್ನು ಕೊಲ್ಲುವುದಕ್ಕೂ ಮಾಡಿದ ಕಪಟೋಪಾಯಗಳಿಗೆ ನೆರವಾದನು. ಈ ಕಾರಣಗಳಿಂದ ಎರಡು ಜನಾಂಗಗಳಿಗೂ ಕಠಿನವಾದ ವೈರವುಂಟಾಗಿ ಆಂಗ್ಲೇಯರು ಸ್ಪೆಯಿನ್ ದೇಶದವರನ್ನು ರಾಕ್ಷಸರಿಗಿಂತ ಹೆಚ್ಚಾಗಿ ದ್ವೇಷಿಸಿದರು. ಯುದ್ಧವು ಪ್ರಾರಂಭವಾಯಿತು. ೧೫೮೮ ರಲ್ಲಿ ಫಿಲಿಪನು ಇಂಗ್ಲೆಂಡನ್ನು ಜಯಿಸುವುದಕ್ಕಾಗಿ ಒಂದು ಭಾರಿ ನೌಕಾ ಸೈನ್ಯವನ್ನು ಕಳುಹಿಸಿದನು. ಆದರೆ ಇದರ ನಾಯಕರು ಸಮರ್ಥರಾಗಿರಲಿಲ್ಲ, ಅದೃಷ್ಟವೂ ಚೆನ್ನಾಗಿರಲಿಲ್ಲ. ಇದನ್ನು ಎದುರಿಸಿದ ಆಂಗ್ಲೇಯರು ಸಾಹಸಿಗಳಾದ ನಾವಿಕರು. ಅಲ್ಲದೆ, ತಮ್ಮ ಪರವಾಗಿ ಇಂಗ್ಲೆಂಡಿನ

ಕ್ಯಾಥೊಲಿಕ್ಕರು ದಂಗೆ ಏಳುವರೆಂಬ ಸ್ಪ್ಯಾನಿಷರಿಗಿದ್ದ ನಿರೀಕ್ಷೆಯು ಸಿದ್ಧಿಯಾಗಲಿಲ್ಲ. ಉಜ್ವಲ ದೇಶಾಭಿಮಾನಿಗಳನ್ನು ಮತವಿಷಯಗಳಲ್ಲಿರುವ ಭಿನ್ನಾಭಿಪ್ರಾಯಗಳು ಎಂದಿಗೂ ವಿಭಾಗಿಸುವುದಿಲ್ಲ. ಸ್ಪ್ಯಾನಿಷರ ನೌಕಾ ಸೈನ್ಯವು ಚೆದರಿಹೋಯಿತು. ಶೀಘ್ರದಲ್ಲಿಯೇ ಸ್ಪೈಯಿನಿನ ಶಕ್ತಿಪ್ರಭಾವಗಳು ಕ್ಷಯಿಸಿದುವು. ಇಂದು ಯೂರೋಪಿನಲ್ಲಿ ಸ್ಪೈಯಿನ್ ದೇಶವು ಮೂರನೆಯ ತರಗತಿಯ ರಾಷ್ಟ್ರಗಳಲ್ಲೊಂದಾಗಿದೆ. ಸಮುದ್ರಾಧಿಪತ್ಯವನ್ನೂ ಅದರ ಮೂಲಕ ಸಾಮ್ರಾಜ್ಯವನ್ನೂ ಸಾಧಿಸಲು ಆಂಗ್ಲೇಯರಿಗೆ ಅವಕಾಶವೊದಗಿತು.

ಎಲಿಜಬೆತ್ ರಾಣಿಯೊಡನೆ ಟ್ಯೂಡರ್ ಮನೆತನವು ಕೊನೆಗಂಡಿತು. ಇವಳು ಮದುವೆಮಾಡಿಕೊಳ್ಳಲಿಲ್ಲ. ವಿದೇಶ ರಾಜನನ್ನು ವರಿಸಿದರೆ ಇಂಗ್ಲೆಂಡಿನ ಸ್ವಾತಂತ್ರ್ಯಕ್ಕೂ, ಸ್ವದೇಶ ಪ್ರಜೆಗಳಲ್ಲೊಬ್ಬನನ್ನು ವರಿಸಿದರೆ ತನ್ನ ಗೌರವಕ್ಕೂ ಹಾನಿಯುಂಟಾಗಬಹುದೆಂಬ ಧರ್ಮಸಂಕಟಕ್ಕೆ ಸಿಕ್ಕಿ ಇವಳು ವಿವಾಹವಿಲ್ಲದೆಯೇ ತನ್ನ ಕಾಲವನ್ನು ಕಳೆದಳು. ಇವಳು ಮೃತಳಾದಮೇಲೆ ಏಳನೆಯ ಹೆನ್ರಿಯ ಮಗಳ ಸಂತತಿಯವನೂ ಸ್ಕಾಟ್ಲೆಂಡ್ ದೇಶದ ಸ್ಟೂವರ್ಟ್ ರಾಜವಂಶಕ್ಕೆ ಸೇರಿದವನೂ ಆದ ಜೇಮ್ಸ್ ಎಂಬವನು ಇಂಗ್ಲೆಂಡಿನ ಸಿಂಹಾಸನವನ್ನೇರಿದನು.

ಟ್ಯೂಡರ್ ಮನೆತನದ ದೊರೆಗಳಿಗೆ ಇಂಗ್ಲೆಂಡ್ ದೇಶವು ಅನೇಕ ವಿಷಯಗಳಲ್ಲಿ ಋಣಿಯಾಗಿದೆ. ಹೆನ್ರಿಗಳಿಬ್ಬರೂ ಎಲಿಜಬೆತ್ ರಾಣಿಯೂ ಶ್ರೇಷ್ಠರಾದ ರಾಜನೀತಿಜ್ಞರು. ಯಾವಾಗಲೂ ಜನಾಭಿಪ್ರಾಯವನ್ನರಿತು ಅದಕ್ಕನುಸಾರವಾಗಿಯೇ ನಡೆಯುತ್ತಿದ್ದರು. ಅನೇಕ ವಿಷಯಗಳಲ್ಲಿ ಇವರ ಇಚ್ಛೆಯೂ ಪ್ರಜೆಗಳ ಧ್ಯೇಯವೂ ಒಪ್ಪಿದ್ದುದು ಇವರಿಗನು

ಕೂಲವಾಗಿತ್ತು. ಇವರು ಪಾರ್ಲಿಮೆಂಟಿನ ಸ್ಥಾನಮಾನಗಳನ್ನು ಗೌರವಿಸುತ್ತಿದ್ದರು. ಆದರೆ ಪಾರ್ಲಿಮೆಂಟ್ ಸಭೆಯು ಅಧೀನವಾಗಿಯೇ ಇತ್ತು. ಎಂಟನೆಯ ಹೆನ್ರಿಯು ಪೋಪನ ಅಧಿಕಾರವನ್ನು ತೊಡೆದುಹಾಕಿದಾಗ, ಮಠದ ಆಸ್ತಿಗಳನ್ನು ವಶಪಡಿಸಿಕೊಂಡಾಗ, ಪದೇ ಪದೇ ವಿವಾಹಗಳನ್ನು ಮಾಡಿಕೊಂಡು ತನ್ನನಂತರದಲ್ಲಿ ರಾಜತನಕ್ಕೆ ಇಷ್ಟಬಂದ ಮಕ್ಕಳನ್ನು ನಿಯಮಿಸಿದಾಗ, ಪಾರ್ಲಿಮೆಂಟ್ ಸಭೆಯು ಇವೆಲ್ಲವನ್ನೂ ತಕ್ಷಣವೇ ಶಾಸನಗಳನ್ನಾಗಿ ಮಾಡಲು ಸಿದ್ಧವಾಗಿತ್ತು. ಒಂದು ಸಂದರ್ಭದಲ್ಲಿ ಎಲಿಜಬೆತ್ ರಾಣಿಯು ಪ್ರಜಾಪ್ರತಿನಿಧಿ ಸಭೆಯನ್ನು ಕುರಿತು: "ಭಾಷಣ ಮಾಡುವ ಸ್ವಾತಂತ್ರ್ಯವೆಂದರೆ ಪ್ರತಿಯೊಬ್ಬ ಸದಸ್ಯರೂ ಇಷ್ಟಬಂದಂತೆ ಅಭಿಪ್ರಾಯಗಳನ್ನು ವ್ಯಕ್ತಪಡಿಸಬಹುದಾದ ಹಕ್ಕೆಂದು ಭಾವಿಸಬಾರದು; 'ಹೌದು' ಅಥವಾ 'ಅಲ್ಲ' ಎಂದು ಮಾತ್ರ ಹೇಳಬಹುದು" ಎಂದಳು! ಆದರೆ ಇವಳು ಪಾರ್ಲಿಮೆಂಟನ್ನು ಮರ್ಯಾದೆಯಿಂದ ಕಂಡು ಅದರ ಕೋರಿಕೆಗಳನ್ನು ಸಹಾನುಭೂತಿಯಿಂದ ಗಮನಿಸುತ್ತಿದ್ದಳು. ಟ್ಯೂಡರ್ ರಾಜರ ನಿರಂಕುಶಪ್ರಭುತ್ವವು ದೇಶವನ್ನು ಅನಾಯಕತ್ವದಿಂದ ರಕ್ಷಿಸಿದುದು ಮಾತ್ರವಲ್ಲದೆ ಪ್ರಜೆಗಳ ಹಿತವನ್ನು ಕೋರುವುದಾಗಿಯೂ ಇತ್ತು. ಪ್ರಪಂಚದ ಅನೇಕ ಕಡೆಗಳಲ್ಲಿ ರಾಷ್ಟ್ರೀಯ ಭಾವನೆಗೆ ವಿರೋಧಿಯಾಗಿರುವ ನಿರಂಕುಶ ಏಕಾಧಿಪತ್ಯವು ಇಲ್ಲಿ ಜನಾಂಗಕ್ಕೆ ಬೋಧನೆ ಮತ್ತು ರಕ್ಷಣೆಗಳನ್ನು ಕೊಡುವ ಮಿತ್ರನಾಗಿ ವರ್ತಿಸಿತು. ಟ್ಯೂಡರ್ ಮನೆತನದ ನೂರು ವರ್ಷಗಳ ಆಳಿಕೆಯಲ್ಲಿ ಪಾರ್ಲಿಮೆಂಟ್ ಸಭೆಯು ಮುಂದಿನ ರಾಜಕೀಯ ಹೋರಾಟಕ್ಕೆ ಸಾಂಗವಾದ ಶಿಕ್ಷಣವನ್ನು ಪಡೆದಂತಾಯಿತು.

## ೫. ಪಾರ್ಲಿಮೆಂಟಿನ ಕ್ರಾಂತಿ

ಎರಡು ಕ್ರಾಂತಿಗಳು, ಒಬ್ಬ ರಾಜನ ಶಿರಶ್ಛೇದನ, ಇನ್ನೊಬ್ಬನ ಸಿಂಹಾಸನತ್ಯಾಗ, ನಿರಂಕುಶಪ್ರಭುತ್ವದ ಅವಸಾನ, ಪಾರ್ಲಿಮೆಂಟ್ ಸಭೆಯ ಅಧಿಕಾರಸಾಧನೆ, ರಾಜಕೀಯ ಹಕ್ಕುಬಾಧ್ಯತೆಗಳ ಸ್ಪಷ್ಟ ಘೋಷಣೆ—ಇವೆಲ್ಲವೂ ಅಡಗಿರುವ ಹದಿನೇಳನೆಯ ಶತಮಾನದ ಇಂಗ್ಲೆಂಡಿನ ಚರಿತ್ರೆಯು ರಾಜನೀತಿಜ್ಞರಿಗೆ ಒಂದು ಗಣಿಯಂತಿದೆ.

ನೂರಾರು ವರ್ಷಗಳಿಂದ ಇಂಗ್ಲೆಂಡಿಗೂ ಸ್ಕಾಟ್ಲೆಂಡಿಗೂ ಬದ್ಧದ್ವೇಷವಿದ್ದಿತು. ಈಗ ಒಬ್ಬ ಸ್ಕಾಟ್ಲೆಂಡ್ ದೇಶದವನೇ ರಾಜಪದವಿಗೆ ಬಂದದ್ದು ಆಂಗ್ಲೇಯರಿಗೆ ಅಷ್ಟೇನೂ ರುಚಿಸಲಿಲ್ಲ. ಅಲ್ಲದೆ, ಸ್ಟೂವರ್ಟ್ ವಂಶದ ಮೊದಲನೆಯ ಮತ್ತು ಎರಡನೆಯ ರಾಜರಾದ ಒಂದನೆಯ ಜೇಮ್ಸನೂ ಒಂದನೆಯ ಚಾರ್ಲ್ಸನೂ ವಿವೇಕರಹಿತರಾಗಿಯೂ ವ್ಯವಹಾರಜ್ಞಾನವಿಲ್ಲದವರಾಗಿಯೂ ಇದ್ದರು. ಕಾಲವೂ ಬಹುಮಟ್ಟಿಗೆ ಬದಲಾಯಿಸಿ ಹೋಗಿತ್ತು. ಇದುವರೆಗೂ ಆಂಗ್ಲೇಯರ ರಾಜ್ಯವ್ಯವಸ್ಥೆಯಲ್ಲಿ ರಾಜನೇ ಪ್ರಧಾನಸ್ಥಾನವನ್ನು ಪಡೆದಿದ್ದನು. ಇತರ ಎಲ್ಲ ಸಂಸ್ಥೆಗಳೂ ರಾಜನಿಗೆ ಅಧೀನವಾಗಿದ್ದುವು. ಸೌರವ್ಯೂಹದಲ್ಲಿ ಸೂರ್ಯನಿಗಿರುವ ಸ್ಥಾನವು ರಾಜಕೀಯ ಜೀವನದಲ್ಲಿ ರಾಜನಿಗಿತ್ತು. ಈಗ ಪಾರ್ಲಿಮೆಂಟ್ ಸಭೆಯು ಆ ಪದವಿಯನ್ನು ಅನುಭವಿಸಬೇಕೆಂದು ಇಚ್ಛಿಸಿತು. ಆದರೆ ಜೇಮ್ಸನೂ ಚಾರ್ಲ್ಸನೂ ತಮಗೆ ದೈವಿಕವಾದ ಶ್ರೇಷ್ಠಾಧಿಕಾರವಿದೆಯೆಂದೂ, ಯಾವ ಮಾನುಷ ಸಂಸ್ಥೆಗೂ ತಾವು ಜವಾಬ್ದಾರರಲ್ಲವೆಂದೂ, ತಮಗೆದುರಾಗಿ ಪ್ರಜೆಗಳಿಗೆ ಯಾವ ಹಕ್ಕೂ

ಇಲ್ಲವೆಂದೂ, ರಾಜಭಕ್ತಿಯೇ ಪ್ರಜೆಗಳ ಮುಖ್ಯಧರ್ಮವೆಂದೂ ಸದಾ ಸಾರುತ್ತಿದ್ದರು.

ಆಡಳಿತದ ತತ್ವದಲ್ಲಿ ಮಾತ್ರವಲ್ಲದೆ ಮತ, ಸಂಧಿವಿಗ್ರಹ ನೀತಿ, ಮಂತ್ರಿಗಳ ನೇಮಕ ಮತ್ತು ಮೇಲ್ವಿಚಾರಣೆ ಇವು ಗಳಲ್ಲೆಲ್ಲ ರಾಜರಿಗೂ ಪಾರ್ಲಿಮೆಂಟ್ ಸಭೆಗೂ ವೈಮನಸ್ಯವು ಮೊದಲಿಂದಲೇ ಉಂಟಾಯಿತು. ಆಂಗ್ಲೇಯರಲ್ಲಿ ಅನೇಕರು ಮತವಿಷಯಗಳಲ್ಲಿ ಸಂಪೂರ್ಣವಾದ ಸ್ವಾತಂತ್ರ್ಯವನ್ನು ಕೋರುವವರಾಗಿದ್ದರು. ಆದರೆ ಈ ಇಬ್ಬರು ದೊರೆಗಳೂ ಜನಾಭಿಪ್ರಾಯಕ್ಕೆ ವಿರೋಧವಾದ ಮತನಿಯಮಗಳನ್ನು ಏರ್ಪಡಿಸಿದರು. ಆಂಗ್ಲೇಯರು ಸ್ಪ್ಯಾನಿಷರನ್ನು ಮನಃಪೂರ್ವಕ ವಾಗಿ ದ್ವೇಷಿಸುತ್ತಿರುವಾಗ ಜೇಮ್ಸನು ತನ್ನ ಮಗನಿಗೆ ಸ್ಪೈಯಿನ್ ದೇಶದ ರಾಜಪುತ್ರಿಯನ್ನು ತಂದು ವಿವಾಹಮಾಡಿಸಲು ವಿಶ್ವ ಪ್ರಯತ್ನ ಮಾಡಿದನು. ಗುಣಹೀನರನ್ನು ಮಂತ್ರಿಗಳಾಗಿ ಆರಿಸು ವುದರಲ್ಲಿ ಈ ರಾಜರಿಬ್ಬರೂ ಅತಿಸಮರ್ಥರಾಗಿದ್ದರು. ತಾನು ಒಪ್ಪಿದವರನ್ನು ಮಾತ್ರ ಮಂತ್ರಿಗಳಾಗಿ ನೇಮಿಸಬೇಕೆಂದೂ, ಮಂತ್ರಿಗಳು ತನ್ನ ಆಜ್ಞಾಧಾರಕರಾಗಿರಬೇಕೆಂದೂ ಪಾರ್ಲಿ ಮೆಂಟ್ ಸಭೆಯು ವಾದಿಸಿತು.

ಅತಿ ತೀವ್ರವಾದ ಹೋರಾಟವು ನಡೆದದ್ದು ಹಣದ ವಿಚಾರ ದಲ್ಲಿ. ತೆರಿಗೆಗೆ ಸಂಬಂಧಪಟ್ಟ ವಿಷಯಗಳಲ್ಲಿ ಆಂಗ್ಲೇಯರಷ್ಟು ಸೂಕ್ಷ್ಮಗ್ರಾಹಿಗಳು ಇತರ ಜನಾಂಗಗಳಲ್ಲಿರಲಾರರು. ಪಾರ್ಲಿ ಮೆಂಟ್‌ಸಭೆಯು ಪ್ರತಿಪಾದಿಸಿದ ಕೆಲವು ಮೂಲತತ್ವಗಳಿವು:— ೧. ಅದರ ಒಪ್ಪಿಗೆಯನ್ನು ಪಡೆಯದೆ ತೆರಿಗೆಗಳನ್ನು ಎತ್ತಲು ರಾಜನಿಗೆ ಅಧಿಕಾರವಿಲ್ಲ. ೨. ಅದರ ಕೊರತೆಗಳನ್ನು ರಾಜನು ಪರಿಹರಿಸದಿದ್ದಲ್ಲಿ ಅವನಿಗೆ ಧನಸಹಾಯವನ್ನು ನಿಲ್ಲಿಸಬಹುದು.

೩. ಅವನು ಪಡೆದ ಹಣವನ್ನು ನಿರ್ದಿಷ್ಟಕಾರ್ಯಕ್ಕೆ ಮಾತ್ರ ಉಪಯೋಗಿಸಬೇಕು.

೧೬೨೮ ರಲ್ಲಿ ಚಾರ್ಲ್ಸನು "ಪೆಟಿಷನ್ ಆಫ್ ರೈಟ್" ಎಂಬ ಪ್ರಜೆಗಳ ಹಕ್ಕುಗಳನ್ನು ಸ್ಥಾಪಿಸುವ ಪತ್ರಕ್ಕೆ ಸಹಿ ಹಾಕಿದನು. ಇದರ ಪ್ರಕಾರ ಇವನು ಇಷ್ಟಬಂದಂತೆ ತೆರಿಗೆ ಯೆತ್ತುವ ಹಕ್ಕನ್ನೂ ಪ್ರಜೆಗಳನ್ನು ವಿಚಾರಣೆಯಿಲ್ಲದೆ ಸೆರೆಯಲ್ಲಿಡುವ ಅಧಿಕಾರವನ್ನೂ ತ್ಯಜಿಸಬೇಕಾಯಿತು. ಇದಕ್ಕೆ ಪ್ರತಿಫಲವಾಗಿ ಪಾರ್ಲಿಮೆಂಟ್ ಸಭೆಯು ಸಂತೋಷದಿಂದ ಧನಸಹಾಯವನ್ನು ಮಾಡಿತು. ಆದರೆ ಶೀಘ್ರದಲ್ಲಿಯೇ ರಾಜನು ಈ ಒಡಂಬಡಿಕೆಯನ್ನು ಮುರಿದು, ೧೧ ವರ್ಷಗಳ ಕಾಲ ಪಾರ್ಲಿಮೆಂಟ್ ಸಭೆ ಸೇರಿಸದೆಯೇ ಪ್ರಜಾಹಿಂಸಕನಾಗಿ ಆಳಿದನು. ಅನಂತರ ಅಕ್ರಮವಾದ ವಸೂಲಿಯಿಂದ ಸಾಕಾದಷ್ಟು ಹಣವನ್ನು ಪಡೆಯಲಾಗದೆ, ಪಾರ್ಲಿಮೆಂಟನ್ನು ಪುನಃ ಸೇರಿಸಬೇಕಾಯಿತು.

೧೬೪೦ ರಲ್ಲಿ ಸೇರಿದ "ಲಾಂಗ್ ಪಾರ್ಲಿಮೆಂಟ್" ಸಭೆಯು ಅತಿ ಉಗ್ರವಾದ ಕಾರ್ಯಕ್ರಮವನ್ನು ಕೈಗೊಂಡಿತು. ಮೂರು ವರ್ಷಗಳಿಗೊಂದಾವೃತ್ತಿಯಾದರೂ ಪಾರ್ಲಿಮೆಂಟ್ ಸಭೆ ಸೇರಬೇಕೆಂದು ವಿಧಿಸಿತು. ಚಾರ್ಲ್ಸನ ದುರ್ಮಂತ್ರಿಗಳನ್ನು ಮರಣದಂಡನೆಗೆ ಒಳಪಡಿಸಿತು. ರಾಜನ ದುರಾಡಳಿತಕ್ಕೆ ಅಂಗಗಳಾಗಿದ್ದ "ಸ್ಟಾರ್ ಚೇಂಬರ್ ಕೋರ್ಟ್" ಮುಂತಾದ ನ್ಯಾಯಾಸ್ಥಾನಗಳನ್ನು ರದ್ದುಪಡಿಸಿತು. ರಾಜನ ಅಪರಾಧಗಳನ್ನೆಲ್ಲ ಆಮೂಲಾಗ್ರವಾಗಿ ವಿವರಿಸಿದ "ಗ್ರಾಂಡ್ ರಿಮಾನ್ಸ್ಟ್ರನ್ಸ್" ಎಂಬ ಮಹಾ ಆಕ್ಷೇಪಣಾಪತ್ರವನ್ನು ಅಂಗೀಕರಿಸಿತು. ಈ ಸಂದರ್ಭದಲ್ಲಿ ಚಾರ್ಲ್ಸನ ಅವಿವೇಕವು ಮಿತಿಮೀರಿ

ಹೋಯಿತು. "ಪಾರ್ಲಿಮೆಂಟ್ ನಿಮಗೆ ಮಾಡುವ ಅಪಮಾನವನ್ನು ನೀವು ಸಹಿಸುವುದಕ್ಕೆ ಮಿತಿಯಿಲ್ಲವೇ ?" ಎಂದು ಇವನ ಹೆಂಡತಿ ಚುಚ್ಚಿ ಮಾತಾಡಲು, ಇವನು ಕೆಲವು ಸೈನಿಕರೊಡನೆ ಪ್ರಜಾಪ್ರತಿನಿಧಿಸಭೆಯೊಳಕ್ಕೆ ನುಗ್ಗಿ ಅದರ ಐದು ಜನ ಮುಖಂಡರನ್ನು ಕೈದುಮಾಡಲು ಯತ್ನಿಸಿದನು. ರಾಜನಿಗೂ ಪಾರ್ಲಿಮೆಂಟಿಗೂ ಕೂಡಲೇ ಯುದ್ಧವು modalಾಯಿತು.

ಈ ಅಂತರ್ಯುದ್ಧವು ಐದು ವರ್ಷಗಳ ಕಾಲ ನಡೆಯಿತು. ಅತ್ಯುತ್ಸಾಹಶಾಲಿಯಾದ ಆಲಿವರ್ ಕ್ರಾಮ್‌ವೆಲ್ ಎಂಬ ಧೀರನು ಪಾರ್ಲಿಮೆಂಟ್‌ಪಕ್ಷದ ನಾಯಕನಾದನು. ಇವನು ಬಲವಾದ ಸೈನ್ಯವೊಂದನ್ನು ಕೂಡಿಸಿ, ತರಪೇತುಮಾಡಿ, ರಾಜಪಕ್ಷದವರನ್ನು ಸಂಪೂರ್ಣವಾಗಿ ಸೋಲಿಸಿದನು. ಅನಂತರ ಸರ್ವಶಕ್ತಿಯುಳ್ಳ ಸೈನ್ಯವು ಚಾರ್ಲ್ಸನನ್ನು ದೇಶದ್ರೋಹಿಯೆಂಬ ಆಪಾದನೆಯಮೇಲೆ ವಿಚಾರಣೆಗೊಳಪಡಿಸಿತು. ೧೬೪೯ ರಲ್ಲಿ ರಾಜನು ಮರಣದಂಡನೆಗೆ ಗುರಿಯಾದನು. ರಾಜಪದವಿಯನ್ನೇ ತೆಗೆದುಹಾಕಲಾಯಿತು. ಅದರೊಂದಿಗೆ ಶ್ರೀಮಂತರ ಸಭೆಯೂ ಇಂಗ್ಲೆಂಡಿನ ಮತಸಂಸ್ಥೆಯೂ ಕೊನೆಗಂಡುವು. ಕೆಲವು ವರ್ಷಗಳ ಕಾಲ ಇಂಗ್ಲೆಂಡ್‌ದೇಶವು ಪ್ರಜಾಧಿಪತ್ಯಕ್ಕೆ ಒಳಪಟ್ಟಿತು.

ಕ್ರಾಮ್‌ವೆಲ್ಲನು ಸ್ವೇಚ್ಛಾಧಿಕಾರವನ್ನು ಆಶಿಸಲಿಲ್ಲ. ಜನಾಭಿಪ್ರಾಯಕ್ಕನುಸಾರವಾಗಿ ಆಡಳಿತವನ್ನು ನಡೆಸಬೇಕೆಂಬ ಸದುದ್ದೇಶ ಅವನಿಗೆ ಇತ್ತು. ಹೊಸ ಹೊಸ ರಾಜಕೀಯ ವ್ಯವಸ್ಥೆಗಳನ್ನು ರಚಿಸಿ ಒಂದೊಂದಾಗಿ ಅವನ್ನು ಪರೀಕ್ಷಿಸಿ ನೋಡಿದನು. ಪಾರ್ಲಿಮೆಂಟಿನ ಸದಸ್ಯರು ನೀತಿವಂತರಾಗಿದ್ದರೆ ದೇಶಕ್ಕೆ ಒಳ್ಳೆಯದೆಂದು ಭಾವಿಸಿ ಸಾಧುಸಜ್ಜನರ ಪಾರ್ಲಿಮೆಂಟ್ ಒಂದನ್ನು ಸೇರಿಸಿದನು. ವ್ಯವಹಾರಜ್ಞಾನದ ಗಂಧವೇ ಇವರಿ

ಗಿರಲಿಲ್ಲ; ಇವರು ಅವಿವೇಕವಾದ ಸಲಹೆಗಳನ್ನು ಮಾಡಿ ನಗೆಗೀಡಾದರು. ಈ ಪ್ರಯೋಗವು ನಿಷ್ಫಲವಾಗಲು, ಕ್ರಾಮ್‌ವೆಲ್ಲನು 'ಪ್ರೊಟೆಕ್ಟರ್' ಎಂದರೆ ಸಂರಕ್ಷಕನೆಂಬ ಬಿರುದನ್ನು ಪಡೆದು ಸಾಮಾನ್ಯ ಜನರ ಸಭೆಯನ್ನು ಮಾತ್ರ ಒಳಕೊಂಡ ಪಾರ್ಲಿಮೆಂಟಿನ ಸಹಾಯದಿಂದ ಆಳತೊಡಗಿದನು. ಆದರೆ ಶೀಘ್ರದಲ್ಲಿಯೇ ತೀವ್ರವಾದ ಭಿನ್ನಾಭಿಪ್ರಾಯಗಳು ಹುಟ್ಟಿದುದರಿಂದ ಇವನು ಈ ಪಾರ್ಲಿಮೆಂಟನ್ನು ವಿಸರ್ಜನೆಮಾಡಿದನು. ಹೀಗೆ ಸಜ್ಜನರ ಸಹಾಯದಿಂದಾಗಲಿ ಸಾಮಾನ್ಯಜನರ ಸಹಾಯದಿಂದಾಗಲಿ ಆಡಳಿತವನ್ನು ನಡೆಸಲಾಗದೆ, ಸೇನಾನಾಯಕರ ಮೂಲಕ ಆಳಲುಪಕ್ರಮಿಸಿದನು. ಇದು ಜನರಿಗೆ ರುಚಿಸಲಿಲ್ಲ. ಪುನಃ ಇನ್ನೊಂದು ಪಾರ್ಲಿಮೆಂಟನ್ನು ಸೇರಿಸಿದನು. ಕ್ರಾಮ್‌ವೆಲ್ಲನು ರಾಜನಾಗಬೇಕೆಂದೂ ಶ್ರೀಮಂತರ ಸಭೆಯನ್ನು ಪುನರುಜ್ಜೀವನಗೊಳಿಸಬೇಕೆಂದೂ ಈ ಪಾರ್ಲಿಮೆಂಟಿನ ಸದಸ್ಯರು ಕೆಲವರು ಸೂಚಿಸಿದರು. ಈ ಸಲಹೆಗಳು ಸೈನಿಕರಿಗೆ ಸರಿಬೀಳುವುದಿಲ್ಲವೆಂದು ತಿಳಿದು ಕ್ರಾಮ್‌ವೆಲ್ಲನು ಇವುಗಳನ್ನು ಅಂಗೀಕರಿಸಲಿಲ್ಲ. ಸಂರಕ್ಷಕನೆಂಬ ಪದವಿಯನ್ನೇ ಪಡೆದಿದ್ದನು. ಇವನು ೧೬೫೮ ರಲ್ಲಿ ಮೃತನಾದನು. ಇದಾದ ಎರಡು ವರ್ಷಗಳ ಕಾಲದಲ್ಲಿ ರಾಜ, ಶ್ರೀಮಂತರ ಸಭೆ, ಮತಸಂಸ್ಥೆ, ಇವೆಲ್ಲವೂ ಪುನಃ ರಾಜ್ಯಾಂಗದಲ್ಲಿ ಬಂದು ಸೇರಿಕೊಂಡುವು. ರಾಜಕೀಯ ಅವ್ಯವಸ್ಥೆಗೆ ಸ್ಟೂವರ್ಟ್ ರಾಜರ ಆಳಿಕೆಯ ಲೋಪ ದೋಷಗಳೇ ಕಾರಣಗಳೆಂದೂ, ಶತಮಾನಗಳಿಂದ ನಡೆದುಕೊಂಡು ಬಂದ ತಮ್ಮ ರಾಜ್ಯವ್ಯವಸ್ಥೆಯಲ್ಲಿ ಸ್ವಾಭಾವಿಕವಾದ ನ್ಯೂನತೆಗಳಿಲ್ಲವೆಂದೂ ತೀರ್ಮಾನಿಸಿ, ಆಂಗ್ಲೇಯರು ತಮ್ಮ ಹಳೆಯ ಪದ್ಧತಿಯನ್ನು ಪುನಃ ಸ್ಥಾಪನೆಮಾಡಿಕೊಂಡರು.

ಈಗ ಸಿಂಹಾಸನಕ್ಕೆ ಬಂದ ಎರಡನೆಯ ಚಾರ್ಲ್ಸನು ಸ್ಟ್ಯುವರ್ಟ್ ವಂಶದ ರಾಜರಲ್ಲೆಲ್ಲ ಅತ್ಯಂತ ಚತುರನಾಗಿದ್ದನು. ಆದರೆ ತನ್ನ ಬುದ್ಧಿಶಕ್ತಿ ಸಾಮರ್ಥ್ಯಗಳನ್ನು ಜನಾಂಗದ ಹಿತಕ್ಕಾಗಿ ಇವನು ಉಪಯೋಗಿಸಲಿಲ್ಲ. ಇವನಲ್ಲಿ ಪ್ರಾಮಾಣಿಕತನವೇ ಇರಲಿಲ್ಲ. ಅಲ್ಲದೆ ಪರದೇಶಗಳೊಡನೆ ಇವನು ಅನುಸರಿಸಿದ ನೀತಿ ಇಂಗ್ಲೆಂಡಿಗೆ ತೀರ ಅಪಮಾನಕರವಾಗಿತ್ತು. ಹಣದಾಸೆಯಿಂದ ಫ್ರಾನ್ಸ್ ದೇಶದ ರಾಜನಿಗೆ ವಿಧೇಯನಾಗಿ ಅವನ ದುರ್ಬೋಧೆಗೆ ಒಳಪಟ್ಟು ತನ್ನ ಪ್ರಜೆಗಳಿಗೆ ವಿರುದ್ಧವಾಗಿ ನಡೆದನು. ಇವನು ರೋಮನ್ ಕ್ಯಾಥೊಲಿಕ್ ಮತಸ್ಥನಾಗಿದ್ದುದರಿಂದ ಕ್ಯಾಥೊಲಿಕ್ಕರಿಗೆ ನ್ಯಾಯವಿರುದ್ಧವಾದ ಹಕ್ಕುಗಳನ್ನು ಕೊಡಲು ಯತ್ನಿಸಿದನು. ಆದರೆ ಪಾರ್ಲಿಮೆಂಟ್ ಸಭೆಯು ಇವನನ್ನು ಬಲವಾಗಿ ಪ್ರತಿಭಟಿಸಿ "ಟೆಸ್ಟ್ ಆ್ಯಕ್ಟ್" ಎಂಬ ಶಾಸನವನ್ನು ರಚಿಸಿತು. ಇದರ ಪ್ರಕಾರ ಆಂಗ್ಲೇಯರ ರಾಷ್ಟ್ರೀಯ ಮತಕ್ಕೆ ಸೇರಿದವರು ಮಾತ್ರ ಸರ್ಕಾರದ ಉದ್ಯೋಗಗಳಿಗೆ ಅರ್ಹರೆಂದು ನಿರ್ಣಯಿಸಲಾಯಿತು. ೧೬೭೯ ರಲ್ಲಿ ಪಾರ್ಲಿಮೆಂಟ್ ಸಭೆಯು "ಹ್ಯಾಬಿಯಸ್ ಕಾರ್ಪಸ್ ಆ್ಯಕ್ಟ್" ಎಂಬ ಕಾನೂನನ್ನು ರಚಿಸಿ ಆಂಗ್ಲೇಯರ ವ್ಯಕ್ತಿಸ್ವಾತಂತ್ರ್ಯವನ್ನು ಸ್ಥಿರಪಡಿಸಿತು. ನ್ಯಾಯಾಧಿಕಾರಿಯೊಬ್ಬನ ಮುಂದೆ ನಿಲ್ಲಿಸಿ ಅವನ ಅಪ್ಪಣೆಯನ್ನು ಪಡೆಯದೆ ಯಾರನ್ನೂ ಬಂಧನದಲ್ಲಿಡಕೂಡದೆಂದು ಈ ಕಾನೂನು ವಿಧಿಸಿತು. ರೋಮನ್ ಕ್ಯಾಥೊಲಿಕ್ ಮತಸ್ಥನೆಂಬ ಕಾರಣದಿಂದ ಚಾರ್ಲ್ಸನ ತಮ್ಮನಾದ ಜೇಮ್ಸನನ್ನು ಸಿಂಹಾಸನಕ್ಕೆ ಬಾರದಂತೆ ತಡೆಗಟ್ಟಲು ಕೆಲವು ಸದಸ್ಯರು ಪಾರ್ಲಿಮೆಂಟಿನಲ್ಲಿ ಒಂದು ನಿರ್ಣಯವನ್ನು ತಂದರು. ಕೂಡಲೆ ರಾಜನು ಆ ಪಾರ್ಲಿಮೆಂ

ಟನ್ನು ಕೊನೆಗಾಣಿಸಿ ಪುನಃ ಪಾರ್ಲಿಮೆಂಟನ್ನು ಸಭೆ ಸೇರಿಸ ದೆಯೇ ಐದು ವರ್ಷಗಳ ಕಾಲ ನಿರಂಕುಶ ಪ್ರಭುತ್ವವನ್ನು ಅನುಭವಿಸಿದನು. ಈ ಸಮಯದಲ್ಲಿಯೇ ಆಂಗ್ಲೇಯರ ಮುಖ್ಯ ರಾಜಕೀಯ ಪಕ್ಷಗಳಾದ "ವಿಗ್" ಮತ್ತು "ಟೋರಿ" ಎಂಬ ಎರಡು ಪಂಗಡಗಳು ಹುಟ್ಟಿದುವು.

೧೬೮೫ ರಲ್ಲಿ ಎರಡನೆಯ ಜೇಮ್ಸನು ರಾಜನಾದನು. ಅಂತರ್ಯುದ್ಧಕ್ಕಿಂತ ಕ್ಯಾಥೊಲಿಕ್ಕನ ಆಳಿಕೆಯೇ ವಾಸಿಯೆಂದು ಭಾವಿಸಿ ಇವನನ್ನು ಯಾರೂ ಎದುರಿಸಲಿಲ್ಲ. ಆದರೆ ಇವನು ಮೂರು ವರ್ಷಗಳ ಕಾಲ ಆಳಿದಮೇಲೆ, "ಯಾವ ಕಷ್ಟವಾ ದರೂ ಬರಲಿ, ಈ ಕ್ಯಾಥೊಲಿಕ್ ರಾಜನ ಹಾವಳಿ ತಪ್ಪಿದರೆ ಸಾಕು" ಎಂದು ಜನರು ನಿರ್ಧರಿಸಿದರು.

ತಂದೆಗುಂಟಾದ ಗತಿಯಿಂದ ಬುದ್ಧಿ ಕಲಿಯದೆ ಜೇಮ್ಸನು ಸಮಸ್ತ ವಿಷಯಗಳಲ್ಲಿಯೂ ಜನಾಭಿಪ್ರಾಯವನ್ನು ವಿರೋಧಿ ಸಿದನು. ಪ್ರಾಟೆಸ್ಟೆಂಟರನ್ನು ಉದ್ಯೋಗದಿಂದ ತಳ್ಳಿಹಾಕಿ ಕ್ಯಾಥೊಲಿಕ್ಕರನ್ನು ಶಾಸನ ವಿರುದ್ಧವಾಗಿ ಅಧಿಕಾರ ಪದವಿ ಗಳಿಗೆ ನೇಮಿಸಿದನು. ದೇಶದ ಕಾನೂನುಗಳನ್ನು ಇಷ್ಟ ಬಂದಂತೆ ನಿರಾಕರಿಸಿ, ಪ್ರಜೆಗಳನ್ನು ಬೆದರಿಸುವುದಕ್ಕಾಗಿ ಒಂದು ಸೈನ್ಯವನ್ನಿಟ್ಟಿದ್ದನು.

ಇವನ ಹಿಂಸೆಯನ್ನು ಸಹಿಸಲಾರದೆ ರಾಜ್ಯದ ಮುಖಂಡರು ಇವನ ಅಳಿಯನೂ ಹಾಲೆಂಡ್ ದೇಶದ ದೊರೆಯೂ ಆದ ವಿಲಿಯಮ್ಮನಿಗೆ ಆಹ್ವಾನವೊಂದನ್ನು ಕಳುಹಿಸಿ, ಸೈನ್ಯದೊಡನೆ ಬಂದು ಕ್ರೂರಿಯಾದ ಜೇಮ್ಸನ ಕಾಟವನ್ನು ತಪ್ಪಿಸಬೇಕೆಂದು ಪ್ರಾರ್ಥಿಸಿದರು. ಇದರ ಪ್ರಕಾರ ವಿಲಿಯಮ್ಮನು ಬರಲಾಗಿ ಜೇಮ್ಸನು ಸಿಂಹಾಸನವನ್ನು ತೊರೆದು ಓಡಿಹೋದನು. ಈ

ರೀತಿಯಾಗಿ ೧೬೮೮ ರಲ್ಲಿ ಪ್ರಾಪ್ತವಾದ ಮಹಾಕ್ರಾಂತಿ ಆಂಗ್ಲೇಯರ ಅದೃಷ್ಟವಶದಿಂದ ಒಂದು ತೊಟ್ಟೂ ರಕ್ತಪಾತ ವಿಲ್ಲದೆ ಸಮಾಪ್ತಿಗೊಂಡಿತು.

---

## ೬. ಪ್ರಜಾಪ್ರಭುತ್ವ ಸಾಧನೆ

೧೨೧೫ ರಲ್ಲಿ ಏರ್ಪಟ್ಟ ಮಹಾಸ್ವಾತಂತ್ರ್ಯ ಪತ್ರ, ೧೬೨೮ ರಲ್ಲಿ ನಿರ್ಣಯವಾದ ಪೆಟಿಷನ್ ಆಫ್ ರೈಟ್, ಮತ್ತು ೧೬೮೯ ರಲ್ಲಿ ಹೊರಬಿದ್ದ ಬಿಲ್ ಆಫ್ ರೈಟ್ಸ್—ಈ ಮೂರು ಕಾಯಿದೆ ಗಳೂ ಸೇರಿ ಇಂಗ್ಲೆಂಡಿನ ರಾಜ್ಯವ್ಯವಸ್ಥೆಯ ವೇದಗಳಾಗಿವೆ ಎಂದು ಚ್ಯಾತಮ್ ಎಂಬ ಪ್ರಸಿದ್ಧ ರಾಜನೀತಿಜ್ಞನೊಬ್ಬನು ಹೇಳಿದ್ದಾನೆ. ಬಿಲ್ ಆಫ್ ರೈಟ್ಸ್ ಎಂಬ ಹಕ್ಕುಬಾಧ್ಯತೆಗಳ ಪ್ರಸಿದ್ಧ ಪತ್ರವು ಪ್ರಖ್ಯಾತರಾದ ವಿಗ್ ಪಕ್ಷದ ನಾಯಕರು ಗಳಿಂದ ರಚಿತವಾಗಿ ಮೂರನೆಯ ವಿಲಿಯಮ್ಮನ ಆಳಿಕೆಯ ಆದಿಯಲ್ಲಿ ಅಂಗೀಕೃತವಾಯಿತು. ಪಾರ್ಲಿಮೆಂಟಿನ ಅನುಮತಿ ಯಿಲ್ಲದೆ ತೆರಿಗೆಯನ್ನೆತ್ತುವುದಕ್ಕೂ, ಕಾನೂನುಗಳನ್ನು ರದ್ದು ಮಾಡುವುದಕ್ಕೂ, ಸೈನ್ಯವನ್ನು ಇಟ್ಟುಕೊಳ್ಳುವುದಕ್ಕೂ ರಾಜ ನಿಗೆ ಅಧಿಕಾರವಿಲ್ಲವೆಂದು ಈ ಪತ್ರವು ಸ್ಪಷ್ಟಪಡಿಸಿತು. ತಮ್ಮ ಇಷ್ಟಾನುಸಾರವಾಗಿ ಪಾರ್ಲಿಮೆಂಟಿನ ಸದಸ್ಯರನ್ನು ಚುನಾಯಿ ಸುವುದು, ಪಾರ್ಲಿಮೆಂಟಿನಲ್ಲಿ ನಿರ್ಭಯವಾಗಿ ಭಾಷಣ ಮಾಡು ವುದು, ನ್ಯಾಯವಿಚಾರಣೆಗಳಲ್ಲಿ ನಿಷ್ಪಕ್ಷಪಾತವಾದ ತೀರ್ಪನ್ನು

ಪಡೆಯುವುದು—ಈ ಹಕ್ಕುಗಳೆಲ್ಲ ಪ್ರಜೆಗಳಿಗುಂಟೆಂದೂ ತೀರ್ಮಾನವಾಯಿತು. ಈ ಪತ್ರವು ಅಂಗೀಕೃತವಾದ ಮೇಲೆ ಇಂಗ್ಲೆಂಡಿನಲ್ಲಿ ನಿರಂಕುಶಪ್ರಭುತ್ವಕ್ಕೆ ಎಡೆಯಿಲ್ಲದಂತಾಯಿತು. ಇದೇ ಸಮಯದಲ್ಲಿ ಏರ್ಪಟ್ಟ ಇತರ ಕಾನೂನುಗಳ ಪ್ರಕಾರ ಪಾರ್ಲಿಮೆಂಟ್ ಸಭೆಯು ಪದೇ ಪದೇ ಸೇರಬೇಕೆಂಬ ನಿಯಮವೂ ಪರಮತಸಹಿಷ್ಣುತೆಯೂ ಸ್ಥಾಪಿತವಾದುವು. ರಾಜ್ಯದ ಶ್ರೇಷ್ಠಾಧಿಕಾರವು ಯಾರಿಗೆ ಸೇರಿದುದೆಂಬ ವಿಷಯವಾಗಿ ರಾಜನಿಗೂ ಪಾರ್ಲಿಮೆಂಟಿಗೂ ಹದಿನೇಳನೆಯ ಶತಮಾನದಲ್ಲಿ ನಡೆದ ಹೋರಾಟವು ಪಾರ್ಲಿಮೆಂಟಿಗನುಕೂಲವಾಗಿ ಮುಕ್ತಾಯಗೊಂಡಿತು. ಆಡಳಿತದ ಮುಖ್ಯಾಧಿಕಾರವು ಪಾರ್ಲಿಮೆಂಟಿನದಾಯಿತು. ದೇಶದ ಹಣಕಾಸಿನ ವ್ಯವಸ್ಥೆಯಲ್ಲಿ ಪೂರ್ಣಾಧಿಕಾರವನ್ನು ಹೊಂದಿರುವುದೇ ಪಾರ್ಲಿಮೆಂಟಿನ ಶಕ್ತಿಗೆ ಮೂಲಕಾರಣ. ಪಾರ್ಲಿಮೆಂಟಿನ ಎರಡು ಸಭೆಗಳಲ್ಲಿ ಪ್ರಜಾಪ್ರತಿನಿಧಿಸಭೆಯು ಅತಿ ಪ್ರಬಲವಾಯಿತು. ರಾಜನೂ ಜನಾಂಗದ ಒಬ್ಬ ಉದ್ಯೋಗಸ್ಥನಾದನು. ಪ್ರಜೆಗಳು ಮಾತ್ರವಲ್ಲದೆ ಸರ್ಕಾರವೂ ಕೂಡ ಕಾನೂನುಗಳನ್ನು ಅನುಸರಿಸಬೇಕೆಂಬ ನೀತಿಯು ಸ್ಥಿರವಾಯಿತು. ಇಂಗ್ಲೆಂಡನ್ನಾಳುವುದು ರಾಜನಲ್ಲ, ಮಂತ್ರಿಯಲ್ಲ, ಪ್ರತಿನಿಧಿ ಸಭೆಯೂ ಅಲ್ಲ; ಕಾನೂನು ಕಟ್ಟಳೆಗಳೇ ಆಳುತ್ತಿರುವುವೆಂದು ಹೇಳಬಹುದು.

ವಿಲಿಯಮ್ಮನು ಕಾಲವಾದ ಮೇಲೆ ಆ್ಯನ್ ರಾಣಿಯು ಆಳುತ್ತಿದ್ದಾಗ, ೧೭೦೭ರಲ್ಲಿ, ಇಂಗ್ಲೆಂಡ್ ದೇಶವೂ ಸ್ಕಾಟ್ಲೆಂಡ್ ದೇಶವೂ ಸೇರಿ ಗ್ರೇಟ್ ಬ್ರಿಟನ್ ಎಂಬ ಹೆಸರಿನಲ್ಲಿ ಒಂದೇ ರಾಜ್ಯವಾಗಿ ಐಕ್ಯವಾದುವು. ಒಂದು ಸಾವಿರ ವರ್ಷಗಳಿಗಿಂತ ಹೆಚ್ಚಾಗಿ ದ್ವೇಷಭಾವದಿಂದ ವರ್ತಿಸುತ್ತಿದ್ದ ಈ ಎರಡು ರಾಜ್ಯ

ಗಳು ಈಗ ಪರಸ್ಪರ ಭದ್ರತೆಗ್ಗಾಗಿ ತಮ್ಮ ವೈರವನ್ನು ತೊರೆದು ಒಂದಾಗಿಹೋದುವು.

೧೭೧೪ ರಲ್ಲಿ ಆ್ಯನ್ ರಾಣಿಯು ಸಂತತಿಯಿಲ್ಲವೆ ಮೃತಳಾದಳು. ಸ್ಟೂವರ್ಟ್ ವಂಶವು ಕೊನೆಗಂಡು ರಾಜಪದವಿಯು ದೂರದ ನಂಟರಿಗೆ ಸೇರಿತು. ಜರ್ಮನಿಯ ಒಂದು ಚಿಕ್ಕ ಸಂಸ್ಥಾನವಾದ ಹ್ಯಾನೋವರ್ ಪ್ರಾಂತದ ದೊರೆಯು ಒಂದನೆಯ ಜಾರ್ಜ್ ಎಂಬ ಹೆಸರಿನಲ್ಲಿ ಇಂಗ್ಲೆಂಡಿನ ರಾಜನಾದನು. ಇಂದು ಬ್ರಿಟಿಷ್ ಸಾಮ್ರಾಜ್ಯದ ಸಾರ್ವಭೌಮರಾದ ಆರನೆಯ ಜಾರ್ಜ್ ಚಕ್ರವರ್ತಿಗಳು ಇದೇ ವಂಶಸ್ಥರು. ಈ ನೂತನ ವಂಶದ ರಾಜರಾದ ಒಂದನೆಯ ಜಾರ್ಜನಿಗೂ ಎರಡನೆಯ ಜಾರ್ಜನಿಗೂ ಇಂಗ್ಲಿಷ್ ಭಾಷೆಯ ಪರಿಚಯವು ಸ್ವಲ್ಪವೂ ಇರಲಿಲ್ಲ. ಅವರಿಗೆ ಇಂಗ್ಲೆಂಡಿನ ವ್ಯವಹಾರಗಳಲ್ಲಿ ಕುತೂಹಲವೂ ಇರಲಿಲ್ಲ. ಈ ಉದಾಸೀನತೆಯಿಂದ ಇಂಗ್ಲೆಂಡಿನ ರಾಜಕೀಯ ಬೆಳವಣಿಗೆಗೆ ವಿಶೇಷವಾದ ಅನುಕೂಲವುಂಟಾಯಿತು. ಇವರಾಳಿದ ೪೫ ವರ್ಷಗಳ ಕಾಲದಲ್ಲಿ (೧೭೧೫-೧೭೬೦) ಆಂಗ್ಲೇಯರ ರಾಜ್ಯವ್ಯವಸ್ಥೆಯಲ್ಲಿ ಅತಿ ಮುಖ್ಯವಾದ ಎರಡು ಅಂಶಗಳು ರಾಜನಿಂದ ಅಡ್ಡಿ ಆತಂಕವಿಲ್ಲದೆ ವೃದ್ಧಿಯಾದುವು: ೧. ರಾಜಕೀಯ ಪಕ್ಷಗಳ ಪದ್ಧತಿ, ೨. ಕ್ಯಾಬಿನೆಟ್ ಎಂಬ ಮಂತ್ರಿ ಮಂಡಲದ ಏಳಿಗೆ.

ಹದಿನೆಂಟನೆಯ ಶತಮಾನದಲ್ಲಿ ವಿಗ್ ಮತ್ತು ಟೋರಿ ಎಂಬ ಇಂಗ್ಲೆಂಡಿನ ಮುಖ್ಯ ಪಕ್ಷಗಳೆರಡೂ ರೂಪಗೊಂಡುವು. ಈ ಎರಡು ಪಂಗಡಗಳನ್ನು ಈಗ ಲಿಬರಲ್ ಮತ್ತು ಕನ್ಸರ್ವೆಟಿವ್ ಎಂದು ಕರೆಯುತ್ತಾರೆ. ವಿಗ್ ಪಕ್ಷದವರು ಪ್ರಗತಿಯ ಪ್ರೋತ್ಸಾಹಿಗಳೆಂದೂ ಟೋರಿಗಳು ಸಂಪ್ರದಾಯ ವಾದಿಗಳೆಂದೂ ಸ್ಥೂಲ

ವಾಗಿ ಹೇಳಬಹುದು. ಇತ್ತೀಚೆಗೆ 'ಲೇಬರ್' ಅಥವಾ ಕೆಲಸಗಾರರು ಎಂಬ ಮೂರನೆಯ ಪಂಗಡವೊಂದು ಏರ್ಪಟ್ಟಿದೆ.

ಪಕ್ಷಗಳ ಪದ್ಧತಿಯು ಕೆಲಸಮಾಡುವುದು ಹೇಗೆ? ವಿಶಾಲವಾದ ದೇಶದ ನಾನಾಭಾಗಗಳಲ್ಲಿ ಕೋಟ್ಯಂತರ ಜನ ಪೌರರು ವಾಸಿಸುತ್ತಿರುವ ಇಂದಿನ ರಾಷ್ಟ್ರಗಳಲ್ಲಿ ಸಾರ್ವಜನಿಕ ಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ಪೌರರೆಲ್ಲರೂ ಒಂದು ಸ್ಥಳದಲ್ಲಿ ಸಭೆ ಸೇರುವುದು ಅಸಾಧ್ಯ. ಪ್ರಜೆಗಳು ಚುನಾಯಿಸಿದ ಪ್ರತಿನಿಧಿಗಳು ಮಾತ್ರ ಸಭೆ ಸೇರುವುದು ಸಾಧ್ಯ. ಬ್ರಿಟಿಷರ ಪಾರ್ಲಿಮೆಂಟಿನಲ್ಲಿ ಪ್ರಜಾಪ್ರತಿನಿಧಿಗಳು ಕಾಮನ್ಸ್ ಸಭೆಯಲ್ಲಿಯೂ, ಹುಟ್ಟು ಶ್ರೀಮಂತರೂ ಮಠಾಧಿಪತಿಗಳೂ ಇನ್ನು ಕೆಲವರೂ ಲಾರ್ಡ್ಸ್ ಸಭೆಯಲ್ಲಿಯೂ, ಪ್ರತ್ಯೇಕವಾಗಿ ಸೇರುವರೆಂದು ವಿವರಿಸಲಾಗಿದೆ. ಜನರ ಪ್ರತಿನಿಧಿಗಳು ಸೇರುವ ಕಾಮನ್ಸ್ ಸಭೆಯು ಪಾರ್ಲಿಮೆಂಟಿನ ಪ್ರಬಲವಾದ ಅಂಗವಾಗಿರುವುದು ಸಹಜವಾದುದೇ. ಒಂದು ಸಾರ್ವತ್ರಿಕ ಚುನಾವಣೆಯಲ್ಲಿ ದೇಶದ ವೋಟುದಾರರುಗಳು ಟೋರಿ ಪಂಗಡದ ಉಮೇದುವಾರರುಗಳಿಗಿಂತ ಹೆಚ್ಚಾಗಿ ವಿಗ್ ಪಂಗಡದವರನ್ನು ಕಾಮನ್ಸ್‌ಸಭೆಯ ಸದಸ್ಯರನ್ನಾಗಿ ಚುನಾಯಿಸಿದರೆ ಆ ಸಭೆಯಲ್ಲಿ ವಿಗ್ ಪಕ್ಷದವರು ಬಹುಮತವನ್ನು ಪಡೆಯುವರು. ಅಂದರೆ, ಕಾಮನ್ಸ್ ಸಭೆಯಲ್ಲಿ ಬಹುಪಕ್ಷ ಯಾವುದು, ಆ ಸಭೆಯ ಪ್ರಬಲ ಮತವೇನು ಎಂಬುದನ್ನು ವೋಟುದಾರರುಗಳಾದ ದೇಶದ ಪೌರರೇ ತೀರ್ಮಾನಿಸುವರೆಂದಾಯಿತು. ಮತ್ತೊಂದು ಸಾರ್ವತ್ರಿಕ ಚುನಾವಣೆಯ ಸಮಯದಲ್ಲಿ ಪ್ರಜಾಭಿಪ್ರಾಯವು ಮಾರ್ಪಟ್ಟು ಟೋರಿಗಳಿಗೆ ಅನುಕೂಲವಾಗಿದ್ದರೆ ಆಗ ಟೋರಿ ಪಕ್ಷವೇ ಕಾಮನ್ಸ್ ಸಭೆಯಲ್ಲಿ ಬಹುಮತವನ್ನು

ಪಡೆಯುವುದು. ಯಾವ ಪಂಗಡವು ದೇಶಸೇವೆಯನ್ನು ಉತ್ತಮ ರೀತಿಯಲ್ಲಿ ಮಾಡಬಹುದೆಂದು ಕಂಡುಬರುವುದೋ ಆ ಪಂಗಡವೇ ಸಾರ್ವತ್ರಿಕ ಚುನಾವಣೆಯಲ್ಲಿ ಯಶಸ್ವಿಯಾಗಿ ಕಾಮನ್ಸ್ ಸಭೆಯಲ್ಲಿ ಬಹುಮತವನ್ನು ಪಡೆಯುವುದು ಖಂಡಿತ. ಯಾವಾಗಲೂ ಬಹುಪಕ್ಷವೇ ರಾಜ್ಯಾಡಳಿತವನ್ನು ವಹಿಸುವುದು. ಬಹುಮತದ ಪಕ್ಷವೇ ಸರ್ಕಾರದ ಪಕ್ಷ.

ಕಾಮನ್ಸ್‌ಸಭೆಯಲ್ಲಿ ಅಲ್ಪ ಪಕ್ಷದ ಸ್ಥಾನವೇನು? ಅದರ ಕಾರ್ಯಭಾಗವೇನು? 'ಆಪೊಸಿಷನ್' ಎಂಬ ಈ ಪ್ರತಿಪಕ್ಷದವರ ಕೆಲಸ ಅಡ್ಡಿ ಆತಂಕಗಳನ್ನು ತಂದೊಡ್ಡುವುದೂ ಅಲ್ಲ, ಸುಮ್ಮನೆ ತಟಸ್ಥರಾಗಿ ಇರುವುದೂ ಅಲ್ಲ. ಅವರು ಸರ್ಕಾರದ ರೀತಿನೀತಿಗಳನ್ನು ಜಾಗರೂಕತೆಯಿಂದ ಪರೀಕ್ಷಿಸಿ ಅವುಗಳಲ್ಲಿರುವ ಲೋಪದೋಷಗಳನ್ನು ಪ್ರಜಾಸೌಖ್ಯದೃಷ್ಟಿಯಿಂದ ಖಂಡಿಸುವರು. ಇಂದಿನ ಪ್ರತಿಪಕ್ಷದವರು ಮುಂದೆ ಬಹುಮತವನ್ನು ಪಡೆದು ಆಡಳಿತವನ್ನು ವಹಿಸಬಹುದು. ಆದುದರಿಂದ ಅವರು ಮೊಂಡರಾಗಿಯೂ ವ್ಯವಹಾರ ಜ್ಞಾನ ರಹಿತರಾಗಿಯೂ ಇರುವುದು ಸಾಧ್ಯವಿಲ್ಲ. ರಾಜಕೀಯ ತತ್ವಗಳಲ್ಲಿಯೂ ಕಾರ್ಯಕ್ರಮದ ವಿವರಗಳಲ್ಲಿಯೂ ಎರಡು ಪಕ್ಷಗಳಿಗೂ ವ್ಯತ್ಯಾಸಗಳಿದ್ದರೂ ಕೂಡ, ಎರಡೂ ದೇಶದ ಹಿತವನ್ನೇ ಕೋರುವುವಾಗಿರುವುದರಿಂದ ರಾಜ್ಯಾಧಿಕಾರವು ಒಂದು ಪಕ್ಷದಿಂದ ಮತ್ತೊಂದಕ್ಕೆ ಬರುವಾಗ ಆಡಳಿತ ನೀತಿಯು ತಲೆಕೆಳಗಾಗುವುದಿಲ್ಲ. ಅಧಿಕಾರವನ್ನು ಕೈಕೊಳ್ಳುವಾಗ ಬಹುಪಕ್ಷದವರು ಹಿಂದಿದ್ದ ಸರ್ಕಾರದ ಏರ್ಪಾಡುಗಳನ್ನು ಬಹುಮಟ್ಟಿಗೆ ಅಂಗೀಕರಿಸುವರು. ಸರ್ಕಾರಗಳನ್ನು ಬದಲಾಯಿಸಬಹುದು, ಆದರೆ ಆಡಳಿತವು ಮಾತ್ರ ಸ್ಥಿರವಾಗಿಯೂ

ಏಕಪ್ರಕಾರವಾಗಿಯೂ ನಡೆಯುವುದು.[6] ಜನರಿಗೆ ದೇಶಾಭಿಮಾನಕ್ಕಿಂತ ಪಕ್ಷ ಪಂಗಡಗಳಲ್ಲಿರುವ ಪ್ರೇಮವು ಹೆಚ್ಚಾದರೆ ಈ ಪದ್ಧತಿಯು ಸುಸೂತ್ರವಾಗಿ ನಡೆಯುವುದು ಸಾಧ್ಯವೇ ಇಲ್ಲ. ಪಕ್ಷಗಳ ಸದಸ್ಯರಿಗೆ ದೇಶಸೇವಾಸಕ್ತಿಗಿಂತ ಅಧಿಕಾರ ಪ್ರೇಮ ಪ್ರಬಲವಾಗಿದ್ದರೆ, ಅಥವಾ ಮತಪೈಷಮ್ಯಗಳು ರಾಜಕೀಯಜೀವನದಲ್ಲಿ ಪ್ರವೇಶಿಸಿದರೆ, ಅಥವಾ ವೈಯಕ್ತಿಕ ದ್ವೇಷಗಳು ರಾಜಕೀಯ ಆಡಳಿತದಲ್ಲಿ ಪ್ರತಿಬಿಂಬಿಸಿದರೆ ಈ ಪದ್ಧತಿಯು ಫಲಕಾರಿಯಾಗುವುದಿಲ್ಲ. ಇಂತಹ ಕುಂದುಕೊರತೆಗಳಿಲ್ಲದ ಪಕ್ಷಗಳ ವ್ಯವಸ್ಥೆಯನ್ನು ಬೆಳೆಸಿರುವುದು ಆಂಗ್ಲೇಯರು ರಾಜ್ಯಶಾಸ್ತ್ರ ಪ್ರಪಂಚದಲ್ಲಿ ಸಾಧಿಸಿರುವ ಒಂದು ಮಹತ್ಕಾರ್ಯವಾಗಿದೆ.

ಕಾಮನ್ಸ್ ಸಭೆಯಲ್ಲಿ ೬೧೫ ಜನರೂ ಶ್ರೀಮಂತರ ಸಭೆಯಲ್ಲಿ ೭೦೦ ಕ್ಕೆ ಹೆಚ್ಚಾಗಿಯೂ ಸದಸ್ಯರಿರುತ್ತಾರೆ. ಪಾರ್ಲಿಮೆಂಟಿನಲ್ಲಿ ಬಹುಪಕ್ಷದ ಸಂಖ್ಯೆಯು ೭೦೦ ಅಥವಾ ೮೦೦

---

[6] ಒಬ್ಬೊಬ್ಬ ಕ್ಯಾಬಿನೆಟ್ ಮಂತ್ರಿಯ ಇಲಾಖೆಯಲ್ಲೂ ನೂರಾರು ಜನ ಖಾಯಂ ಉದ್ಯೋಗಸ್ಥರು ಕೆಲಸಮಾಡುತ್ತಿರುವರು. "ಪರ್ಮನೆಂಟ್ ಸೆಕ್ರಿಟರಿ" ಗಳೆಂಬ ಮುಖ್ಯ ಅಧಿಕಾರಿಗಳಿಂದ ಹಿಡಿದು ಜವಾನರವರೆಗೆ ಈಗ ಒಟ್ಟು ಸುಮಾರು ೩೦೦,೦೦೦ ನೌಕರರಿದ್ದಾರೆ. ಇವರಲ್ಲನೇಕರು ಸರ್ಕಾರವು ಪದೇ ಪದೇ ನಡೆಸುವ ಪರೀಕ್ಷೆಗಳ ಮೂಲಕ ಆರಿಸಲ್ಪಟ್ಟವರು. ಕ್ಯಾಬಿನೆಟ್ ಮಂತ್ರಿಗಳೂ ಈ ಖಾಯಂ ಉದ್ಯೋಗಸ್ಥರೂ ಒಟ್ಟು ಸೇರಿ ಆಡಳಿತವನ್ನು ನಡೆಸುವರು. ಕೆಲಸಮಾಡುವುದಕ್ಕಿಂತ ಕೆಲಸಮಾಡಿಸುವುದೇ ಮಂತ್ರಿಯ ಮುಖ್ಯ ಕರ್ತವ್ಯವೆಂದು ಒಬ್ಬ ರಾಜನೀತಿಜ್ಞರು ಹೇಳಿದ್ದಾರೆ. ಮಂತ್ರಿಮಂಡಲಗಳು ಆಗಾಗ ಬದಲಾಯಿಸುತ್ತಿದ್ದರೂ ಆಡಳಿತವು ಮಾತ್ರ ವಿಚ್ಛಿತ್ತಿಯಿಲ್ಲದೆ ನಡೆದುಕೊಂಡು ಹೋಗುವುದಕ್ಕೆ ಈ ಸಿವಿಲ್ ಸರ್ವಿಸ್ ಉದ್ಯೋಗಸ್ಥರೇ ಮುಖ್ಯ ಸಾಧನ.

ಅಥವಾ ೧,೨೦೦ ಕೂಡ ಇರಬಹುದು. ದೇಶದ ಕೋಟ್ಯಂತರ ಪ್ರಜೆಗಳೆಲ್ಲರೂ ಕಾನೂಸುಗಳ ರಚನೆಗಾಗಿ ಸಭೆ ಸೇರುವುದು ಹೇಗೆ ಅಸಾಧ್ಯವೋ ಹಾಗೆಯೇ ಬಹುಪಕ್ಷದ ನೂರಾರು ಸದಸ್ಯರೂ ಸೇರಿ ನೇರವಾಗಿ ಆಡಳಿತದ ಕಾರ್ಯವನ್ನು ನಿರ್ವಹಿಸುವುದೂ ಅಸಾಧ್ಯ. ಆದುದರಿಂದ ೧೨ ಅಥವಾ ೧೫ ಅಧಿಕಾರಿಗಳನ್ನೊಳಕೊಂಡ ಸಮಿತಿಯೊಂದಕ್ಕೆ ದೇಶದ ಆಡಳಿತವನ್ನು ಒಪ್ಪಿಸಲಾಗುವುದು. ಇದೇ ಕ್ಯಾಬಿನೆಟ್ ಎಂಬ ಮಂತ್ರಿ ಮಂಡಲ.

ಈ ಕ್ಯಾಬಿನೆಟ್ ಮಂಡಲ ಕೆಲಸಮಾಡುವ ರೀತಿಯು ಅತಿ ಸ್ವಾರಸ್ಯವಾದ ವಿಷಯ. ರಾಜನ ಹೆಸರಿನಲ್ಲಿ ರಾಜ್ಯಾಡಳಿತವನ್ನು ಕ್ಯಾಬಿನೆಟ್ಟೇ ನಡೆಸುವುದು. ತಾತ್ವಿಕವಾಗಿ ಮಂತ್ರಿಗಳು ರಾಜನಿಂದ ನೇಮಕವಾದವರು. ಆದರೆ ನಿಜವಾಗಿ ರಾಜನು ಇಷ್ಟಬಂದವರನ್ನು ನೇಮಿಸಲಾಗುವುದಿಲ್ಲ. ಕಾಮನ್ಸ್ ಸಭೆಯಲ್ಲಿ ಬಹುಮತವನ್ನು ಪಡೆದಿರುವ ಪಕ್ಷದ ನಾಯಕನನ್ನೇ ಮುಖ್ಯಮಂತ್ರಿಯಾಗಿ ನೇಮಿಸಬೇಕಾಗುವುದು. ಹೀಗೆಯೇ ಮಾಡಬೇಕೆಂದು ವಿಧಿಸಿರುವ ಕಾನೂನು ಯಾವುದೂ ಇಲ್ಲ. ಆದರೂ ಈ ವಾಡಿಕೆಗೆ ವಿರೋಧವಾಗಿ ರಾಜನು ಕಾಮನ್ಸ್ ಸಭೆಯ ಬಹುಮತದ ಬೆಂಬಲವಿಲ್ಲದವನನ್ನು ಮಂತ್ರಿಯಾಗಿ ಆರಿಸಿದರೆ ಆ ಮಂತ್ರಿ ಒಂದುವಾರ ಕೂಡ ಕೆಲಸಮಾಡಲಾರನು. ಕಾಮನ್ಸಿನವರು ಹಣಕೊಡುವುದನ್ನು ನಿಲ್ಲಿಸಿ, ಅವನ ನಿರ್ಣಯಗಳೆಲ್ಲವನ್ನೂ ನಿರಾಕರಿಸಿ, ಮಂತ್ರಿಯ ಕೈಗಳನ್ನು ಕಟ್ಟಿಹಾಕಿದಹಾಗೆ ಮಾಡಬಹುದು. ಈ ರೀತಿಯಾಗಿ ಮುಖ್ಯವಾದ ವಿಷಯಗಳಲ್ಲಿ ಕೂಡ ಸ್ಪಷ್ಟವಾದ ಕಾನೂನುಗಳಿಲ್ಲದೆಯೇ ಕೇವಲ ಸಾಂಪ್ರದಾಯಿಕ ವಾಡಿಕೆಗಳಿಂದಲೂ ಅಲಿಖಿತ

ನಿಯಮಗಳಿಂದಲೂ ರಾಜ್ಯಕಾರ್ಯವನ್ನು ನಿರ್ವಹಿಸುವುದು ಆಂಗ್ಲೇಯರ ರಾಜಕೀಯ ಜೀವನದ ಒಂದು ಅನುಪಮ ಲಕ್ಷಣ. ಮುಖ್ಯಮಂತ್ರಿಯು ನೇಮಕವಾದ ಮೇಲೆ ಅವನು ತನ್ನ ಜತೆ ಕೆಲಸದವರಾದ ಇತರ ಮಂತ್ರಿಗಳನ್ನು ಪಾರ್ಲಿಮೆಂಟಿನ ಎರಡು ಸಭೆಗಳ ಸದಸ್ಯರಿಂದ ಆರಿಸಿಕೊಳ್ಳುವನು. ಆದುದರಿಂದ ಮಂತ್ರಿಗಳನ್ನು ನೇಮಿಸುವ ಅಧಿಕಾರ ಹೆಸರು ಮಾತ್ರಕ್ಕೆ ರಾಜನಿಗೆ ಸೇರಿದ್ದು.

ಮೊದಲನೆಯ ಇಬ್ಬರು ಜಾರ್ಜರಿಗೆ ಇಂಗ್ಲಿಷ್ ಭಾಷೆಯ ಗಂಧವೇ ಇರಲಿಲ್ಲವಾದುದರಿಂದ ಅವರು ಮಂತ್ರಿಮಂಡಲಿಯ ಸಭೆಗಳಲ್ಲಿ ಯಾವ ಭಾಗವನ್ನೂ ವಹಿಸುತ್ತಿರಲಿಲ್ಲ. ಅಂದು ಮೊದಲು ರಾಜನು ಕ್ಯಾಬಿನೆಟ್ ಸಭೆಯ ಮಂತ್ರಾಲೋಚನೆಗಳಲ್ಲಿ ಭಾಗಿಯಾಗುವ ಪದ್ಧತಿಯೇ ತಪ್ಪಿಹೋಯಿತು.

ಬ್ರಿಟನ್ನಿನ ಕ್ಯಾಬಿನೆಟ್ ವ್ಯವಸ್ಥೆಯ ಮುಖ್ಯಲಕ್ಷಣಗಳಿವು: ೧. ಕ್ಯಾಬಿನೆಟ್ಟಿನ ಸದಸ್ಯರಾಗುವವರೆಲ್ಲರೂ ಪಾರ್ಲಿಮೆಂಟಿನ ಸದಸ್ಯರಾಗಿರಬೇಕು. ಪ್ರತಿನಿಧಿ ಸಭೆಯಲ್ಲಿಯೋ ಶ್ರೀಮಂತರ ಸಭೆಯಲ್ಲಿಯೋ ಅವರೆಲ್ಲರಿಗೂ ಸ್ಥಾನಗಳಿರಬೇಕು. ಇತ್ತೀಚೆಗೆ ಕ್ಯಾಬಿನೆಟ್ಟಿನಲ್ಲಿ ಕಾಮನ್ಸ್ ಸಭೆಯ ಸದಸ್ಯರೇ ಹೆಚ್ಚಾಗಿರುವುದು ವಾಡಿಕೆಯಾಗಿದೆ. ೨. ಹಣದ ವ್ಯವಸ್ಥೆ, ನ್ಯಾಯಾಧಿಕಾರ, ವಿದೇಶಾಂಗನೀತಿ, ಯುದ್ಧ, ವಿದ್ಯಾಭ್ಯಾಸ ಮುಂತಾದ ಶಾಖೆಗಳಿಗೆ ಜವಾಬ್ದಾರಿಯುಳ್ಳ ನಾಯಕರಾಗಿ ಬೇರೆ ಬೇರೆ ಮಂತ್ರಿಗಳಿರುವರು. ಆದರೂ ಎಲ್ಲ ಇಲಾಖೆಗಳಿಗೂ ಸೇರಿದ ಮುಖ್ಯವಿಷಯಗಳಲ್ಲಿ ಕ್ಯಾಬಿನೆಟ್ ಸಮಿತಿಯು ಒಟ್ಟಿಗೆ ಜವಾಬ್ದಾರಿಯನ್ನು ಹೊರಬೇಕಾಗುವುದು. ಪಾರ್ಲಿಮೆಂಟಿನ ಸಮ್ಮುಖದಲ್ಲಿಯೂ ಪ್ರಜಾಸಮುದಾಯದ ಮುಂದೆಯೂ

ಕ್ಯಾಬಿನೆಟ್ಟಿನ ತೀರ್ಮಾನಗಳನ್ನು ಒಬ್ಬ ವ್ಯಕ್ತಿಯ ತೀರ್ಮಾನ ಗಳಂತೆಯೇ ಒಪ್ಪಿಸಲಾಗುವುದು. ಅಧಿಕಾರವನ್ನು ನಡೆಸು ವಾಗಲೂ ಆದನ್ನು ಬಿಡುವಾಗಲೂ ಮಂತ್ರಿಮಂಡಲವು ಒಟ್ಟಾಗಿರುವುದು. ಉದಾಹರಣೆಗಾಗಿ, ವಿದೇಶಾಂಗ ಮಂತ್ರಿಯ ವರ್ತನೆಯಲ್ಲಿ ಪ್ರಜೆಗಳಿಗೆ ತೀವ್ರವಾದ ಅತೃಪ್ತಿಯುಂಟಾದರೆ ಆ ಅಧಿಕಾರಿಮಾತ್ರವಲ್ಲದೆ ಮಂತ್ರಿಮಂಡಲದ ಎಲ್ಲರೂ ರಾಜೀನಾಮೆಯನ್ನೀಯುವ ಸಂಭವವುಂಟಾಗುವುದು. ೩. ಮಂತ್ರಿಮಂಡಲದವರು ತಾತ್ವಿಕವಾಗಿ ರಾಜಸೇವಕರಾಗಿದ್ದರೂ ನಿಜವಾಗಿ ನೇರವಾಗಿ ಪ್ರಜಾಪ್ರತಿನಿಧಿಸಭೆಗೂ, ಕಡೆಗೆ ವೋಟುದಾರರ ಸಮುದಾಯಕ್ಕೂ, ಜವಾಬ್ದಾರರಾಗಿರುವರು. ೪. ಮಂತ್ರಿಗಳೆಲ್ಲರೂ ಒಂದೇ ಪಕ್ಷದ ಸದಸ್ಯರಾಗಿರುತ್ತಾರೆ. ಯುದ್ಧಕಾಲ ಮುಂತಾದ ಅಸಾಧಾರಣ ಮತ್ತು ಅಸ್ಥಿರವಾದ ಸಮಯಗಳಲ್ಲಿ ಎಲ್ಲ ಪಕ್ಷಗಳ ಸದಸ್ಯರೂ ಅಡಗಿರುವ ಕ್ಯಾಬಿನೆಟ್ಟನ್ನು ರಚಿಸಬಹುದು. ಆದರೆ ಇದು ಅಪರೂಪ. ಸಾಮಾನ್ಯವಾಗಿ ಮಂತ್ರಿಗಳು ಸಪಕ್ಷದವರಾಗಿಯೇ ಇರುವರು. ೫. ಎಲ್ಲ ಮಂತ್ರಿಗಳೂ ಸಮಾನ ಗೌರವವುಳ್ಳವರಾದರೂ ಮುಖ್ಯ ಮಂತ್ರಿಮಾತ್ರ ವಿಶೇಷ ಪ್ರಾಧಾನ್ಯವನ್ನು ಪಡೆದಿರುವನು. ಬಹುಮತದ ಬೆಂಬಲವೊಂದು ಅವನಿಗಿದ್ದರೆ ಅವನು ಏಕಾಧಿಪತ್ಯವನ್ನು ನಡೆಸಬಹುದು.

೧೮ ನೆಯ ಶತಮಾನದ ಪೂರ್ವಾರ್ಧದಲ್ಲಿ ಇಪ್ಪತ್ತು ವರ್ಷಗಳ ಕಾಲ ಪ್ರಧಾನಮಂತ್ರಿ ಪದವಿಯನ್ನು ಪಡೆದಿದ್ದ ವಾಲ್ಪೋಲ್ ಎಂಬವನು ಈ ಕ್ಯಾಬಿನೆಟ್ ಪದ್ಧತಿಯ ತಳಹದಿಯನ್ನು ಹಾಕಿದನೆಂದು ಹೇಳಬಹುದು. ಇವನು ವಿಗ್ ಪಕ್ಷದ ಪ್ರಖ್ಯಾತ ಮುಂದಾಳಾಗಿದ್ದನು. ಹ್ಯಾನೋವರಿನ ವಂಶದವರು ಸಿಂಹಾ

ಸನಕ್ಕೆ ಬಂದಮೇಲೆ ವಿಗ್ ಪಕ್ಷದವರು ೫೦ ವರ್ಷಗಳ ಕಾಲ ಎಡೆಬಿಡದೆ ರಾಜ್ಯಾಡಳಿತವನ್ನು ವಹಿಸಿದ್ದರು. ಇವರಲ್ಲಿ ರಾಜರ ಅಭಿಮಾನವಿತ್ತು. ವ್ಯವಸಾಯಕ್ಕೂ ವ್ಯಾಪಾರಕ್ಕೂ ಅಧಿಕವಾದ ಉತ್ತೇಜನ ಕೊಡುತ್ತಿದ್ದ ಇವರಿಗೆ ವರ್ತಕ ವರ್ಗದವರ ಬೆಂಬಲ ದೊರಕಿತು. ಪರಮತಸಹಿಷ್ಣುತೆಯ ನೀತಿಯನ್ನು ಅನುಸರಿಸಿ ಇವರು ಜನಪ್ರಿಯರಾದರು. ಶ್ರೀಮಂತರ ಸಭೆಯಲ್ಲಿ ಆಗ ಇವರಿಗೆ ಸ್ವಾಭಾವಿಕವಾದ ಬಹುಮತವಿತ್ತು. ಪ್ರಜಾಪ್ರತಿನಿಧಿ ಸಭೆಯಲ್ಲಿ ಶಕ್ತಿಚಾತುರ್ಯಗಳಿಂದಲೂ ಲಂಚದ ಸಹಾಯ ದಿಂದಲೂ ಬಹುಮತವನ್ನು ಪಡೆದರು. ಅಲ್ಲದೆ, ಆಗಿನ ಪ್ರಮುಖ ರಾಜನೀತಿಜ್ಞರೆಲ್ಲರೂ ವಿಗ್ ಪಂಗಡದವರೇ ಆಗಿ ದ್ದರು. ವಾಲ್ಪೋಲನು ಯೂರೋಪಿನ ಯುದ್ಧಗಳಲ್ಲಿ ಪ್ರವೇಶಿ ಸದೆ ದೇಶದ ಆರ್ಥಿಕಬಲವನ್ನು ಬಹಳವಾಗಿ ವೃದ್ಧಿಪಡಿಸಿ ಹೆಸರು ವಾಸಿಯಾದನು.

೧೭೬೦ ರಿಂದ ೧೮೨೦ ರ ವರೆಗೆ ಆಳಿದ ಮೂರನೆಯ ಜಾರ್ಜನು ಹಿಂದಿದ್ದ ರಾಜರ ಪದ್ಧತಿಯನ್ನು ತೊರೆದು ಬೇರೆ ರೀತಿಯಲ್ಲಿ ವರ್ತಿಸಿದನು. ಇವನು ಪ್ರಾಮಾಣಿಕನೂ ಸದಾ ಚಾರಶೀಲನೂ ಆಗಿದ್ದರೂ ಇವನಿಗೆ ರಾಜನೀತಿ ಚಾತುರ್ಯವು ಸ್ವಲ್ಪವೂ ಇರಲಿಲ್ಲ. ಇವನು ಹಠವಾದಿ. ಟ್ಯೂಡರ್ ರಾಜರಂ ತೆಯೇ ತಾನೇ ಎಲ್ಲ ಅಧಿಕಾರವನ್ನೂ ನಡೆಸಬೇಕೆಂಬುದು ಇವನ ಇಚ್ಛೆ. ವಿಗ್ ಪಕ್ಷದವರನ್ನು ಅಧಿಕಾರದಿಂದ ತೆಗೆದು ಹಾಕಿ ತನಗೆ ವಿಧೇಯನಾದ ಒಬ್ಬ ಟೋರಿ ಮುಖ್ಯಮಂತ್ರಿ ಯನ್ನು ನೇಮಿಸಿಕೊಂಡನು. ರಾಜಮಿತ್ರರ ಹೊಸ ಪಕ್ಷವೊಂ ದನ್ನು ರಚಿಸಲು ಯತ್ನಿಸಿದನು. ಆದರೆ ಇವನ ಪ್ರಯತ್ನಗಳೆಲ್ಲ ವಿಫಲವಾದುವು. ಎಲ್ಲ ಪಕ್ಷಗಳಿಗೂ ಮೇಲಿದ್ದು ಅವುಗಳ ವಿಚಾ

ರದಲ್ಲಿ ಸಮವರ್ತಿಯಾಗಿರಬೇಕಾದ ರಾಜನು ತನ್ನ ಉನ್ನತ ಸ್ಥಾನವನ್ನು ಬಿಟ್ಟು ಇಳಿದು ಪಕ್ಷನಾಯಕತ್ವವನ್ನು ಕೈಕೊಂಡರೆ ಅವನ ಗೌರವಕ್ಕೆ ಭಂಗವುಂಟಾಗುವುದರಲ್ಲಿ ಸಂಶಯವಿಲ್ಲ. ಅಲ್ಲದೆ, ಜಾರ್ಜನ ಹಠ ಮತ್ತು ಅವಿವೇಕಗಳಿಂದ ಉತ್ತರ ಅಮೆರಿಕಾದಲ್ಲಿದ್ದ ಅನರ್ಘ್ಯವಾದ ಪ್ರದೇಶಗಳು ಕೈಬಿಟ್ಟು ಹೋದುವು.

ಹದಿನೇಳನೆಯ ಶತಮಾನದ ಉದ್ದಕ್ಕೂ ಹದಿನೆಂಟನೆಯ ಶತಮಾನದ ಪೂರ್ವಾರ್ಧದಲ್ಲಿಯೂ ಬ್ರಿಟಿಷರನೇಕರು ಉತ್ತರ ಅಮೆರಿಕಾ ಖಂಡಕ್ಕೆ ಹೋಗಿ ನೆಲಸುತ್ತಿದ್ದರು. ಮೂರನೆಯ ಜಾರ್ಜನ ಕಾಲದಲ್ಲಿ ಆ ಖಂಡದ ಪೂರ್ವತೀರದಲ್ಲಿ ೧೩ ಬ್ರಿಟಿಷ್ ಕಾಲೊನಿಗಳು ಬೆಳೆದಿದ್ದುವು. ಇವುಗಳಿಗೆ ಉತ್ತರದಲ್ಲಿರುವ ಕೆನಡ ದೇಶವು ಫ್ರೆಂಚರ ಅಧೀನದಲ್ಲಿದ್ದಾಗ ಬ್ರಿಟನ್ನಿನ ರಕ್ಷಣೆಯನ್ನು ಕೋರುತ್ತಿದ್ದ ಈ ಕಾಲೊನಿಗಳು ತಾಯಿನಾಡನ್ನು ಬಹು ಮರ್ಯಾದೆಯಿಂದ ಕಾಣುತ್ತಿದ್ದುವು. ಕೆನಡವನ್ನು ಬ್ರಿಟಿಷರು ೧೭೬೦ರಲ್ಲಿ ಆಕ್ರಮಿಸಿಕೊಂಡರು. ಆ ಮೇಲೆ ಈ ಕಾಲೊನಿಗಳು ತಮ್ಮ ವರ್ತನೆಯನ್ನು ಬದಲಾಯಿಸಿ ಹಿಂದಿದ್ದ ವಿನಯವನ್ನು ಬಿಟ್ಟು ಸ್ವತಂತ್ರಭಾವದಿಂದ ನಡೆಯಲಾರಂಭಿಸಿದುವು. ಹೀಗಿರುವಲ್ಲಿ ಜಾರ್ಜನೂ ವಿವೇಕರಹಿತರಾದ ಇವನ ಮಂತ್ರಿಗಳೂ ಅಮೆರಿಕನ್ನರ ಮೇಲೆ ಕೆಲವು ಕಠಿನವಾದ ತೆರಿಗೆಗಳನ್ನು ಹಾಕಿದರು. ತಮ್ಮ ಪ್ರತಿನಿಧಿಗಳು ಯಾರೂ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಇಲ್ಲವಾದುದರಿಂದ ತಮ್ಮಿಂದ ತೆರಿಗೆಯೆತ್ತುವುದಕ್ಕೆ ಆ ಪಾರ್ಲಿಮೆಂಟಿಗೆ ಯಾವ ಹಕ್ಕೂ ಇಲ್ಲವೆಂದು ಕಾಲೊನಿಗಳ ಪ್ರಜೆಗಳು ವಾದಿಸಿದರು. ಯುದ್ಧವು ಮೊದಲಾಯಿತು. ಇದೇ ಸಮಯದಲ್ಲಿ ಬ್ರಿಟನ್ನಿನ ಹಳೆಯ

ಶತ್ರುಗಳಾದ ಫ್ರಾನ್ಸ್ ಮತ್ತು ಸ್ಪೆಯಿನ್ ದೇಶಗಳು ಯೂರೋಪಿನಲ್ಲಿ ತೊಂದರೆಯುಂಟುಮಾಡಿದುದರಿಂದ ಅಮೆರಿಕಾ ಯುದ್ಧದಲ್ಲಿ ಬ್ರಿಟಿಷರು ಪರಾಜಿತರಾದರು. ಹದಿಮೂರು ಕಾಲೊನಿಗಳೂ ಒಂದಾಗಿ ಸಂಪೂರ್ಣ ಸ್ವಾತಂತ್ರ್ಯವನ್ನು ಸಾಧಿಸಿಕೊಂಡು "ಸಂಯುಕ್ತ ಸಂಸ್ಥಾನಗಳು" ಎಂಬ ಹೆಸರಿನಲ್ಲಿ ಪ್ರಜಾಧಿಪತ್ಯವನ್ನು ಏರ್ಪಡಿಸಿಕೊಂಡುವು. ವಿಸ್ತೀರ್ಣದಲ್ಲಿಯೂ ಐಶ್ವರ್ಯದಲ್ಲಿಯೂ ಏಕಪ್ರಕಾರವಾಗಿ ಬೆಳೆದು ಆ ರಾಷ್ಟ್ರವು ಇಂದು ಪ್ರಪಂಚದ ಪ್ರಧಾನ ರಾಷ್ಟ್ರವಾಗಿದೆ.

ಜಾರ್ಜನೂ ಮಂದಮತಿಗಳಾದ ಇವನ ಮಂತ್ರಿಗಳೂ ಹೂಡಿದ ಒಳದೇಶದ ವ್ಯಾಜ್ಯಗಳ ಫಲವಾಗಿ ಕೆಲವು ಒಳ್ಳೆಯ ತತ್ವಗಳು ಸ್ಥಾಪಿತವಾದುವು. ವೋಟರುಗಳು ಸರ್ಕಾರದಿಂದಾಗಲಿ ಪ್ರತಿನಿಧಿಸಭೆಯಿಂದಾಗಲಿ ಯಾವ ವಿಧವಾದ ಅಡ್ಡಿಯೂ ಇಲ್ಲದೆ ಪಾರ್ಲಿಮೆಂಟಿನ ಸದಸ್ಯರನ್ನು ಚುನಾಯಿಸುವ ಹಕ್ಕನ್ನು ಸ್ಥಿರವಾಗಿ ಪಡೆದರು. ಪಾರ್ಲಿಮೆಂಟ್ ಸಭೆಯಲ್ಲಿ ನಡೆಯುವ ಚರ್ಚೆಗಳ ಮತ್ತು ಭಾಷಣಗಳ ವರದಿಯನ್ನು ಪ್ರಕಟಿಸುವ ಪದ್ಧತಿಯು ಏರ್ಪಟ್ಟು, ಪ್ರಜೆಗಳು ತಮ್ಮ ಪ್ರತಿನಿಧಿಗಳ ಅಭಿಪ್ರಾಯಗಳನ್ನೂ ಕಾರ್ಯಾಚರಣೆಗಳನ್ನೂ ತಿಳಿದು ಅವನ್ನು ಪರಿಶೀಲಿಸಲು ಅವಕಾಶವೊದಗಿತು.

೧೭೮೯ ರಲ್ಲಿ ಫ್ರಾನ್ಸಿನ ಮಹಾಕ್ರಾಂತಿಯುಂಟಾಯಿತು. ಆ ದೇಶದ ಸಾಮಾಜಿಕ ಮತ್ತು ರಾಜಕೀಯ ಜೀವನದಲ್ಲಿ ಬೆಳೆದುಬಂದಿದ್ದ ದೋಷಗಳು ಸುಲಭವಾಗಿ ಪರಿಹಾರವಾಗುವ ಸ್ಥಿತಿಯನ್ನು ಮೀರಿಹೋಗಿದ್ದುವು. ರಾಜನಿಗೂ ಸುಧಾರಣೆಯ ಮಹಾಕಾರ್ಯವನ್ನು ಕೈಕೊಳ್ಳಲು ಶಕ್ತಿಚಾತುರ್ಯಗಳಿರಲಿಲ್ಲ. ಮುಂದುಗಾರರಾದ ರಾಜರು, ದಿವಾಳಿಯಾದ ಸರ್ಕಾರ, ಪಕ್ಷ

ಪಾತಪೂರಿತವಾದ ತೆರಿಗೆಯ ಕ್ರಮ, ಸ್ವಾರ್ಥಪರರೂ ದುರಹಂಕಾರಿಗಳೂ ಆದ ಶ್ರೀಮಂತರು, ಇತರರ ಪ್ರಯೋಜನಕ್ಕಾಗಿ ಸದಾ ದುಡಿದು ಹೊಟ್ಟೆಗಿಲ್ಲದೆ ನರಳುವ ಕೋಟ್ಯಂತರ ರೈತಾಪಿ ಜನರು — ಇವುಗಳಿರುವಲ್ಲಿ ಕ್ರಾಂತಿಗೆ ಕಾರಣ ಇನ್ನೇನು ಬೇಕಾಗುವುದು ? ತತ್ವವಿಚಾರಕರು ಕೆಲವರು ಸಮಾಜದ ಸ್ಥಿತಿಗತಿಗಳನ್ನು ಮುಚ್ಚುಮರೆಯಿಲ್ಲದೆ ಪರಿಶೀಲಿಸಿ ಜನಸಮೂಹದ ಆಗ್ರಹವನ್ನು ಉದ್ದೀಪಿಸಿದರು. ಅಗ್ನಿಪ್ರಳಯದಂತಹ ಕ್ರಾಂತಿಯುಂಟಾಯಿತು. ನೂರಾರು ವರ್ಷಗಳಿಂದ ನಡೆಯುತ್ತಿದ್ದ ಅನ್ಯಾಯಗಳಿಗೆ ಬಡಜನರು ಘೋರರೀತಿಯಲ್ಲಿ ಸೇಡು ತೀರಿಸಿಕೊಂಡರು. ರಾಜರಾಣಿಯರನ್ನೂ ನೂರಾರು ಶ್ರೀಮಂತರನ್ನೂ ಶಿರಚ್ಛೇದನ ಮಾಡಿದರು. ಫ್ರಾನ್ಸಿನಲ್ಲಿ ಪ್ರಜಾಧಿಪತ್ಯವು ಸ್ಥಾಪಿತವಾಯಿತು. ಪ್ರಜಾಪ್ರಭುತ್ವದಲ್ಲಿದ್ದ ಅಪರಿಮಿತವಾದ ಉತ್ಸಾಹದಿಂದ ಫ್ರಾನ್ಸಿನ ಈ ನೂತನ ಸರ್ಕಾರವು ರಾಜರ ಆಡಳಿತದಲ್ಲಿದ್ದ ಯೂರೋಪಿನ ಎಲ್ಲ ದೇಶಗಳೊಂದಿಗೂ ಯುದ್ಧಮಾಡಲಾರಂಭಿಸಿತು. ಫ್ರಾನ್ಸಿನ ಪ್ರಜಾಸರ್ಕಾರವು ಕೇವಲ ಹತ್ತು ವರ್ಷಗಳಲ್ಲಿಯೇ ಕೊನೆಗಂಡು, ನೆಪೋಲಿಯನ್ ಎಂಬ ಮಹಾವೀರನು ಚಕ್ರವರ್ತಿಯಾದನು. ಇವನು ಯೂರೋಪ್ ಖಂಡವನ್ನೆಲ್ಲ ತನ್ನ ಶಕ್ತಿಪ್ರಭಾವಗಳಿಗೆ ಒಳಪಡಿಸಲು ಯತ್ನಿಸಿದನು. ತಮ್ಮ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲು ಹೋರಾಡಿದ ಜನಾಂಗಗಳಿಗೆ ಬ್ರಿಟನ್ ದೇಶವು ಮುಂದಾಳಾಗಿ ನಿಂತಿತು. ನೆಪೋಲಿಯನ್ನನಿಗೆ ಬ್ರಿಟನ್ನಿನ ನೌಕಾಶಕ್ತಿಯನ್ನು ಮುರಿಯಲಾಗಲಿಲ್ಲ. ಕೊನೆಗೆ ೧೮೧೫ ರಲ್ಲಿ ನಡೆದ ವಾಟರ್‌ಲೂ ಕದನದಲ್ಲಿ ಇವನು ಸಂಪೂರ್ಣವಾದ ಅಪಜಯವನ್ನು ಪಡೆದು ಕೈಸೆರೆಯಾದನು. ಯುದ್ಧವು ಕೊನೆಗಂಡಿತು.

ಯೂರೋಪಿನ ಆಧುನಿಕ ಚರಿತ್ರೆಯಲ್ಲಿ ಫ್ರಾನ್ಸಿನ ಮಹಾ ಕ್ರಾಂತಿಯು ಅತಿ ಮುಖ್ಯವಾದ ಘಟ್ಟವಾಗಿದೆ. ಅದರ ಪರಿಣಾ ಮವಾಗಿ ಸ್ವಾತಂತ್ರ್ಯ, ಸಮಾನತೆ, ಭ್ರಾತೃಭಾವ ಎಂಬ ತತ್ವಗಳು ರಾಜಕೀಯ ಜೀವನದಲ್ಲಿ ಪ್ರಾಬಲ್ಯವನ್ನು ಪಡೆದುವು. ಪ್ರಜಾಪ್ರಭುತ್ವದ ಭಾವನೆಗಳಿಗೆ ಅಧಿಕವಾದ ಬೆಂಬಲ ದೊರೆಯಿತು.

---

## ೭. ಸುಧಾರಣೆ ಮತ್ತು ಸಾಮ್ರಾಜ್ಯ

ಮೂರನೆಯ ಜಾರ್ಜನು ರಾಜನಾಗಿದ್ದ ೬೦ ವರ್ಷಗಳ ಕಾಲದಲ್ಲಿ ಬ್ರಿಟನ್ನಿನ ಆರ್ಥಿಕ ಜೀವನವು ಬಹುಮಟ್ಟಿಗೆ ಮಾರ್ಪಟ್ಟಿತು. ಒಂದು ಪ್ರವಾಹದಂತೆ ಅತಿ ರಭಸದಿಂದ ಬಂದ ಈ ಮಾರ್ಪಾಡುಗಳಿಗೆ “ಕೈಗಾರಿಕೆಯ ಕ್ರಾಂತಿ” ಎಂಬ ಹೆಸರನ್ನು ಕೊಡಲಾಗಿದೆ. ನೂಲುವ ಮತ್ತು ನೆಯ್ಗೆಯ ಕೈಗಾರಿಕೆ ಗಳಲ್ಲೂ ಕಬ್ಬಿಣದ ಕೈಗಾರಿಕೆಗಳಲ್ಲೂ ಹೊಸ ವಿಧಾನಗಳೂ ಯಂತ್ರಗಳೂ ಏರ್ಪಟ್ಟು ಸಾಮಾನುಗಳ ಉತ್ಪತ್ತಿಯು ಹಿಂದಿ ಗಿಂತ ನೂರ್ಮಡಿಯಾಗಿ ಹೆಚ್ಚಿತು. ಕೈಗಾರಿಕೆಗಳಿಗೆ ಹಬೆಯ ಶಕ್ತಿಯ ಪ್ರಯೋಗವನ್ನು ಕಂಡುಹಿಡಿದರು. ಯಂತ್ರಗಳನ್ನು ತಯಾರಿಸುವುದಕ್ಕೆ ಕಬ್ಬಿಣವೂ ಅವುಗಳನ್ನು ನಡೆಸುವ ಹಬೆಯ ಶಕ್ತಿಯನ್ನು ಉಂಟುಮಾಡುವುದಕ್ಕೆ ಕಲ್ಲಿದ್ದಲೂ ಅತ್ಯಾವಶ್ಯಕ ವಾದ ವಸ್ತುಗಳು. ಆದುದರಿಂದ ಗಣಿಗಳ ಪ್ರದೇಶವಾದ

ಇಂಗ್ಲೆಂಡಿನ ಉತ್ತರ ಮತ್ತು ಪಶ್ಚಿಮ ಭಾಗಗಳು ಈ ಕಾಲದಲ್ಲಿ ವಿಶೇಷವಾಗಿ ಬೆಳೆದು ಜನಸಂಖ್ಯೆಯಲ್ಲೂ ಐಶ್ವರ್ಯದಲ್ಲೂ ಪ್ರಾಬಲ್ಯವನ್ನು ಪಡೆದುವು. ಕೆಲಸಗಾರರು ತಮ್ಮ ಮನೆಗಳಲ್ಲಿಯೇ ಸ್ವತಂತ್ರವಾಗಿ ಕೈಯಿಂದ ಸಾಮಾನುಗಳನ್ನು ತಯಾರಿಸುವ ಪದ್ಧತಿ ಕೊನೆಗಂಡಿತು. ಬಂಡವಾಳಗಾರರ ಮೂಲಧನದಿಂದ ಏರ್ಪಟ್ಟ ಕಾರ್ಖಾನೆಗಳಲ್ಲಿ ವಿಶೇಷವಾದ ಶಕ್ತಿಯುಳ್ಳ ಯಂತ್ರಗಳ ಸಹಾಯದಿಂದ ಸಾವಿರಾರು ಕೂಲಿಗಾರರು ಕೆಲಸ ಮಾಡುವ ನವೀನ ಕೈಗಾರಿಕೆಯ ಪರಿಸ್ಥಿತಿಯು ಉಂಟಾಯಿತು. ಬ್ರಿಟನ್ನಿನಲ್ಲಿ ಉಪಕ್ರಮವಾದ ಈ ಕೈಗಾರಿಕೆಯ ಕ್ರಾಂತಿ ಸ್ವಲ್ಪ ಕಾಲದಲ್ಲೇ ಪ್ರಪಂಚದ ಎಲ್ಲ ಭಾಗಗಳಿಗೂ ಹರಡಿತು.

ಈ ಕೈಗಾರಿಕೆಯ ಕ್ರಾಂತಿಯ ಫಲವಾಗಿ ಬ್ರಿಟಿಷ್ ಜನರ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಜೀವನದಲ್ಲಿ ಅತಿ ಮುಖ್ಯವಾದ ಬದಲಾವಣೆಗಳು ಉಂಟಾದುವು. ಇವುಗಳಲ್ಲಿ ಕೆಲವು ಅಭ್ಯುದಯಕರವಾಗಿಯೂ ಕೆಲವು ಅನಿಷ್ಟಕರವಾಗಿಯೂ ಪರಿಣಮಿಸಿದುವು. ಇದುವರೆಗೂ ವ್ಯವಸಾಯವೂ ಉಣ್ಣೆಯ ವ್ಯಾಪಾರವೂ ಬ್ರಿಟಿಷರ ಸಾಮಾನ್ಯ ವೃತ್ತಿಗಳಾಗಿದ್ದುವು. ಈಗ ಕೈಗಾರಿಕೆಯೇ ಮುಖ್ಯವೃತ್ತಿಯಾಗಿ ಬ್ರಿಟನ್ ದೇಶವು "ಪ್ರಪಂಚದ ಕಾರ್ಖಾನೆ" ಎಂದು ಕೀರ್ತಿಗೊಂಡಿತು. ಆದರೆ, ಕೈಗಾರಿಕೆಗಳಿಗೆ ಬೇಕಾದ ಹತ್ತಿ ಮುಂತಾದ ಸಾಮಗ್ರಿಗಳನ್ನೂ ಅತಿಯಾಗಿ ವೃದ್ಧಿಹೊಂದುತ್ತಿರುವ ಪ್ರಜೆಗಳಿಗೆ ಆಹಾರ ಸಾಮಗ್ರಿಗಳನ್ನೂ ಒದಗಿಸಲು ಪರದೇಶಗಳನ್ನು ಆಶ್ರಯಿಸಬೇಕಾಯಿತು. ೧೭೫೦ ರಲ್ಲಿ ೬೫,೦೦,೦೦೦ ಮಾತ್ರ ಇದ್ದ ಇಂಗ್ಲೆಂಡಿನ ಜನಸಂಖ್ಯೆಯು ೧೮೩೧ ರ ಹೊತ್ತಿಗೆ ೧,೩೭, ೫೦,೦೦೦ ವಾಯಿತು. ದೇಶದ ಐಶ್ವರ್ಯವೂ ಬಹಳವಾಗಿ

ಹೆಚ್ಚಿತು. ಆದರೆ ಅದು ವಿಶೇಷವಾಗಿ ಕೆಲವು ಕೋಟ್ಯಧೀಶರಿಗೆ ಮಾತ್ರ ಸೇರಿಹೋಯಿತು; ಕಷ್ಟಜೀವಿಗಳ ಕೈಹತ್ತಲಿಲ್ಲ. "ಇಂಗ್ಲೆಂಡಿನಲ್ಲಿ ಎರಡು ಪ್ರತ್ಯೇಕ ಜನಾಂಗಗಳು ವಾಸವಾಗಿವೆ" ಎಂದು ಪ್ರಸಿದ್ಧ ರಾಜನೀತಿಜ್ಞನಾದ ಡಿಸ್ರೇಲಿ ಹೇಳಿದುದು ಅಕ್ಷರಶಃ ನಿಜವಾದುದು. ಒಂದು ಕಡೆ ಐಶ್ವರ್ಯವಂತರು, ಇನ್ನೊಂದು ಕಡೆ ದರಿದ್ರರು, ಹೀಗೆ ಇಬ್ಭಾಗವಾದರು. ಇಂತಹ ಸನ್ನಿವೇಶದಲ್ಲಿ ಬಂಡವಾಳಗಾರರಿಗೂ ಕೂಲಿಗಾರರಿಗೂ ವೈಮನಸ್ಯವು ಉಂಟಾದುದೇನಾಶ್ಚರ್ಯ ?

ಬಂಡವಾಳಗಾರರು ಬಡ ಕೂಲಿಗಾರರ ಮೇಲೆ ನಡೆಸುತ್ತಿದ್ದ ದಬ್ಬಾಳಿಕೆ, ದೌರ್ಜನ್ಯ, ಕ್ರೌರ್ಯ—ಇವುಗಳನ್ನು ತಡೆಗಟ್ಟಿ ಕೂಲಿಗಾರರನ್ನು ಕಾಪಾಡಲು ಪಾರ್ಲಿಮೆಂಟ್ ಸಭೆಯು ಕೆಲವು ಕಾನೂನುಗಳನ್ನು ರಚಿಸಬೇಕಾಯಿತು. ಕೆಲಸಗಾರರಿಗೆ ವಾರಕ್ಕೊಂದು ದಿನ ವಿರಾಮ, ಒಂದು ದಿವಸಕ್ಕೆ ೮ ಘಂಟೆಗಳ ಕಾಲ ಮಾತ್ರ ಕೆಲಸ, ಗಿರಣಿಗಳ ದುಡಿತದಿಂದ ಎಳೆಯ ಮಕ್ಕಳಿಗೆ ವಿನಾಯತಿ, ಕೆಲಸಮಾಡುವಾಗ ಗಾಯಹೊಂದಿದವರಿಗೆ ಪರಿಹಾರ ರೂಪವಾಗಿ ದ್ರವ್ಯಸಹಾಯ—ಹೀಗೆ ಶ್ರಮಜೀವಿಗಳಿಗೆ ಅನೇಕ ಸೌಕರ್ಯಗಳು ಲಭಿಸಿದುವು. ಕೆಲಸಗಾರರು ಇತ್ತೀಚಿಗೆ ಸಂಘಗಳನ್ನು ಏರ್ಪಡಿಸಿಕೊಂಡು ಬಂಡವಾಳಗಾರರೊಂದಿಗೆ ಹೋರಾಡಿ ಕೂಲಿ ಮುಂತಾದ ವಿಷಯಗಳಲ್ಲಿ ಅನುಕೂಲವಾದ ಒಪ್ಪಂದಗಳನ್ನು ಮಾಡಿಕೊಳ್ಳಲು ಶಕ್ತಿ ಪಡೆದಿರುತ್ತಾರೆ. ಇಂತಹ ಕೆಲಸಗಾರರ ಸಂಘಗಳ ಸ್ಥಾಪನೆಗೆ ಸರ್ಕಾರದ ಅನುಮತಿ ದೊರೆತಿದೆ.

ಇಂಡಿಯಾ ದೇಶದಲ್ಲಿ ದಿಕ್ಕಿಲ್ಲದವರ ಪೋಷಣೆಯನ್ನು ಜನಸಾಮಾನ್ಯವೇ ವಹಿಸಿರುವುದರಿಂದ ಅನೇಕ ಕುಂದುಕೊರತೆಗಳುಂ

ಟಾಗಿವೆ.[7] ಸಮಾಜವು ಅನಾಥರಿಗಾಗಿಯೂ ಅಶಕ್ತರಿಗಾಗಿಯೂ ಏರ್ಪಡಿಸಿರುವ ದಾನಧರ್ಮಗಳು ದೃಢಕಾಯರಾದ ಸೋಮಾರಿಗಳಿಗೆ ಅನುಕೂಲವಾಗಿ ಪರಿಣಮಿಸಿವೆ. ಅಂಟುರೋಗವುಳ್ಳವರು ಜಾತ್ರೆಗಳಲ್ಲಿಯೂ ಮನೆಯ ಬಾಗಿಲುಗಳಲ್ಲಿಯೂ ಯಥೇಚ್ಛವಾಗಿ ಭಿಕ್ಷೆ ಬೇಡುತ್ತಿರುವರು. ಬ್ರಿಟನ್ನಿನಲ್ಲಿ ದರಿದ್ರರ ಪಾಲನೆಯನ್ನು ಜನಾಂಗದ ಕರ್ತವ್ಯವಾಗಿ ಭಾವಿಸಿ ಸರ್ಕಾರವೇ ವಹಿಸಿದೆ. ಇದಕ್ಕಾಗಿ ಬೇಕಾಗುವ ಹಣವನ್ನೊದಗಿಸಲು ಪ್ರತ್ಯೇಕವಾದ ಒಂದು ತೆರಿಗೆಯನ್ನು ವಿಧಾಯಕಮಾಡಿರುವರು. ೧೮೩೪ ರಲ್ಲಿ ದರಿದ್ರರ ಪಾಲನೆಗಾಗಿ ಮುಖ್ಯವಾದ ಕಾನೂನೊಂದು ರಚಿತವಾಯಿತು. ದೃಢಕಾಯರಾದವರು ಭಿಕ್ಷೆ ಬೇಡಕೂಡದೆಂದು ಇದು ನಿಷೇಧಿಸಿತು. ದಿಕ್ಕಿಲ್ಲದವರಿಗೆ ಅನ್ನ ಬಟ್ಟೆಗಳನ್ನೂ ವಸತಿಯನ್ನೂ ಸರ್ಕಾರವು ಅವಶ್ಯವಾಗಿ ಏರ್ಪಡಿಸಬೇಕಾಯಿತು. ೧೯೧೯ ರಲ್ಲಿ ಈ ಏರ್ಪಾಡುಗಳ ಮೇಲ್ವಿಚಾರಣೆಯನ್ನು ಆರೋಗ್ಯಶಾಖೆಯ ಮಂತ್ರಿಗೆ ವಹಿಸಿಕೊಟ್ಟರು.

ಇದೇ ಸಮಯದಲ್ಲಿ ಇನ್ನೂ ಅನೇಕ ಸುಧಾರಣೆಗಳನ್ನು ಸಾಧಿಸಲಾಯಿತು. ಪಟ್ಟಣಗಳಲ್ಲಿ ತೆರಿಗೆಕೊಡುವ ಪ್ರಜೆಗಳಿಂದ ಚುನಾಯಿಸಲ್ಪಟ್ಟ ಪೌರಸಭೆಗಳು ಆಡಳಿತಾಧಿಕಾರವನ್ನು ಪಡೆದುವು. ಅಂಚೆಯ ಇಲಾಖೆಯು ನಿರ್ಮಿತವಾಯಿತು. ಮಾನವ ಗೌರವಕ್ಕೆ ಒಂದು ದೊಡ್ಡ ಕಳಂಕವಾಗಿದ್ದ ಗುಲಾಮಗಿರಿಯನ್ನು ತೊಡೆದುಹಾಕಿದರು. ಆಂಗ್ಲೇಯ ಮತಸಂಸ್ಥೆಗೆ ಸೇರದಿರುವ

[7] ಇದಕ್ಕೆ ಸಂಬಂಧಪಟ್ಟ ವಿಷಯಗಳನ್ನು ಇದೇ ಪುಸ್ತಕಮಾಲೆಯಲ್ಲಿ ಶ್ರೀಮಾನ್ ಜಿ. ಹನುಮಂತರಾಯರು ಬರೆದಿರುವ "ಸಮಾಜದ ರೋಗರುಜಿನಗಳು" ಎಂಬ ಗ್ರಂಥದ ೨ನೆಯ ಅಧ್ಯಾಯದಲ್ಲಿ ನೋಡಬಹುದು.

ವರು ಪ್ರತಿನಿಧಿಸಭೆಯ ಸದಸ್ಯರಾಗದಂತೆ ತಡೆಗಟ್ಟಿದ್ದ ಟೆಸ್ಟ್ ಆ್ಯಕ್ಟನ್ನು ರದ್ದುಪಡಿಸಿ, ರೋಮನ್ ಕ್ಯಾಥೊಲಿಕ್ಕರು ಮುಂತಾದವರಿಗೆ ಪಾರ್ಲಿಮೆಂಟ್ ಸಭೆಯ ಸದಸ್ಯರಾಗುವ ಹಕ್ಕನ್ನು ಒದಗಿಸಿದರು. ಈಚೆಗೆ ಯೆಹೂದ್ಯರು, ಪಾರ್ಸಿಗಳು ಮತ್ತು ಹಿಂದೂಗಳು ಎಲ್ಲರೂ ಪಾರ್ಲಿಮೆಂಟಿನ ಸದಸ್ಯರಾಗಿ ಬರುತ್ತಿದ್ದಾರೆ.

ಹದಿನೆಂಟನೆಯ ಶತಮಾನದಲ್ಲಿ ಬ್ರಿಟನ್ನಿನ ಪೋಲೀಸ್ ಸಂಸ್ಥೆಯು ಅತಿ ದುರ್ಬಲವಾಗಿದ್ದಿತು. ಅಲ್ಪವಾದ ಅಪರಾಧಗಳಿಗೆ ಕೂಡ ಮರಣದಂಡನೆಯನ್ನು ವಿಧಿಸುವುದರಿಂದಲೂ, ಸೆರೆಮನೆಗಳನ್ನು ಭೂಲೋಕ ನರಕಗಳಂತೆ ಇಟ್ಟಿರುವುದರಿಂದಲೂ ದುಷ್ಕೃತ್ಯಗಳನ್ನು ತಡೆಗಟ್ಟಬಹುದೆಂಬ ಭಾವನೆಯಿತ್ತು. ಈಗ ಆ ಭಾವನೆ ಹೋಗಿ ಸೆರೆಮನೆಗಳು ವಾಸಯೋಗ್ಯವಾದುವು ; ಅಪರಾಧಕ್ಕೆ ತಕ್ಕ ಶಿಕ್ಷೆ ಎಂಬ ನಿಯಮವು ಏರ್ಪಟ್ಟಿತು. ಸರ್ ರಾಬರ್ಟ್ ಪೀಲ್ ಎಂಬ ಪ್ರಖ್ಯಾತ ಮಂತ್ರಿಯು ವ್ಯವಸ್ಥಿತವಾದ ನಗರರಕ್ಷಕಪಡೆಯನ್ನು ಏರ್ಪಡಿಸಿದನು. ಈ ಮಹಾಪುರುಷನು ಪರದೇಶಗಳಿಂದ ಆಮದಾಗುವ ದವಸಧಾನ್ಯಗಳ ಮೇಲಿದ್ದ ಅನ್ಯಾಯವಾದ ಸುಂಕಗಳನ್ನು ತೊಡೆದುಹಾಕಿ ಬಡಜನರ ಪ್ರೀತಿ ವಿಶ್ವಾಸಗಳಿಗೆ ಪಾತ್ರನಾದನು.

ನಾಗರಿಕ ಜೀವನದ ಮುಖ್ಯಲಕ್ಷಣವಾದ ವಿದ್ಯಾಭ್ಯಾಸದ ವಿಷಯದಲ್ಲೂ ಸರ್ಕಾರವು ಜವಾಬ್ದಾರಿಯನ್ನು ವಹಿಸಬೇಕೆಂಬ ನೀತಿಯು ಅಂಗೀಕೃತವಾಯಿತು. ೧೮೩೯ ರಲ್ಲಿ ಪ್ರಾಥಮಿಕ ಪಾಠಶಾಲೆಗಳಿಗೆ ಧನಸಹಾಯವನ್ನು ಮಾಡುವ ಪದ್ಧತಿಯು ಏರ್ಪಟ್ಟಿತು. ಹತ್ತೊಂಬತ್ತನೆಯ ಶತಮಾನದಲ್ಲಿ ನಡೆದ ಇತರ ಕಾನೂನುಗಳಿಂದ ದೇಶದ ಪ್ರತಿಯೊಬ್ಬ ಮಗುವಿಗೂ ವಿದ್ಯಾಭಾಗ್ಯವು ಸ್ವಲ್ಪಮಟ್ಟಿಗಾದರೂ ಸುಲಭವಾಗಿ ದೊರೆಯುವಂತೆ

ಸಾವಿರಾರು ಪ್ರಾಥಮಿಕ ಪಾಠಶಾಲೆಗಳು ಸ್ಥಾಪಿಸಲ್ಪಟ್ಟುವು. ಎಲ್ಲ ಮಕ್ಕಳಿಗೂ ಪ್ರಾಥಮಿಕ ಶಿಕ್ಷಣವು ಅಗತ್ಯವೆಂದು ವಿಧಾಯಕವಾಡಿ, ೧೮೯೧ ರಿಂದೀಚೆಗೆ ಅದನ್ನು ಉಚಿತವಾಗಿ ಕೊಡಲಾಗಿದೆ.

ಪ್ರಾತಿನಿಧ್ಯಪದ್ಧತಿಯಲ್ಲಿಯೂ ಪಾರ್ಲಿಮೆಂಟ್ ಸಭೆಯ ರೀತಿನೀತಿಗಳಲ್ಲಿಯೂ ೧೮೩೨ ರಿಂದೀಚೆಗೆ ಸುಮಾರು ನೂರು ವರ್ಷಗಳ ಕಾಲದಲ್ಲಿ ಏರ್ಪಟ್ಟಿರುವ ಬದಲಾವಣೆಗಳನ್ನು ಇಲ್ಲಿ ಸಂಗ್ರಹವಾಗಿ ವಿಮರ್ಶೆಮಾಡಬಹುದು. ಬ್ರಿಟನ್ನಿನ ರಾಜಕೀಯ ಯಂತ್ರದಲ್ಲಿ ಪ್ರಜಾಪ್ರತಿನಿಧಿಸಭೆಯು ಅತಿ ಮುಖ್ಯವಾದ ಭಾಗವೆಂದೂ ಆ ಸಭೆಯೇ ಮಂತ್ರಿಮಂಡಲದ ಜೀವನಾಧಾರವೆಂದೂ ಸೂಚಿಸಲಾಗಿದೆ. ಹತ್ತೊಂಬತ್ತನೆಯ ಶತಮಾನದ ಆದಿಭಾಗದಲ್ಲಿ ಪಾರ್ಲಿಮೆಂಟ್ ಸಂಸ್ಥೆಯು ಅನೇಕ ಕುಂದುಕೊರತೆಗಳಿಂದ ತುಂಬಿತ್ತು. ೫೦೦ ವರ್ಷಗಳಿಂದ ಯಾವ ವಿಧದಲ್ಲೂ ಸುಧಾರಣೆಯಾಗದೆ ಪ್ರಾತಿನಿಧ್ಯ ಪದ್ಧತಿ ಬಹಳ ಹಿಂದೆ ಬಿದ್ದುಹೋಗಿತ್ತು. ಮೂರು ಮುಖ್ಯ ದೋಷಗಳು ಅದರಲ್ಲಿ ಅಂತರ್ಗತವಾಗಿ ಬೆಳೆದು ಬಂದಿದ್ದುವು.

೧. ಪೌರರಲ್ಲನೇಕರಿಗೆ ಚುನಾಯಿಸುವ ಹಕ್ಕಿರಲಿಲ್ಲ. ಪ್ರಜಾಪ್ರಭುತ್ವವನ್ನು ಪಡೆದಿರುವ ರಾಷ್ಟ್ರಗಳಲ್ಲಿ ಎಲ್ಲ ದರ್ಜೆಯ ಪ್ರಜೆಗಳಿಗೂ ಪ್ರತಿನಿಧಿಗಳನ್ನು ಆರಿಸುವ ಹಕ್ಕಿರಬೇಕಾದುದು ಆವಶ್ಯಕ. ಆದರೆ ಬ್ರಿಟನ್ನಿನಲ್ಲಿ ಹಾಗಿರಲಿಲ್ಲ. ಪಾರ್ಲಿಮೆಂಟಿನ ಚುನಾವಣೆಗಳಲ್ಲಿ ವೋಟುಮಾಡುವ ಹಕ್ಕು ಜನಾಂಗದ ಅಲ್ಪ ಭಾಗವಾದ, ವರ್ಷಕ್ಕೆ ೪೦ ಷಿಲಿಂಗ್‌ಗಳಷ್ಟು ಕಂದಾಯ ಕೊಡುವ, ಜಮೀನುದಾರರಿಗೆ ಮಾತ್ರ ಇತ್ತು; ವ್ಯಾಪಾರಿಗಳಿಗಾಗಲಿ ಕೆಲಸಗಾರರಿಗಾಗಲಿ ಇರಲಿಲ್ಲ.

೨. ಪ್ರಜಾಪ್ರತಿನಿಧಿ ಸಭೆಯಲ್ಲಿರುವ ಸ್ಥಾನಗಳು ದೇಶದ ಎಲ್ಲ ಭಾಗಗಳಿಗೂ ಸರಿಯಾಗಿ ಹಂಚಿಕೆಯಾಗಿರಲಿಲ್ಲ. ಹತ್ತು ಹನ್ನೆರಡು ಜನರು ವಾಸಿಸುತ್ತಿದ್ದ ಪಾಳುಬಿದ್ದ ಕುಗ್ರಾಮಗಳು ಇಬ್ಬರು ಪ್ರತಿನಿಧಿಗಳನ್ನು ಕಳುಹಿಸುತ್ತಿದ್ದುವು. ಆದರೆ ಕೈಗಾರಿಕೆಯ ಪ್ರಗತಿಯಿಂದ ಜನಸಂಖ್ಯೆಯಲ್ಲಿಯೂ ಐಶ್ವರ್ಯದಲ್ಲಿಯೂ ವಿಶೇಷವಾಗಿ ಬೆಳೆದಿದ್ದ ಬರ್ಮಿಂಗ್‌ಹ್ಯಾಮ್, ಮ್ಯಾನ್‌ಚೆಸ್ಟರ್ ಮುಂತಾದ ದೊಡ್ಡ ಪಟ್ಟಣಗಳಿಗೆ ಒಬ್ಬ ಪ್ರತಿನಿಧಿಯನ್ನು ಚುನಾಯಿಸುವ ಹಕ್ಕು ಕೂಡ ಇರಲಿಲ್ಲ. ಹದಿನೆಂಟನೆಯ ಶತಮಾನದ ಕೊನೆಯ ಭಾಗದಲ್ಲಿದ್ದ ವಿಲಿಯಮ್ ಪಿಟ್ ಎಂಬ ಸುಪ್ರಸಿದ್ಧ ಮುಖ್ಯಮಂತ್ರಿ ಒಂದುಸಲ ಪ್ರತಿನಿಧಿ ಸಭೆಯನ್ನು ಕುರಿತು "ಈ ಸಭೆಯು ಯಾರ ಪ್ರತಿನಿಧಿಯೋ ತಿಳಿಯದು. ಆಂಗ್ಲೇಯ ಜನಾಂಗದ ಪ್ರತಿನಿಧಿ ಮಾತ್ರ ಅಲ್ಲ" ಎಂದನು.

೩. ಪಾರ್ಲಿಮೆಂಟ್ ಸಂಸ್ಥೆಯಲ್ಲಿ ಎಲ್ಲೆಲ್ಲೂ ಲಂಚ ರುಷವತ್ತುಗಳ ವ್ಯಾಪ್ತಿ ವಿಶೇಷವಾಗಿತ್ತು. ಚುನಾವಣೆಯ ಕಾಲದಲ್ಲಿ ವೋಟುದಾರರು ತಮ್ಮ ವೋಟುಗಳನ್ನು ಉಮೇದುವಾರರಿಗೆ ಬಹಿರಂಗವಾಗಿ ಮಾರಾಟಮಾಡುತ್ತಿದ್ದರು.[೪] ಈ ರೀತಿಯಾಗಿ ತಮ್ಮ ಪದವಿಯನ್ನು ಕೊಂಡುಕೊಂಡ ಸದಸ್ಯರು ಪ್ರತಿನಿಧಿ ಸಭೆಯನ್ನು ಸೇರಿದಮೇಲೆ ಮಂತ್ರಿಗಳಿಗೆ ತಮ್ಮ ಬೆಂಬಲವನ್ನು ಮಾರುತ್ತಿದ್ದರು. ಕೆಲವು ಸಮಾಜಗಳಲ್ಲಿ ಸುಂದರಿಯರೂ ಸದ್ಗುಣಸಂಪನ್ನೆಯರೂ ಆದ ಕನ್ನಿಕೆಯರಿಗೆ ಕೂಡ ವರದಕ್ಷಿಣೆ

---

[೪] ೧೭೯೪ ರಲ್ಲಿ ಉತ್ತರ ಇಂಗ್ಲೆಂಡಿನ ಒಂದು ಚುನಾವಣೆಯಲ್ಲಿ ಇಬ್ಬರು ಉಮೇದುವಾರರು ಒಟ್ಟು ಒಂದು ಲಕ್ಷ ಪೌಂಡುಗಳನ್ನು ವೆಚ್ಚ ಮಾಡಿದರೆಂದು ಹೇಳಲಾಗಿದೆ !

ಯಿಲ್ಲದೆ ವಿವಾಹವು ಹೇಗೆ ಅಸಾಧ್ಯವೋ ಹಾಗೆಯೇ ಹದಿನೆಂಟ ನೆಯ ಶತಮಾನದ ಕಾಮನ್ಸ್ ಸಭೆಯಲ್ಲಿ ಅತ್ಯುತ್ತಮವಾದ ನಿರ್ಣಯಗಳಿಗೆ ಕೂಡ ಲಂಚದ ಬಲವಿಲ್ಲದೆ ಬಹುಮತವು ಲಭಿಸುವುದು ಅಸಾಧ್ಯವಾಗಿತ್ತು.

ಈ ಲೋಪದೋಷಗಳಿಂದ ದೇಶದಲ್ಲಿ ಹೆಚ್ಚಾದ ಅಸಮಾಧಾನ ಉಂಟಾಯಿತು. ವಿಗ್ ಪಕ್ಷದವರ ದೃಢಪ್ರಯತ್ನಗಳಿಂದ ೧೮೩೨ ನೆಯ ಇಸವಿಯಲ್ಲಿ ಮೊದಲನೆಯ ಸುಧಾರಣಾ ಶಾಸನವನ್ನು ರಚಿಸಲಾಯಿತು. ಇದರ ಪ್ರಕಾರ ಕ್ಷೀಣದಶೆಗೆ ಇಳಿದಿದ್ದ ಸ್ಥಳಗಳ ಪ್ರಾತಿನಿಧ್ಯವನ್ನು ಕೆಲವು ಕಡೆ ಸಂಪೂರ್ಣವಾಗಿ ತೆಗೆದುಹಾಕಿ, ಇನ್ನು ಕೆಲವು ಕಡೆ ಕಡಿಮೆಮಾಡಿ, ೧೪೩ ಸದಸ್ಯ ಸ್ಥಾನಗಳನ್ನು ಉಳಿಸಿಕೊಂಡು, ಅವುಗಳನ್ನು ದೊಡ್ಡ ಪಟ್ಟಣಗಳಿಗೂ ಕೆಲವು ಗ್ರಾಮಗಳಿಗೂ ಹಂಚಿಸಲಾಯಿತು. ವೋಟುಕೊಡುವ ಹಕ್ಕನ್ನು ಗುತ್ತಿಗೆದಾರರಾದ ರೈತರಿಗೂ ಕೊಡಲಾಯಿತು. ಈ ಕಾನೂನಿಂದ ವೋಟುದಾರರ ಸಮುದಾಯಕ್ಕೆ ಸುಮಾರು ಐದು ಲಕ್ಷ ಜನರು ಹೊಸದಾಗಿ ಸೇರಿದರು. ಮಧ್ಯವರ್ಗದ ಜನರು ಹೆಚ್ಚು ಅಧಿಕಾರವನ್ನು ಪಡೆದರು. ಕೈಗಾರಿಕೆಯ ಪ್ರದೇಶಗಳಾದ ಇಂಗ್ಲೆಂಡಿನ ಉತ್ತರ ಮತ್ತು ಮಧ್ಯಭಾಗಗಳು ಪ್ರಬಲವಾದುವು. ಆದರೆ ಕೆಲಸಗಾರರಿಗೂ ಕೂಲಿಗಾರರಿಗೂ ಯಾವ ಪ್ರಯೋಜನವೂ ದೊರೆಯಲಿಲ್ಲ.

ಅನಂತರ ೧೮೬೭ ರಲ್ಲಿ, ಡಿಸ್ರೇಲಿಯ ಮಂತ್ರಿತ್ವದಲ್ಲಿ, ಎರಡನೆಯ ಸುಧಾರಣಾ ಶಾಸನವು ರಚಿಸಲ್ಪಟ್ಟಿತು. ಇದರ ಪ್ರಕಾರ ಒಟ್ಟು ಸುಮಾರು ಹತ್ತು ಲಕ್ಷ ಜನ ಕೈಕೆಲಸಗಾರರಿಗೂ ಗಣಿಗಳ ಮತ್ತು ಕಾರ್ಖಾನೆಗಳ ಕೂಲಿಗಾರರಿಗೂ ವೋಟು ಕೊಡುವ ಅಧಿಕಾರವು ದೊರೆತು ಸದಸ್ಯ ಸ್ಥಾನಗಳ ಹಂಚಿಕೆ

ಯಲ್ಲಿಯೂ ಸ್ವಲ್ಪ ಬದಲಾವಣೆಯಾಯಿತು. ೧೮೮೪ ನೆಯ ಇಸವಿಯಲ್ಲಿ ಮೂರನೆಯ ಸುಧಾರಣಾ ಶಾಸನವು ರಚನೆಯಾಯಿತು. ಇದರಿಂದ ರೈತವರ್ಗದ ಕೂಲಿಗಾರರಿಗೂ ವೋಟು ಕೊಡುವ ಹಕ್ಕು ದೊರೆತು ವೋಟರುಗಳ ಸಂಖ್ಯೆಗೆ ಇಪ್ಪತ್ತು ಲಕ್ಷ ಜನರನ್ನು ಸೇರಿಸಲಾಯಿತು.

೧೯೧೮ ರಲ್ಲಿ ರಚಿಸಲ್ಪಟ್ಟ ಕಾನೂನಿಂದ ಮುಖ್ಯವಾದ ಇನ್ನೂ ಅನೇಕ ಬದಲಾವಣೆಗಳು ಏರ್ಪಟ್ಟುವು: ೧. ಧನಿಕರು, ದರಿದ್ರರು ಎಂಬ ಭೇದವಿಲ್ಲದೆ ೨೧ ವರ್ಷಗಳಿಗೆ ಮೇಲ್ಪಟ್ಟ ವಯಸ್ಸಿನ ಗಂಡಸರೂ, ೩೦ ವರ್ಷಗಳಿಗೆ ಮೇಲ್ಪಟ್ಟ ವಯಸ್ಸಳ್ಳ ಹೆಂಗಸರೂ ವೋಟುಕೊಡುವ ಹಕ್ಕನ್ನು ಪಡೆದರು. ೧೯೨೮ ರಿಂದೀಚೆಗೆ ಹೆಂಗಸರಿಗೆ ವಿಧಿಸಿರುವ ಪರಿಮಿತಿಯನ್ನೂ ಸಹ ೨೧ ವಯಸ್ಸಿಗೇ ಇಳಿಸಿರುವರು. ಈಗ ಮಹಿಳೆಯರು ಚುನಾಯಿಸಬಹುದು, ಚುನಾವಣೆಹೊಂದಿ ಕಾಮನ್ಸ್ ಸಭೆಯ ಸದಸ್ಯರೂ ಆಗಬಹುದು. ೨. ಪ್ರಾತಿನಿಧ್ಯದ ಕ್ರಮವೂ ಪುನರ್ವ್ಯವಸ್ಥೆಯಾಗಿ, ಸುಮಾರು ೭೦,೦೦೦ ಜನರಿಗೆ ಒಬ್ಬ ಪ್ರತಿನಿಧಿಯಂತೆ ಪ್ರತಿನಿಧಿಗಳ ಸಂಖ್ಯೆಯು ವಿಧಾಯಕವಾಗಿದೆ.

೧೯೧೧ ರಲ್ಲಿ ಐದು ವರ್ಷಗಳಿಗೊಂದುಸಲ ಪ್ರಜಾಪ್ರತಿನಿಧಿ ಸಭೆಯ ಸಾರ್ವತ್ರಿಕ ಚುನಾವಣೆ ನಡೆಯಬೇಕೆಂದೂ, ಪ್ರತಿಯೊಬ್ಬ ಪ್ರತಿನಿಧಿಗೂ ವರ್ಷಕ್ಕೆ ೪೦೦ ಪೌಂಡುಗಳ ವೇತನವನ್ನು ಕೊಡಬೇಕೆಂದೂ ಕಾನೂನಾಯಿತು; ಈಗ ಮೂರು ವರ್ಷಗಳ ಹಿಂದೆ ಈ ವೇತನವನ್ನು ೬೦೦ ಪೌಂಡುಗಳಿಗೆ ಏರಿಸಲಾಯಿತು. ಕಾಮನ್ಸ್ ಸಭೆಯಲ್ಲಿ ಈಗ ೬೧೫ ಜನ ಸದಸ್ಯರಿದ್ದಾರೆ.

ಬ್ರಿಟನ್ನಿನಲ್ಲಿ ಒಂದು ಶಾಸನವನ್ನು ರಚಿಸಬೇಕಾದರೆ ರಾಜ,

ಶ್ರೀಮಂತರ ಸಭೆ, ಸಾಮಾನ್ಯರ ಸಭೆ ಈ ಮೂವರೂ ಒಪ್ಪಬೇಕು. ಪ್ರತಿನಿಧಿ ಸಭೆಯ ತೀರ್ಮಾನಕ್ಕೆ ವಿರೋಧವಾಗಿ ರಾಜನು ನಡೆಯುವುದಿಲ್ಲ. ಆದರೆ ಶ್ರೀಮಂತರ ಸಭೆಯು ೧೯೧೧ ರ ವರೆಗೆ ಅನೇಕ ವಿಷಯಗಳಲ್ಲಿ ಕಾಮನ್ಸ್ ಸಭೆಯ ನಿರ್ಣಯಗಳನ್ನು ನಿರಾಕರಿಸುತ್ತಿತ್ತು. ಈಗ ಶ್ರೀಮಂತರ ಸಭೆಯ ಅಧಿಕಾರವನ್ನು ಬಹುಮಟ್ಟಿಗೆ ಕಡಿಮೆ ಮಾಡಲಾಗಿದೆ. ಹಣದ ಸಂಬಂಧವಾದ ವಿಷಯಗಳಲ್ಲಿ ಲಾರ್ಡ್ಸ್ ಸಭೆಗೆ ಅಧಿಕಾರವೇ ಇಲ್ಲ. ಇತರ ವಿಷಯಗಳಲ್ಲಿ ಕೂಡ ಆ ಸಭೆಯು ನಿರ್ಣಯಗಳನ್ನು ಎರಡು ವರ್ಷಗಳ ಕಾಲ ತಡ ಮಾಡಬಹುದೇ ಹೊರತು ನಿರಂತರವಾಗಿ ಅಡ್ಡಿಮಾಡುವ ಹಾಗಿಲ್ಲ. ಆದುದರಿಂದ ಬ್ರಿಟನ್ನಿನಲ್ಲಿ ಶ್ರೇಷ್ಠಾಧಿಕಾರವು ಪ್ರತಿನಿಧಿ ಸಭೆಗೂ, ಅದರ ಮೂಲಕ ಪ್ರಜೆಗಳಿಗೂ, ಸೇರಿರುವುದೆಂದು ವ್ಯಕ್ತವಾಗುವುದು. ಬ್ರಿಟಿಷರ ರಾಜಕೀಯ ಸಂಸ್ಥೆಗಳಲ್ಲಿ ಯಾವ ದೋಷವೂ ಇಲ್ಲವೆಂದು ಹೇಳಲು ಸಾಧ್ಯವಿಲ್ಲದಿದ್ದರೂ,[9] ಅವು ಪ್ರಜಾಪ್ರಭುತ್ವಕ್ಕೆ ಆವಶ್ಯಕವಾದ ಅನೇಕ ಮುಖ್ಯ ಲಕ್ಷಣಗಳನ್ನು ಪಡೆದಿವೆಯೆಂದು ನಿಸ್ಸಂಕೋಚವಾಗಿ ಹೇಳಬಹುದು.

ಬ್ರಿಟಿಷರು ತಮ್ಮ ದೇಶದಲ್ಲಿ ಸಾಧಿಸಿಕೊಂಡ ಸ್ವರಾಜ್ಯಭಾಗ್ಯವನ್ನು ಶೀಘ್ರದಲ್ಲಿಯೇ ತಮ್ಮ ಅಧೀನದಲ್ಲಿದ್ದ ಇತರ ದೇಶಗಳಿಗೂ ಒದಗಿಸಿಕೊಡಬೇಕಾಯಿತು.

ಪಾರ್ಲಿಮೆಂಟಿನ ಮೇಲ್ಮೆಯು ಸ್ಥಿರವಾಗಿ ಸ್ಥಾಪನೆಯಾದ ಇನ್ನೂರು ವರ್ಷಗಳ ಕಾಲದಲ್ಲಿಯೇ ಬ್ರಿಟನ್ ರಾಜ್ಯವು ಪ್ರಪಂಚದ ನಾನಾ ಭಾಗಗಳಲ್ಲಿರುವ ವಿಸ್ತಾರವಾದ ಪ್ರದೇಶ

---

[9] ಕೆಳಗೆ ೬೦ ಮತ್ತು ೬೧ ನೆಯ ಪುಟಗಳನ್ನು ನೋಡಿ.

ಗಳನ್ನೊಳಕೊಂಡ ಮಹಾ ಚಕ್ರಾಧಿಪತ್ಯವಾಗಿ ಪರಿಣಮಿಸಿತು. ೧೭೬೦ ರಲ್ಲಿ ಕೆನಡ ದೇಶವನ್ನು ಫ್ರೆಂಚರಿಂದ ಜಯಿಸಿಕೊಳ್ಳಲಾಯಿತು. ಆಸ್ಟ್ರೇಲಿಯಾ ಮತ್ತು ನ್ಯೂಜೀಲೆಂಡ್ ದೇಶಗಳಲ್ಲಿ ಬ್ರಿಟಿಷರ ಕಾಲೊನಿಗಳು ಹದಿನೆಂಟನೆಯ ಶತಮಾನದ ಕೊನೆಯ ಭಾಗದಲ್ಲಿ ಏರ್ಪಟ್ಟುವು. ಆಫ್ರಿಕಾ ಖಂಡದ ದಕ್ಷಿಣ ಭೂಶಿರವನ್ನು ಬ್ರಿಟಿಷರು ಫ್ರಾನ್ಸಿನ ಮಹಾಕ್ರಾಂತಿಯ ಕಾಲದಲ್ಲಿ ಆಕ್ರಮಿಸಿಕೊಂಡರು. ಈ ಕಾಲೊನಿಗಳೆಲ್ಲವೂ ಹತ್ತೊಂಬತ್ತನೆಯ ಶತಮಾನದ ಉದ್ದಕ್ಕೂ ಜನಸಂಖ್ಯೆಯಲ್ಲೂ ಐಶ್ವರ್ಯದಲ್ಲೂ ಬೆಳೆಯುತ್ತ ಬಂದು ಸ್ವರಾಜ್ಯ ಭಾಗ್ಯವನ್ನು ಕೆಲವು ಸುಲಭವಾಗಿಯೂ, ಇನ್ನು ಕೆಲವು ಸಂಗ್ರಾಮ ಶಕ್ತಿಯಿಂದಲೂ, ಸಾಧಿಸಿಕೊಂಡುವು. ಕೆನಡ ೧೮೬೭ ರಲ್ಲಿಯೂ, ಆಸ್ಟ್ರೇಲಿಯಾ ೧೯೦೦ ರಲ್ಲಿಯೂ, ನ್ಯೂಜೀಲೆಂಡ್ ೧೯೦೫ ರಲ್ಲಿಯೂ, ದಕ್ಷಿಣ ಆಫ್ರಿಕಾ ೧೯೦೯ ರಲ್ಲಿಯೂ, ಡೊಮಿನಿಯನ್‌ಗಳೆಂಬ ಸ್ವಾತಂತ್ರ್ಯವುಳ್ಳ ಆಧಿಪತ್ಯಗಳಾದುವು. ಅನೇಕ ಶತಮಾನಗಳಿಂದ ಕ್ಷಾಮ, ಅನಾಯಕತ್ವ, ಆಡಳಿತದ ಅವ್ಯವಸ್ಥೆ ಇವುಗಳಿಂದ ನರಳುತ್ತಿದ್ದ ಐರ್ಲೆಂಡ್ ದೇಶದಲ್ಲಿ ಬಹುಭಾಗವು ೧೯೨೧ ರಲ್ಲಿ ಸ್ವತಂತ್ರ ರಾಷ್ಟ್ರವಾಯಿತು. ಆದರೆ ಐರ್ಲೆಂಡಿನ ಉತ್ತರಭಾಗವು ಇನ್ನೂ ಬ್ರಿಟಿಷ್ ರಾಷ್ಟ್ರಕ್ಕೆ ಸೇರಿರುವುದು ಹೋರಾಟಕ್ಕೆ ಆಸ್ಪದವಾಗಿದೆ. ಹತ್ತೊಂಬತ್ತನೆಯ ಶತಮಾನದಲ್ಲಿ ಬ್ರಿಟಿಷರು ಇಂಡಿಯಾ ದೇಶದಲ್ಲೆಲ್ಲ ತಮ್ಮ ಆಧಿಪತ್ಯವನ್ನು ಸ್ಥಾಪಿಸಿದರು. ಇಂಡಿಯಾ ದೇಶದಲ್ಲಿ ಕೂಡ ಸ್ವರಾಜ್ಯ ಸ್ಥಾಪನೆ ಮಾಡಬೇಡವೇ? ಎಂದು ಮಾಡುವುದು? ಯಾವ ರೀತಿಯಲ್ಲಿ? ಎಂಬ ಪ್ರಶ್ನೆಗಳು ಈಗ ಭಾರತೀಯರನ್ನೂ ಬ್ರಿಟಿಷರನ್ನೂ ಬಾಧಿಸುತ್ತಿವೆ.

ಮಹಾ ಯುದ್ಧದನಂತರ ಡೊಮಿನಿಯನ್‌ಗಳೆಲ್ಲವೂ ಪೂರ್ಣ ಸ್ವಾತಂತ್ರ್ಯವನ್ನೂ ತಾಯಿನಾಡಾದ ಬ್ರಿಟನ್ನಿನೊಡನೆ ಸಮಾನ ಗೌರವವನ್ನೂ ಪಡೆದುವು. ೧೯೩೧ರಲ್ಲಿ ಏರ್ಪಟ್ಟ ವೆಸ್ಟ್ ಮಿನ್ಸ್ಟರ್ ಕಾನೂನಿನಲ್ಲಿ ಈ ಅಂಶವು ವಿಶದವಾಯಿತು. ನೂರಾರು ವರ್ಷಗಳಿಂದ ಬ್ರಿಟಿಷ್ ಸಾಮ್ರಾಜ್ಯವಾಗಿ ಬೆಳೆದು ಬಂದಿದ್ದುದು ಈಗ ಬಹುಮಟ್ಟಿಗೆ ಪ್ರೀತಿ ವಿಶ್ವಾಸಗಳಿಂದ ಒಟ್ಟು ಸೇರಿರುವ ರಾಷ್ಟ್ರಗಳ ಸಮುದಾಯವಾಗಿದೆ.

---

## ೮. ಇಂದಿನ ಸಮಸ್ಯೆಗಳು

ಇಂದಿನ ಪ್ರಪಂಚದಲ್ಲಿ ಆರ್ಥಿಕ ಲಾಭವನ್ನು ಸಂಪಾದಿಸುವುದು ಜನರ ಮುಖ್ಯ ಆಕಾಂಕ್ಷೆಯಾಗಿದೆ. ಕೈಗಾರಿಕೆಯ ಕ್ರಾಂತಿಯಿಂದೀಚೆಗೆ ಸ್ವತಂತ್ರ ರಾಷ್ಟ್ರಗಳೆಲ್ಲವೂ ಆರ್ಥಿಕಾಭಿವೃದ್ಧಿಯನ್ನೇ ತಮ್ಮ ರಾಷ್ಟ್ರೀಯ ಮತ್ತು ಅಂತರ್ರಾಷ್ಟ್ರೀಯ ನೀತಿಗಳ ಮೊದಲನೆಯ ಗುರಿಯಾಗಿ ಇಟ್ಟುಕೊಂಡಿವೆ. ಕಾರ್ಖಾನೆಗಳಿಗಾಗಿ ಸಾಮಾನುಗಳನ್ನು ಸುಲಭವಾಗಿ ಕೊಳ್ಳುವುದಕ್ಕೂ ತಯಾರಿಸಿದ ಸಾಮಾನುಗಳನ್ನು ಹೆಚ್ಚಿನ ಲಾಭಕ್ಕಾಗಿ ಮಾರುವುದಕ್ಕೂ ಬೇಕಾದ ಅನುಕೂಲಗಳು, ಬಂಡವಾಳವನ್ನು ಹೊರದೇಶಗಳಲ್ಲಿ ಲಾಭಕರವಾಗಿ ಉಪಯೋಗಿಸಲು ಅವಕಾಶ, ಮಿತಿಮೀರಿ ಹೆಚ್ಚುತ್ತಿರುವ ಜನಸಂಖ್ಯೆಯ ವಾಸಕ್ಕಾಗಿ ಹೊಸ ಪ್ರದೇಶಗಳು—ಇವೆಲ್ಲವೂ ಕೈಗಾರಿಕೆಯ ವೃತ್ತಿಯನ್ನು ಅವಲಂಬಿಸಿರುವ ರಾಷ್ಟ್ರಗಳಿಗೆ ಅತ್ಯಾವಶ್ಯಕವಾಗಿರುವುವು. ಆದುದ

ರಿಂದ ಮುಖ್ಯ ರಾಷ್ಟ್ರಗಳೆಲ್ಲವೂ ಕಾಲೊನಿಗಳನ್ನೂ ಪರಾಧೀನ ಪ್ರದೇಶಗಳನ್ನೂ ಸಂಪಾದಿಸುವ ಪ್ರಯತ್ನಗಳಲ್ಲಿ ಪೈಪೋಟಿ ಯಿಂದ ಮುಂದುವರಿದು, ಪ್ರಪಂಚದಲ್ಲಿರುವ ಹಿಂದುಳಿದ ಪ್ರದೇಶಗಳಲ್ಲಿ ಪ್ರತಿಯೊಂದೂ ಯಾವುದಾದರೊಂದು ಪ್ರಬಲ ರಾಷ್ಟ್ರದ ಅಧೀನದಲ್ಲಿ ಸೇರಿಹೋಗಿದೆ. ಆದುದರಿಂದ ಈಗ ಒದಗಿರುವ ಸ್ಥಿತಿಯಲ್ಲಿ ಒಂದು ಪ್ರಬಲ ದೇಶವು ಇನ್ನು ಹೆಚ್ಚಾಗಿ ಕಾಲೊನಿಗಳನ್ನಾಗಲಿ ಆಶ್ರಿತ ಪ್ರದೇಶಗಳನ್ನಾಗಲಿ ಇಚ್ಛಿಸಿದರೆ ಅದು ಮತ್ತೊಂದು ರಾಷ್ಟ್ರದಿಂದಲೇ ಅವುಗಳನ್ನು ಕಿತ್ತುಕೊಳ್ಳಬೇಕೇ ಹೊರತು ಬೇರೆ ಮಾರ್ಗವಿಲ್ಲ. ಈ ರೀತಿ ಯಾಗಿ ಇಂದಿನ ನಾಗರಿಕ ಪ್ರಪಂಚವು ಪರಸ್ಪರ ವಿರುದ್ಧವಾದ ಆಸೆಗಳುಳ್ಳ ರಾಷ್ಟ್ರಗಳಿಂದ ಕೂಡಿದೆ. ಸಮಾಜದಲ್ಲಿ ಧನಿಕ ರಿಗೂ ದರಿದ್ರರಿಗೂ ಹೇಗೆ ವ್ಯತ್ಯಾಸವು ಒದಗಿದೆಯೋ ಹಾಗೆಯೇ ಅಂತರ್ರಾಷ್ಟ್ರೀಯ ಪ್ರಪಂಚದಲ್ಲೂ ಸಹ ತೃಪ್ತಿಯುಳ್ಳ ದೇಶಗಳಿಗೂ ತೃಪ್ತಿಯಿಲ್ಲದ ದೇಶಗಳಿಗೂ ಎದುರಾಟವು ಏರ್ಪಟ್ಟಿದೆ.

ಆರ್ಥಿಕ ಬಲವನ್ನು ವೃದ್ಧಿಗೊಳಿಸಿ ತಮ್ಮ ಗುರಿಯನ್ನು ಸಾಧಿಸುವುದಕ್ಕೆ ಅನೇಕ ಸರ್ಕಾರಗಳು ತಮ್ಮ ಶಕ್ತಿಯನ್ನು ಬಹಳವಾಗಿ ಹೆಚ್ಚಿಸಿಕೊಂಡಿವೆ. ಪೌರರ ಹಿತಸಾಧನೆಗಾ ಗಿಯೇ ರಾಷ್ಟ್ರವಿರುವುದು ಎಂಬ ಭಾವನೆ ಹೋಗಿ, ರಾಷ್ಟ್ರ ಸೇವೆಯಲ್ಲಿ ಪೌರರೆಲ್ಲರೂ ನಿರತರಾಗಿದ್ದು ತಮ್ಮ ಹಿತಗಳೆಲ್ಲ ವನ್ನೂ ಸರ್ಕಾರದ ಮೇಲ್ಮೆಗೆ ಅಧೀನಪಡಿಸಬೇಕೆಂಬ ಭಾವನೆ ಏರ್ಪಟ್ಟಿದೆ. ಅಂತರ್ರಾಷ್ಟ್ರೀಯ ಜೀವನದಲ್ಲಿ ಪರಸ್ಪರ ಅಪನಂ ಬಿಕೆ, ಭಯ ಮತ್ತು ಅಸೂಯೆ ತುಂಬಿರುವುದರಿಂದ ರಾಷ್ಟ್ರಗಳೆ ಲ್ಲವೂ ಸಂಗ್ರಾಮ ನೀತಿಯನ್ನು ಬಲಪಡಿಸಿಕೊಂಡು ಸದಾ

ಯುದ್ಧಕ್ಕೆ ಸಿದ್ಧವಾಗಿವೆ. ಅಕ್ರಮರೀತಿಯಲ್ಲಿಯೂ ಕೂಡ ಲಾಭ ಸಂಪಾದಿಸುವುದಕ್ಕೆ ಅನೇಕ ರಾಷ್ಟ್ರಗಳು ಸಿದ್ಧವಾಗಿರುವುದರಿಂದ ಒಪ್ಪಂದಗಳನ್ನು ಕೇವಲ ಕಾಗದದ ಚೂರುಗಳನ್ನಾಗಿ ಭಾವಿಸಿ ಅವುಗಳನ್ನು ನಿರಾಕರಿಸುವುದು ಸರ್ವಸಾಮಾನ್ಯವಾಗಿದೆ. ಬಲಹೀನವಾಗಿರುವ ದೇಶಗಳು ಹುಲಿ ಸಿಂಹಗಳ ಮಧ್ಯೆ ಕಟ್ಟಿರುವ ಕುರಿಗಳಂತೆ ಕ್ಷಣವನ್ನು ಯುಗವಾಗಿ ಭಾವಿಸಿ ದಿಗಿಲಿನಿಂದ ಜೀವಿಸುತ್ತಿವೆ. ಯುದ್ಧ ಬರುವುದೆಂಬ ಭೀತಿ, ಯುದ್ಧದ ಅನುಭವಗಳು, ಯುದ್ಧದ ದುಷ್ಪರಿಣಾಮಗಳು, ಒಂದಾದಮೇಲೊಂದಾಗಿ ನಾಗರಿಕ ಜೀವನವನ್ನು ಅನರ್ಥಪಡಿಸುತ್ತಿವೆ. ವೈಜ್ಞಾನಿಕ ಪ್ರಗತಿಯ ಫಲವಾಗಿ ಯುದ್ಧ ಪ್ರಯತ್ನಗಳು ಅತಿ ಘೋರವಾದ ರೂಪಗಳನ್ನು ತಾಳುತ್ತಿವೆ. ಬಾಂಬುಗಳಿಂದಲೂ ವಿಷವಾಯುಗಳಿಂದಲೂ ಹೆಂಗಸರು ಮಕ್ಕಳನ್ನು ನಾಶಮಾಡುವುದು ಸರ್ವಸಾಧಾರಣವಾಗಿದೆ.

೧೯೧೪ ರಿಂದ ೧೯೧೮ ರ ವರೆಗೆ ನಡೆದ ಮಹಾಯುದ್ಧದ ನಂತರ ರಷ್ಯ, ಜರ್ಮನಿ, ಇಟಲಿ ಮುಂತಾದ ದೇಶಗಳಲ್ಲಿ ಸರ್ವಾಧಿಕಾರಿಗಳು ತಮ್ಮ ಆಧಿಪತ್ಯವನ್ನು ಸ್ಥಾಪಿಸಿಕೊಂಡಿದ್ದಾರೆ. ಸರ್ವಾಧಿಕಾರವು ಚರಿತ್ರೆಯಲ್ಲಿ ಹೊಸದಲ್ಲ. ೨೫೦೦ ವರ್ಷಗಳ ಹಿಂದೆ ಪ್ರಾಚೀನ ಗ್ರೀಕರ ನಗರ ರಾಷ್ಟ್ರಗಳಲ್ಲಿ ಜನಸಾಮಾನ್ಯವನ್ನು ಅನಾಯಕತ್ವದ ತೊಂದರೆಗಳಿಂದ ರಕ್ಷಿಸುವುದಾಗಿ ಹೇಳಿಕೊಂಡು ಏಕಾಧಿಕಾರಿಗಳು ಆಗಾಗ ಏಳುತ್ತಿದ್ದರು. ಇದೇ ರೀತಿಯಲ್ಲಿ ಪ್ರಜೆಗಳನ್ನು ಉದ್ಧಾರಮಾಡಿ ದೇಶದ ಕೀರ್ತಿಯನ್ನೂ ಯಶಸ್ಸನ್ನೂ ವೃದ್ಧಿಗೊಳಿಸುವುದಾಗಿ ಹೇಳಿ ಇಟಲಿಯಲ್ಲಿ ಮುಸ್ಸೋಲಿನಿ ಎಂಬವರೂ ಜರ್ಮನಿಯಲ್ಲಿ ಹಿಟ್ಲರ್ ಎಂಬವರೂ ಈಗ ಏಕಾಧಿಕಾರಿಗಳಾಗಿ ನಿಂತಿದ್ದಾರೆ. ಇಂತಹ

ಸರ್ವಾಧಿಕಾರಿಗಳು ಪಾರ್ಲಿಮೆಂಟ್ ಸಂಸ್ಥೆಯನ್ನು ಪರಿಹಾಸ್ಯ ಮಾಡುವರು. ಪ್ರಜಾಧಿಪತ್ಯದ ತತ್ವವನ್ನು ಮಾತ್ರವಲ್ಲದೆ ವ್ಯಕ್ತಿ ಸ್ವಾತಂತ್ರ್ಯವನ್ನೂ ತಿರಸ್ಕರಿಸುತ್ತಿರುವರು. ಇವರ ಆಳಿಕೆಯಲ್ಲಿ ರಾಜಕೀಯ ಪಕ್ಷಗಳ ಪದ್ಧತಿಗೆ ಅವಕಾಶವಿಲ್ಲ. ಸರ್ವಾಧಿಕಾರಿಯ ಪಕ್ಷವೊಂದಕ್ಕೆ ಮಾತ್ರವೇ ದೇಶದಲ್ಲಿ ಎಡೆಯಿರುವುದು. ಗುಪ್ತ ಪೋಲೀಸ್ ಪಡೆಗಳೂ ಸುದ್ದಿಗಾರರೂ ನಿತ್ಯ ಜೀವನದಲ್ಲಿ ಮುಖ್ಯಪಾತ್ರವನ್ನು ವಹಿಸಿರುವರು. ಸರ್ಕಾರವನ್ನು ಎದುರಿಸುವವರಿಗೂ ಟೀಕಿಸುವವರಿಗೂ ದೇಶಭ್ರಷ್ಟತೆಯೋ ಮರಣದಂಡನೆಯೋ ಪ್ರಾಪ್ತಿಯಾಗುವುದು. ವೈಯಕ್ತಿಕ ಸ್ವಾತಂತ್ರ್ಯ, ರಾಜಕೀಯ ಹಕ್ಕುಗಳು, ಪ್ರತಿನಿಧಿ ಸಂಸ್ಥೆಗಳು—ಇವೆಲ್ಲವೂ ಮುಳುಗಿಹೋಗಿವೆ.

ಈ ಕ್ರಮಗೆಟ್ಟ ಪ್ರಪಂಚದಲ್ಲಿ ಪ್ರಜಾಪ್ರಭುತ್ವದ ಕಾಂತಿ ಮಬ್ಬಾಗುತ್ತಿದೆ. ಹತ್ತೊಂಬತ್ತನೆಯ ಶತಮಾನದಲ್ಲಿ ಆಂಗ್ಲೇಯರು ಬೆಳೆಸಿದ ಪ್ರಜಾಪ್ರಭುತ್ವವು ದೋಷರಹಿತವಾಗಿದೆಯೆಂದು ಹೇಳಲಾಗದು. ಈಗಿರುವ ಪಾರ್ಲಿಮೆಂಟ್ ಸಂಸ್ಥೆಯಿಂದ ಸಾಮಾಜಿಕ ಮತ್ತು ರಾಜಕೀಯ ಪ್ರಗತಿಯನ್ನು ಜಾಗ್ರತೆಯಾಗಿ ಸಾಧಿಸಲಾಗುವುದಿಲ್ಲ. ಉಗ್ರರೀತಿಯಲ್ಲಿ ವಿಮರ್ಶಿಸುವವರು ಇದು ನಿಜವಾಗಿ ಪ್ರಜಾಪ್ರಭುತ್ವವೇ ಅಲ್ಲವೆಂದೂ ಹೇಳಬಹುದು. ಪೌರರು ಚುನಾವಣೆಗಳಲ್ಲಿ ವೋಟು ಮಾಡಿದರೂ ಮಾಡಬಹುದು, ಬಿಟ್ಟರೂ ಬಿಡಬಹುದು; ಒಂದು ಚುನಾವಣೆಯಾದಮೇಲೆ ಇನ್ನೊಂದು ಬರುವವರೆಗೂ ಐದು ವರ್ಷಗಳ ಕಾಲ ತಮ್ಮ ರಾಜಕೀಯ ಬಾಧ್ಯತೆಗಳನ್ನು ಮರೆತು ಸುಖವಾಗಿರಬಹುದು. ಇಂಗ್ಲೆಂಡಿಗೂ ನ್ಯೂಜೀಲೆಂಡಿಗೂ ನಡೆಯುವ ರಗ್ಬಿ ಫುಟ್‌ಬಾಲ್ ಪಂದ್ಯಗಳಲ್ಲಿಯೂ ಹಾಲಿವುಡ್ಡಿ

ನಿಂದ ಬರುವ ಸಿನಿಮಾ ನಟಿಗಳ ದರ್ಶನದಲ್ಲಿಯೂ ಜನರಿಗಿರುವ ಉತ್ಸಾಹದಲ್ಲಿ ನಾಲ್ಕನೆಯ ಒಂದು ಭಾಗ ಕೂಡ ಕೆಲವುವೇಳೆ ಪಾರ್ಲಿಮೆಂಟಿನ ಚುನಾವಣೆಯ ವಿಷಯದಲ್ಲಿ ಕಂಡುಬರುವು ದಿಲ್ಲ. ಪ್ರಜೆಗಳೆಲ್ಲರೂ ರಾಜಕೀಯ ಸಮಸ್ಯೆಗಳಲ್ಲಿ ನಿಜವಾದ ಮತ್ತು ನಿರಂತರವಾದ ಕುತೂಹಲವುಳ್ಳವರಾಗಿದ್ದರೂ ಕೂಡ ಅವರು ತೊಡಕಾದ ಸಾರ್ವಜನಿಕ ವಿಷಯಗಳನ್ನು ಗ್ರಹಿಸಿ ಅವು ಗಳನ್ನು ತೀರ್ಮಾನಿಸುವ ಯೋಗ್ಯತೆಯನ್ನು ಪಡೆದಿರುವರೇ? ಭಾಷಣಗಳಲ್ಲಿಯೋ ಲೇಖನಗಳಲ್ಲಿಯೋ ಅಡಗಿರುವ ಅಭಿಪ್ರಾ ಯಗಳನ್ನು ವಿವೇಚನೆಯಿಲ್ಲದೆ ಅಂಗೀಕರಿಸುವ ಎಷ್ಟುಮಂದಿ ಪೌರರಿಲ್ಲ? ೭೦,೦೦೦ ಜನ ವೋಟರುಗಳ ಪರವಾಗಿ ಕಾಮನ್ಸ್ ಸಭೆಯಲ್ಲಿ ಕುಳಿತಿರುವ ಸದಸ್ಯರೊಬ್ಬರು ನಿಜವಾಗಿ ಯಾರ ಪ್ರತಿನಿಧಿಯಾಗಿದ್ದಾರೆ? ಬಂಡವಾಳಗಾರರು, ಕೂಲಿ ಕೆಲಸ ಗಾರರು, ಲಕ್ಷಾಧಿಪತಿಗಳು, ಭಿಕ್ಷುಕರು, ಸಾಧುಗಳು, ತುಂಟರು, ಗಂಡಸರು, ಹೆಂಗಸರು—ಎಲ್ಲರೂ ವೋಟುದಾರರ ಸಮೂಹದಲ್ಲಿ ರುವರು. ಒಬ್ಬ ಸದಸ್ಯರನ್ನು ಚುನಾಯಿಸಿದ ಬಹುಪಕ್ಷದ ವೋಟ ರುಗಳಲ್ಲೇ ಆರ್ಥಿಕ, ಸಾಮಾಜಿಕ ಮತ್ತು ಅಂತರ್ರಾಷ್ಟ್ರೀಯ ವಿಚಾರಗಳಲ್ಲಿ ತೀವ್ರವಾದ ಭಿನ್ನಾಭಿಪ್ರಾಯಗಳಿರಬಹುದು. ಇವರು ಚುನಾಯಿಸಿದ ಸದಸ್ಯರು ಯಾವ ಗುಂಪಿನ ಅಭಿಪ್ರಾ ಯಗಳನ್ನು ಪ್ರತಿಬಿಂಬಿಸಬೇಕು? ಕೈಗಾರಿಕೆಯ ಕ್ರಾಂತಿಯ ಫಲವಾಗಿ ಬಂಡವಾಳಗಾರರಿಗೂ ಕೂಲಿಗಾರರಿಗೂ ಉಂಟಾಗಿ ರುವ ಹೋರಾಟವನ್ನು ಪರಿಹರಿಸಲು ಪ್ರಜಾಹಿತವನ್ನು ಕೋರುವ ಪಾರ್ಲಿಮೆಂಟ್ ಸಭೆಯು ಏಕೆ ಯಶಸ್ವಿಯಾಗ ಲಿಲ್ಲ? ಪಕ್ಷಪದ್ಧತಿಯಲ್ಲಿಕೂಡ ದೋಷಗಳಿವೆ. ಅಧಿಕಾರ ಪ್ರೇಮವಿಲ್ಲದೆ ಕೇವಲ ದೇಶಾಭಿಮಾನದಿಂದಲೇ ಎಲ್ಲ ಪಕ್ಷ

ಗಳೂ ಅವುಗಳ ಮುಂದಾಳುಗಳೂ ಸತತವಾಗಿ ಶ್ರಮಿಸುವ ರೆಂದು ಹೇಗೆ ಹೇಳುವುದು ?

ಒಂದು ವಿಷಯ ಮಾತ್ರ ಸ್ಪಷ್ಟವಾಗಿದೆ. ಇಂದಿನ ಪ್ರಪಂಚ ದಲ್ಲಿ ಏಕಾಧಿಪತ್ಯವೂ ಪ್ರಜಾಪ್ರಭುತ್ವವೂ ಏಕಕಾಲದಲ್ಲಿ ನಿಶ್ಚಲವಾದ ಸ್ನೇಹದಿಂದ ಇರುವುದು ಅಸಾಧ್ಯ. ಪ್ರತಿಸ್ಪರ್ಧಿ ಯನ್ನು ಸಹಿಸದೆ ಇರುವುದು ಸರ್ವಾಧಿಕಾರಿಗಳ ಮುಖ್ಯಗುಣ. ಪ್ರಜೆಗಳ ಮುಂದೆ ತಮ್ಮ ಅಧಿಕಾರವನ್ನು ಸಮರ್ಥಿಸುವುದಕ್ಕಾಗಿ ಅವರು ಇತರ ವಿಧವಾದ ರಾಜಕೀಯ ವ್ಯವಸ್ಥೆಯುಳ್ಳ ದೇಶ ಗಳೊಡನೆ ಯುದ್ಧ ಹೂಡಬೇಕಾಗುವುದು. ರಾಜಿ ಎಂಬುದು ಸರ್ವಾಧಿಕಾರಿಗಳ ತತ್ವದಲ್ಲಿ ಇಲ್ಲವೇ ಇಲ್ಲ. ಆದುದರಿಂದ ಹೀಗೆ ಸಂಭವಿಸುವ ವೈಮನಸ್ಯವು ಹೊಡೆದಾಟದಿಂದಲೇ ಯಾವುದಾದರೊಂದು ವಿಧವಾಗಿ ತೀರ್ಮಾನವಾಗಬೇಕು.

ಪ್ರಜಾಪ್ರಭುತ್ವದ ದಿನ ತುಂಬಿತೇ ? ಮಾನವನು ಇನ್ನು ಮೇಲೆ ಏಕಾಧಿಕಾರಿಗಳ ಅಧೀನನಾಗಿರಬೇಕೇ ? ಹಾಗಾಗು ವುದಿಲ್ಲವೆಂದು ನಿರೀಕ್ಷಿಸೋಣ. ಏಕೆಂದರೆ, ಪ್ರಪಂಚದ ಚರಿತ್ರೆ ಯಲ್ಲಿ ಸರ್ವಾಧಿಕಾರವು ಸುಮಾರು ಒಂದು ಪುರುಷಾಯುಸ್ಸಿ ಗಿಂತ ಹೆಚ್ಚಾಗಿ ಎಂದಿಗೂ ಉಳಿದಿಲ್ಲ. ನಾಗರಿಕ ಜನಾಂಗಗಳಿಗೆ ಸ್ವಾತಂತ್ರ್ಯವೇ ಜೀವನದ ಉಸಿರು. ಆದುದರಿಂದ ಸ್ವಲ್ಪಕಾಲ ಕ್ಕಿಂತ ಹೆಚ್ಚಾಗಿ ಅವರು ಅಧೀನತೆಯನ್ನು ಸಹಿಸಲಾರರು. ಅಂತರ್ಯುದ್ಧದ ಮತ್ತು ಕ್ರಾಂತಿಯ ಪರಿಣಾಮವಾಗಿ ಏಕಾಧಿ ಕಾರಿಗಳು ಏಳಬಹುದು. ಆದರೆ ದೇಶದಲ್ಲಿ ಉಂಟಾಗಿದ್ದ ಅನಾ ಯಕತ್ವವನ್ನು ಅವರು ಕೊನೆಗಾಣಿಸಿದ ಮೇಲೆ, ಅವರ ಅಧಿ ಕಾರ ಮುಂದುವರಿಯುವುದಕ್ಕೆ ಸೂಕ್ತವಾದ ಯಾವ ಕಾರ ಣವೂ ಉಳಿಯುವುದಿಲ್ಲ.

ಚರಿತ್ರೆಯ ವಿಚಾರಕನು ಭವಿಷ್ಯ ಹೇಳುವವನಲ್ಲ. ಆದರೂ ಒಂದು ವಿಷಯವನ್ನು ಮಾತ್ರ ಸೂಚಿಸಬಹುದು. ಕೊನೆಯಲ್ಲಿ ಪ್ರಜಾಪ್ರಭುತ್ವವೇ ಜಯಶಾಲಿಯಾಗಲು ಕಾರಣವಿದೆ. ಏಕೆಂದರೆ ಇತರ ರಾಜಕೀಯ ವ್ಯವಸ್ಥೆಗಳಿಗಿಂತ ಮಿಗಿಲಾಗಿ ಅದು ಸ್ವಾತಂತ್ರ್ಯವನ್ನು ಮೂಲಾಧಾರವಾಗಿ ಮಾಡಿಕೊಂಡಿದೆ. ಆದರೆ ಹತ್ತೊಂಬತ್ತನೆಯ ಶತಮಾನದ ಪ್ರಜಾಪ್ರಭುತ್ವ ಸಂಸ್ಥೆಗಳು ಹಿಂದುಬಿದ್ದಿವೆ. ಅವು ಈಗಿನ ಕಾಲಕ್ಕೆ ತಕ್ಕಂತೆ ಕೆಲವು ಮುಖ್ಯ ಮಾರ್ಪಾಡುಗಳನ್ನು ಹೊಂದಬೇಕಾಗಿದೆ. ಆರ್ಥಿಕ ವಿಷಯಗಳಲ್ಲಿ ಈಗಿನ ಸರ್ಕಾರವು ಹಿಂದಿನ ಕಾಲಕ್ಕಿಂತ ಹೆಚ್ಚಾಗಿ ಅಧಿಕಾರವನ್ನು ಪಡೆಯಬೇಕಾದುದು ಆವಶ್ಯಕ. ಪ್ರಾತಿನಿಧ್ಯದ ಪದ್ಧತಿಯನ್ನು ಸುಧಾರಿಸಿ ಜನಾಭಿಪ್ರಾಯದ ಮುಖ್ಯಾಂಶಗಳನ್ನೆಲ್ಲ ಪ್ರತಿನಿಧಿಗಳು ಪ್ರತಿಬಿಂಬಿಸುವ ಹಾಗೆ ಮಾಡಬೇಕು. ಪ್ರಜಾಧಿಪತ್ಯವು ಯಶಸ್ವಿಯಾಗಿ ನಡೆಯಬೇಕಾದರೆ ಪೌರರಿಗೆ ರಾಜಕೀಯ ವಿಷಯಗಳಲ್ಲಿ ನಿರಂತರವಾದ ಆಸಕ್ತಿ ಇರಬೇಕು. ಎರಡು ವಿಷಯಗಳಲ್ಲಿ ಅವರ ಸ್ಥಿತಿ ಉತ್ತಮವಾದ ಹೊರತು ಅವರಿಗೆ ಉತ್ಸಾಹ ಹುಟ್ಟುವುದು ಕಷ್ಟ. ೧. ಜನಸಾಮಾನ್ಯದ ಆರ್ಥಿಕ ಸ್ಥಿತಿ ಉತ್ತಮಗೊಳ್ಳಬೇಕು. ಪ್ರಜಾವರ್ಗಗಳಲ್ಲಿ ಆರ್ಥಿಕ ವ್ಯತ್ಯಾಸಗಳು ಹೆಚ್ಚಾಗಿರಬಾರದು. ರಾಜಕೀಯ ಸಮಾನತೆಯ ಜೊತೆಯಲ್ಲಿ ಆರ್ಥಿಕ ಸಮಾನತೆಯೂ ಸಾಧ್ಯವಾದಷ್ಟು ಇರಬೇಕು. ೨. ಸಾಮಾನ್ಯ ಜನರಲ್ಲಿ ವಿದ್ಯಾಭ್ಯಾಸದ ಮಟ್ಟವು ಏರಬೇಕು. ಅನಕ್ಷರಸ್ಥರಾದ ಪೌರರು ಉತ್ತಮರೀತಿಯಲ್ಲಿ ದೇಶಸೇವೆಮಾಡಲು ಅರ್ಹರಲ್ಲ. ಜನರಿಗೆ ರಾಜಕೀಯ ಮತ್ತು ಆರ್ಥಿಕ ವಿಷಯಗಳಲ್ಲಿ ವ್ಯವಹಾರ ಜ್ಞಾನವು ಹೆಚ್ಚಿದಷ್ಟೂ ದೇಶಸೌಖ್ಯವು ಹೆಚ್ಚುವುದು.

ಇಷ್ಟೇ ಅಲ್ಲ. ವೈಜ್ಞಾನಿಕ ಪ್ರಗತಿಯ ಫಲವಾಗಿ ಪ್ರಪಂಚದಲ್ಲಿರುವ ಎಲ್ಲ ದೇಶಗಳಿಗೂ ಅನ್ಯೋನ್ಯ ಸಂಬಂಧವು ಏರ್ಪಟ್ಟಿದೆ. ಯಾವುದಾದರೊಂದು ಜನಾಂಗವು ಪ್ರತ್ಯೇಕವಾಗಿ ಜೀವಿಸಬೇಕೆಂದು ಅಪೇಕ್ಷಿಸಿದರೂ ಕೂಡ ಅದು ಅಸಾಧ್ಯ. ಆದುದರಿಂದ ಮಾನವರಲ್ಲಿ ರಾಷ್ಟ್ರೀಯ ಭಾವನೆ ಮಾತ್ರವಲ್ಲದೆ ವಿಶಾಲವಾದ ಅಂತರ್ರಾಷ್ಟ್ರೀಯ ಭಾವನೆಯೂ ಬೆಳೆದು ಬರಬೇಕು. ಕುಟುಂಬದ ಹಿತಕ್ಕಾಗಿ ಸ್ವಾರ್ಥವನ್ನು ತ್ಯಾಗ ಮಾಡುತ್ತೇವೆ. ಗ್ರಾಮದ ಹಿತಕ್ಕಾಗಿ ಕುಟುಂಬದ ಸೌಖ್ಯವನ್ನು ಅಧೀನಗೊಳಿಸುತ್ತೇವೆ. ದೇಶದ ಅಭಿವೃದ್ಧಿಯನ್ನು ಯೋಚಿಸುವಾಗ ನಮ್ಮ ಗ್ರಾಮ, ನಮ್ಮ ಪಟ್ಟಣ ಎಂಬ ಸಂಕುಚಿತ ಮನೋಭಾವಕ್ಕೆ ಎಡೆಗೊಡುವುದಕ್ಕಾಗುವುದಿಲ್ಲ. ಅದೇ ರೀತಿಯಾಗಿ ಅಖಿಲ ಮಾನವ ಪ್ರಪಂಚದ ಸುಖಶಾಂತಿಗಳನ್ನು ಬಯಸುವಾಗ ದೇಶಗಳಲ್ಲಿ ಹೆಚ್ಚು, ಕಡಿಮೆ, ಶತ್ರು, ಮಿತ್ರ ಎಂಬ ಭಾವನೆಗಳಿಗೆ ಅವಕಾಶವಿಲ್ಲ. "ಮಾನವನ ಪ್ರತಿನಿಧಿ ಸಭೆ ಮತ್ತು ಸಂಯುಕ್ತ ಪ್ರಪಂಚ" ಎಂದು ಒಬ್ಬ ಆಂಗ್ಲೇಯ ಕವಿಯು ವರ್ಣಿಸಿರುವಂತೆ ಎಲ್ಲ ದೇಶಗಳನ್ನೂ ಸದಸ್ಯರನ್ನಾಗಿ ಒಳಕೊಂಡ ಒಂದು ಸಂಯುಕ್ತ ಪ್ರತಿನಿಧಿ ಸಂಸ್ಥೆಯಿಂದಲೇ ಪ್ರಪಂಚಕ್ಕೆ ಶಾಂತಿ ಸೌಖ್ಯಗಳು ಲಭಿಸಬೇಕು. ಈಗ ಇದು ಬರಿಯ ಕನಸಾಗಿದೆ. ಇದನ್ನು ಕಾರ್ಯರೂಪಕ್ಕೆ ತರಬೇಕಾದರೆ ನಾಗರಿಕ ಜನರೆಲ್ಲರೂ ಪ್ರಜಾಪ್ರಭುತ್ವ ತತ್ವದಲ್ಲಿ ಪೂರ್ಣ ನಂಬಿಕೆಯನ್ನಿಟ್ಟು ಶಾಂತಿ ಮತ್ತು ಭಾವಶುದ್ಧಿಯಿಂದ ವರ್ತಿಸುವುದು ಆವಶ್ಯಕ.